
ಮರೆಯಲ್ಲಿರುವ ಮಹಾನುಭಾವರು ಗ್ರಂಥಮಾಲೆ

ಇತಿಹಾಸ ಸಂಶೋಧಕ

# ಹುಲ್ಲೂರು ಶ್ರೀನಿವಾಸ ಜೋಯಿಸರು



ಡಾ. ಬಿ. ರಾಜಶೇಖರಪ್ಪ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ

ಮರೆಯಲ್ಲಿರುವ ಮಹಾನುಭಾವರು ಗ್ರಂಥಮಾಲೆ

ಇತಿಹಾಸ ಸಂಶೋಧಕ

# ಹುಲ್ಲೂರು ಶ್ರೀನಿವಾಸ ಜೋಯಿಸರು

[ಜೀವನ ಮತ್ತು ಸಾಧನೆ]

ಸಂಪಾದಕರು

ಡಾ. ಬಿ. ರಾಜಶೇಖರಪ್ಪ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

**Itihasa Samshodhaka Hulluru Srinivasa Joyisaru :** A Biographical Sketch by: Dr. B. Rajashekharappa, **Prof.** of Kannada & Principal **(Retd.), 2nd Cross,** (West), **JCR Extension,** Chitradurga - 577 501, Published by **Ashoka N. Chalavadi,** Administrative Officer, Kannada Book Authority, J.C. Road, Bangalore - 560 002

© : ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ

Pages : xxxiv + 70

Price : Rs. 40/-

First Edition : 2008

Copies : 1,000

ISBN : 81-7713-255-5

ಪ್ರಕಾಶಕರು
**ಅಶೋಕ್ ಎನ್. ಚಲವಾದಿ**
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು-೫೬೦ ೦೦೨

ಪುಟಗಳು : xxxiv + ೭೦
ಬೆಲೆ : ರೂ. ೪೦/-
ಪ್ರಥಮ ಮುದ್ರಣ : ೨೦೦೮
ಪ್ರತಿಗಳು : ೧೦೦೦
ಕರಡು ತಿದ್ದಿದವರು: ಲೇಖಕರು
ಅಕ್ಷರ ಜೋಡಣೆ: ಸಿ.ಬಿ. ನಾಗಭೂಷಣ, ಚಿತ್ರದುರ್ಗ
ರಕ್ಷಾಪುಟ ವಿನ್ಯಾಸ: ಪುಂಡಲೀಕ ಕಲ್ಲಿಗನೂರ, ಬೆಂಗಳೂರು

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ, ರಾಘವನಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
✆ : ೨೬೭೫೭೧೫

# ಒಂದು ದಿನ ಒಳಕೊಂಡಿತ್ತು ನೋಡಾ

ನಮ್ಮ ಕಣ್ಣೆದುರಿಗೆ ಎರಡು ವಾಸ್ತವಗಳಿವೆ. ಒಂದು - ಜೀವಾಂಗಿಕ ಸಂಸ್ಕೃತಿಯ ಸ್ಮೃತಿ ಸಂಚಯಗಳಂತಿರುವ ಜನಪದ ಪುರಾಣ ಕಥನೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಬಾಯಿಯಿಂದ ಬಾಯಿಗೆ ನೆನಪಿನ ವಾಹಕದಲ್ಲಿ ಸೃಜನಶೀಲವಾಗಿ ಕಾಪಾಡಿಕೊಂಡು ಬಂದ ಮೌಖಿಕ ಜಗತ್ತು. ಇದು ಈಗಾಗಲೇ ನಮ್ಮ ನಡುವೆ ಕಣ್ಮರೆಯಾಗುತ್ತಿರುವ ಜಗತ್ತು. ಇನ್ನೊಂದು - ಬದುಕಿನ ಎಲ್ಲ ಜ್ಞಾನಶಾಖೆಗಳ ಮಾಹಿತಿ ಭಂಡಾರವನ್ನೂ ತನ್ನ ಸೂಚ್ಯಂಕದಲ್ಲಿ ದಾಖಲಿಸಿಕೊಳ್ಳುತ್ತಾ, ಮನುಷ್ಯನ ಸೃಜನಶ್ರಮದ ಕಾಲದೀರ್ಘತೆಯನ್ನು ತನ್ನ ಅಣುಕ್ಷಣಗಳ ಹ್ರಸ್ವತೆಗೆ ತಂದಿಟ್ಟುಕೊಂಡು ದೈತ್ಯಸಾಧನೆಯನ್ನು ಮೆರೆಯುತ್ತಿರುವ ಗಣಕ ಜಗತ್ತು. ಇದು ದಿನದಿಂದ ದಿನಕ್ಕೆ ಗಣನೆಗೆ ಸಿಗದ ವೇಗದಲ್ಲಿ ಚಲಿಸುತ್ತಿರುವ ಜ್ಞಾನ ಜಗತ್ತು.

ಮೌಖಿಕ ಸೃಜನ ಪ್ರತಿಭೆಯ ಪ್ರತೀಕ ಸಿರಿಯಜ್ಜಿ. ಗಣಕ ಜ್ಞಾನದ ವೇಗದ ಪ್ರತೀಕ ಶಕುಂತಲಾದೇವಿ. ಸಿರಿಯಜ್ಜಿಯದು ಕೇವಲ ನೆನಪಲ್ಲ; ಅದೊಂದು ಸೃಜನ ಪ್ರತಿಭೆ. ಅದು ಭೂತವಲ್ಲ, ವರ್ತಮಾನ. ಪರಂಪರೆಯನ್ನು ಅರಿಗಿಸಿಕೊಂಡು ಸಮಕಾಲೀನವಾದ ಸೃಜನೆ. ಅದು ಕೇವಲ ವ್ಯಕ್ತಿಯಲ್ಲ; ಅದೊಂದು ಸಮುದಾಯ ಪ್ರಜ್ಞೆ. ಶಕುಂತಲಾದೇವಿಯವರ ಜ್ಞಾನ ಶಕ್ತಿ ೨X೨=೪ರ ಲೆಕ್ಕಾಚಾರದ ಅಗಾಧ ನೆನಪಿನ ಕೋಶ. ಇದು ತಾಂತ್ರಿಕ ನೈಪುಣ್ಯ ಹಾಗೂ ಪರಿಕಲ್ಪನೆಗಳ ಅದ್ಭುತ ಸಮೀಕರಣದ ಜ್ಞಾನಶಕ್ತಿ. ಇಲ್ಲಿ ಪರಿಭಾವಿಸಬೇಕಾದ ಬಹುಮುಖ್ಯ ವಿಚಾರವೆಂದರೆ, ಮೊದಲನೆಯದು ಭಾವಪ್ರತಿಭೆಯ ಸೃಜನೆಯ ಫಲ. ಎರಡನೆಯದು ಬುದ್ಧಿ ಸಂಚಯದ ತರ್ಕದ ಫಲ. ಇಂದು ಈ ಎರಡು ವಾಸ್ತವಗಳ ನಡುವೆ ಅಕ್ಷರ ಲೋಕದ ಚಲನೆ ಹಲವು ಸವಾಲುಗಳಿಗೆ ಹಲವು ಬಿಕ್ಕಟ್ಟುಗಳಿಗೆ ಮುಖಾಮುಖಿಯಾಗಿದೆ.

ಜ್ಞಾನದ ಶೋಧ ವಿಸ್ತರಣೆಗೊಂಡಂತೆ, ಬಹಳಷ್ಟು ಆತಂಕಗಳು ನಿತ್ಯದ ಭಯಗಳಾಗಿ ನಮ್ಮೆದುರು ಬಿಚ್ಚಿಕೊಳ್ಳುತ್ತಿವೆ. ಮಾಹಿತಿ ತಂತ್ರಜ್ಞಾನದ ವೇಗದಾಳಿಗೆ ಸಿಲುಕಿ ಜಗತ್ತಿನ ಬಹುತೇಕ ಭಾಷೆಗಳ ಕಣ್ಮರೆಯಾಗುವ ಆತಂಕವನ್ನು ಹಲವು ಜನ ಭಾಷಾತಜ್ಞರು

ಗಂಭೀರ ಸಮಸ್ಯೆಯಾಗಿ ಜಗತ್ತಿನ ಮುಂದಿಟ್ಟಿದ್ದಾರೆ. ಈ ಆತಂಕದ ಆವರಣದಲ್ಲಿ ನಮ್ಮ ಕನ್ನಡ ಭಾಷೆಯ ಸ್ಥಿತಿ ಏನು? ಇದು ಇಂದು ನಾವು ಕೇಳಿಕೊಳ್ಳಬೇಕಾದ ಪ್ರಮುಖ ಪ್ರಶ್ನೆ. ಭಾಷೆ ಎಂಬುದು ಕೇವಲ ಸಂವಹನ ಸಂಕೇತವಲ್ಲ. ಅದು ಸಮುದಾಯದ ಸಂಸ್ಕೃತಿ, ನಾಗರಿಕತೆ, ಸೃಜನಶಕ್ತಿ, ಬುದ್ಧಿಭಾವಗಳು ಸಂಲಗ್ನಗೊಂಡ ಬದುಕಿನ ಪ್ರತೀಕ. ಅದು ಸಮುದಾಯದ ಉಸಿರು. ಇಂಥ ಭಾಷೆಯ ಅಳಿಯುವಿಕೆ ಎಂದರೆ ಬದುಕಿನ ಎಲ್ಲ ಕ್ಷೇತ್ರಗಳ ಪ್ರಮುಖ ವ್ಯಾವಹಾರಿಕತೆಯಿಂದ ಆ ಭಾಷೆಯನ್ನು ಹೊರಗಿಡುವುದು; ಆಡಳಿತ ಶಿಕ್ಷಣ ಸಂಪರ್ಕ ಮಾಧ್ಯಮ ಸ್ಥಾನದಿಂದ ಆ ಭಾಷೆಯನ್ನು ಕಣ್ಮರೆ ಮಾಡುವುದು. ಇದರ ಅರ್ಥ ಬಹುದೊಡ್ಡ ಭಾಷಿಕ ಸಮುದಾಯವೊಂದನ್ನು ಜ್ಞಾನದ ಬೆಳಕಿನಿಂದ ದೂರವಿಸುವುದು. ಜಾಗತಿಕ ಬದುಕಿನ ಸುಖ ಸವಲತ್ತುಗಳಿಂದ ವಂಚಿಸುವುದು. ಇಂಥ ಹಲವು ಆಘಾತಕಾರೀ ಆತಂಕಗಳ ವಾತಾವರಣದಲ್ಲಿ ಇಂದು ಕನ್ನಡ ಅಕ್ಷರ ಲೋಕ ತನ್ನ ಗತಿಯನ್ನು ಕಂಡುಕೊಳ್ಳಬೇಕಾಗಿದೆ.

ಸಾವಿರಾರು ವರ್ಷಗಳ ಇತಿಹಾಸದಲ್ಲಿ ಸಾಂಸ್ಕೃತಿಕ, ರಾಜಕೀಯ ದಬ್ಬಾಳಿಕೆಯನ್ನು ಸಮರ್ಥವಾಗಿ ಎದುರಿಸಿ, ಬೆಳೆದುಬಂದ ಕನ್ನಡ ಭಾಷೆಗೆ, ಕನ್ನಡ ಬದುಕಿಗೆ ಆತಂಕ ಆಘಾತಗಳು ಮೈಯುಂಡ ಬಾಳು. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳಿಂದ ಮೊದಲ್ಗೊಂಡು ಹಿತಮಿತ ಮೃದುವಚನ, ನುಡಿ ಟರಡಥಣ, ಮಾತು ಜ್ಯೋತಿರ್ಲಿಂಗ, ಹಲಗೆ ಬಳಪದ ಪಿಡಿಯದೊಂದಗ್ಗಳಿಕೆಯಲ್ಲಿ ಒಲಿದಂತೆ ಹಾಡಿದ ಹಲವು ಕಾಲದ ಹಲವು ನಿಟ್ಟಿನ ನುಡಿಸಾಧಕರ ಮಾರ್ಗದೇಸಿಗಳ ಸಮಾಹಿತದಲ್ಲಿ ತನಗೆದುರಾದ ಆತಂಕ ಆಘಾತಗಳನ್ನು ಅರಗಿಸಿಕೊಂಡು ಕನ್ನಡದ ದೀಪ ಬೆಳಗಿದೆ. ಇದರರ್ಥ ಆಯಾ ಕಾಲದ ಕನ್ನಡ ಸಮುದಾಯ ತನ್ನ ಕಾಲದ ಸವಾಲುಗಳಿಗೆ ತಕ್ಕ ವಿವೇಕ ತೋರಿ ಸೃಜನಶೀಲವಾಗಿದೆ. ಆದರೆ, ಇಂದಿನ ಆತಂಕ ಹಿಂದೆಂದಿನ ಆಕ್ರಮಣಗಳಿಗಿಂತ ಭಯಾನಕವಾದುದು. ಈ ಭಯಾನಕತೆಯನ್ನು ಎದುರಿಸುವ ಹಾಗೂ ಆರೋಗ್ಯಕರವಾಗಿ ಅದನ್ನು ಆರಗಿಸಿಕೊಂಡು ಬೆಳೆಯುವ ಸತ್ವಶಕ್ತಿ ಭಾಷೆಗಿದ್ದರೂ, ಭಾಷಿಕ ಸಮುದಾಯದ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುವ ಸಂಗತಿ. ಈ ಇಚ್ಛಾಶಕ್ತಿ ಹೊರಗಿನಿಂದ ಆಮದು ಮಾಡಿಕೊಳ್ಳುವ ಸರಕಲ್ಲ; ಬದುಕನ್ನು ರೂಪಿಸುವ ಪ್ರಭುತ್ವ ಹಾಗೂ ಪ್ರಭುತ್ವವನ್ನು ಆಯ್ಕೆ ಮಾಡಿಕೊಳ್ಳುವ ಜನಸಮುದಾಯ ದೊಳಗೆ ಅರಿವೇ ಗುರುವಾಗಿ ಮೂಡಬೇಕಾದ ಪ್ರಜ್ಞಾವಿಶೇಷ. ಈ ಪ್ರಜ್ಞಾ ವಿಶೇಷ ಸಿರಿಯಜ್ಜಿಯ ಸಮುದಾಯವನ್ನು ಕಡೆಗಣಿಸದೆ ಸಮೀಕರಣದ ಜ್ಞಾನಶಕ್ತಿಗೆ ಮಣೆ ಹಾಕಬೇಕಿದೆ. ಸಾಮಾಜಿಕ ನ್ಯಾಯವನ್ನು ಸಂಸ್ಕೃತಿಯ ರುಚಿ ವಿಶೇಷತೆಯನ್ನು ಪರಿಭಾವನೆಗೆ ತಂದುಕೊಂಡು ಜಂಗಮಶೀಲವಾಗಬೇಕಿದೆ. ಅತಿರೇಕಗಳ ಅವಾಂತರದಿಂದ ಸಮುದಾಯವನ್ನು ಕಾಪಾಡುವ ಶಕ್ತಿ ಅಕ್ಷರ ಲೋಕಕ್ಕಿದೆ. ಆದ್ದರಿಂದ

ಅಕ್ಷರ ಲೋಕ ಸೃಜನಶೀಲತೆಯನ್ನು ಎಚ್ಚರದಿಂದ ಉಳಿಸಿಕೊಳ್ಳುತ್ತಾ, ಜ್ಞಾನದ ಹೊಸ ವಿಸ್ತರಣೆಗೆ ತೆರೆದುಕೊಳ್ಳುವ ಅಗತ್ಯವಿದೆ.

ವಿಜ್ಞಾನದ ಹೊಸ ಹೊಸ ಆವಿಷ್ಕಾರಗಳಿಗೆ ಪ್ರತಿಸ್ಪಂದಿಸುತ್ತಾ ಬೆಳೆಯುವ ಭಾಷೆಯ ಸೃಜನಶೀಲತೆ ಪ್ರಕಾಶಿಸುತ್ತದೆ. ವೈಜ್ಞಾನಿಕ ವಿಚಾರ ಸೃಜನಶೀಲಭಾವದಲ್ಲಿ ಅಭಿವ್ಯಕ್ತಗೊಂಡಾಗ ಅದಕ್ಕೊಂದು ಮಾನವೀಯತೆಯ ಪ್ರಭೆ ಪ್ರಾಪ್ತವಾಗುತ್ತದೆ. ಹೊಸಕಾಲದ ಸಂವೇದನೆಗಳಿಗೆ ವೈಜ್ಞಾನಿಕ ವಿಚಾಗಳಿಗೆ ತಾತ್ವಿಕ ತರ್ಕದೀಪ್ತಿಗಳಿಗೆ ತೆರೆದುಕೊಳ್ಳುವ ನಮ್ಯಗುಣ ಜೀವಂತ ಭಾಷೆಯೊಂದರ ದೊಡ್ಡಶಕ್ತಿ. ಕಾಲದ ಅಗತ್ಯಗಳಿಗೆ ಸ್ಪಂದಿಸಬಲ್ಲ ನಮ್ಯಗುಣ ಕನ್ನಡ ಭಾಷೆಯ ದೊಡ್ಡ ಶಕ್ತಿ. ಜಾಗತಿಕ ಮಟ್ಟದಲ್ಲಿ ವಿಸ್ತರಣೆಗೊಳ್ಳುತ್ತಿರುವ ಎಲ್ಲ ಜ್ಞಾನಶಾಖೆಗಳ ಪಾರಿಭಾಷಿಕ ಶಬ್ದ ಸಂಪತ್ತನ್ನು ಸ್ವೀಕರಿಸುತ್ತಾ, ತನ್ನ ಕ್ಷೇಣ ವಿಷಯಜ್ಞಾನವನ್ನು ಅರಗಿಸಿಕೊಂಡು ಕನ್ನಡ ಭಾಷೆಬೆಳೆಯ ಬೇಕಿದೆ. ಕನ್ನಡದ ಜ್ಞಾನ ಚೇತನಗಳ ಇಚ್ಛಾಶಕ್ತಿ ಈ ದಿಸೆಯಲ್ಲಿ ಹೆಚ್ಚು ಕ್ರಿಯಾಶೀಲವಾಗ ಬೇಕಾದ ಅಗತ್ಯವಿದೆ. ಅಲ್ಲಮನ ಒಂದು ವಚನ ಹೀಗಿದೆ -

ಹಿಂದಣ ಅನಂತವನು ಮುಂದಣ ಅನಂತವನು
ಒಂದು ದಿನ ಒಳಕೊಂಡಿತ್ತು ನೋಡಾ
ಒಂದು ದಿನವನೊಳಕೊಂಡು ಮಾತಾಡುವ ಮಹಾಂತನ
ಕಂಡು ಬಲ್ಲವರಾರಯ್ಯ
ಆದ್ಯರು ವೇದ್ಯರು ಅನಂತ ಹಿರಿಯರು ಕಾಲದಂತುವನರಿಯದೆ
ಅಂತೆ ಹೋದರು ಕಾಣಾ ಗುಹೇಶ್ವರ

ಜಗತ್ತಿನ ಜ್ಞಾನಕ್ಕೆ ಹಿಂದಣ ಪರಂಪರೆಯ ಅಪಾರತೆ ಇದೆ. ಮುಂದಣ ಭವಿಷ್ಯದ ಅನಂತತೆ ಇದೆ. ವರ್ತಮಾನದಲ್ಲಿ ಈ ಎರಡೂ ಸುಲಗ್ನಗೊಂಡ ಭಾವದಲ್ಲಿ ಸೃಜನಶೀಲವಾದಾಗ ಅದು ಅಳಿಯದ ಮಾತಾಗುತ್ತದೆ. ಆ ಮಾತು ಜ್ಯೋತಿರ್ಲಿಂಗ ರೂಪಿಯಾಗುತ್ತದೆ. ನಿಜವಾದ ಪುಸ್ತಕಗಳು ಮಾತು ಜ್ಯೋತಿರ್ಲಿಂಗವಾದ ಸಂಸ್ಕೃತಿ ಸಂಚಯದ ಜ್ಞಾನದೀವಿಗೆಗಳು. ಜ್ಞಾನವನ್ನು ಕೇವಲ ಪಂಡಿತಮಾನ್ಯರ ಸ್ವತ್ತಾಗಿಸದೆ, ಜನಸಾಮಾನ್ಯರ ಬದುಕಾಗಿಸುವುದು ಅಕ್ಷರಲೋಕದ ಗುರಿಯಾಗಬೇಕು. ಜ್ಞಾನ ಪರಂಪರೆಗಳನ್ನು ಶೋಧನೆಗೆ ಹಚ್ಚುತ್ತಾ. ಆತ್ಮಾವಲೋಕನದ ಒಳಮುಖೀದರ್ಶನ ದೀಪ್ತಿಯಲ್ಲಿ ಸತ್ಯವನ್ನು ಮನಗಾಣಿಸಬೇಕು. ಕಂಡ ಸತ್ಯದ ಬೆಳಕಿನಲ್ಲಿ ವರ್ತಮಾನದ ದಾರಿ ತೆರೆದು ಭವಿಷ್ಯದ ಮುಂಗಾಣ್ಕೆಯಿಂದ ಗುರಿಯ ಕಡೆ ಹೆಜ್ಜೆ ಹಾಕಬೇಕು. ಇದು ಬದುಕಿನ ಗತಿಶೀಲ ಗುಣವಾದಾಗ ಅತಿರೇಕಗಳಿಗೆ ಅವಕಾಶ ವಿರುವುದಿಲ್ಲ.

ಇದು ಜಾಗತೀಕರಣದ ಯುಗ. ಈ ಪ್ರಕ್ರಿಯೆಯ ವೇಗ ಅಪರಿಮಿತವಾದಷ್ಟು ಅಪಾಯಕಾರಿಯೂ ಆಗಿದೆ. ಜಾಗತೀಕರಣದ ದಾಳಿಯಲ್ಲಿ ಏಕಸಂಸ್ಕೃತಿ, ಏಕಜೀವನ ಶೈಲಿ, ಏಕಭಾಷಾಧಿಪತ್ಯಕ್ಕೆ ಜಗತ್ತನ್ನು ಒಳಗುಮಾಡುವುದರಿಂದ ಆಗುವ ದುಷ್ಪರಿಣಾಮವೆಂದರೆ, ಜೀವನ ವೈವಿಧ್ಯತೆಯ ಬಹುಮುಖೀ ಸಂಸ್ಕೃತಿಗಳ ಸಾವು. ಅತಿರೇಕದ ವೈಪರೀತ್ಯಕ್ಕೆ ಒಳಗಾಗಿ ಬದುಕನ್ನು ಬರಡಾಗಿಸುವ ಹಾಗೂ ಅಸಮಾನತೆಯ ಪ್ರಮಾಣವನ್ನು ಅಗಾಧವಾಗಿಸುವ ಅಪಾಯದಿಂದ ಈ ಸಮುದಾಯಗಳನ್ನು ರಕ್ಷಿಸುವ ಅಗತ್ಯ ಇಂದಿನ ತುರ್ತು. ಈ ತುರ್ತಿನ ಸನ್ನಿವೇಶದಲ್ಲಿ ವಿವೇಕದ ದಾರಿ ತೋರಿ ಅತಿರೇಕಕ್ಕೆ ಕಡಿವಾಣವನ್ನು ಹಾಕಿ ಸಂಸ್ಕೃತಿಯನ್ನು ಬದುಕನ್ನು ಮಾನವ ಕೋಟಿಯನ್ನು ಸಂರಕ್ಷಿಸಬಲ್ಲ ಶಕ್ತಿ ಸಂಪನ್ನತೆಯಿಂದ ಹೊಳೆವ ಅಕ್ಷರ ಲೋಕ ಜಗತ್ತಿನ ವೈವಿಧ್ಯತೆಯನ್ನು ಸಂರಕ್ಷಿಸುತ್ತದೆ. ವೈವಿಧ್ಯತೆಗಳೊಳಗಿನ ಸೃಜನಶೀಲತೆಯನ್ನು ಬೆಳೆಸುತ್ತದೆ.

ಪುಸ್ತಕಗಳು ಅಕ್ಷರ ಲೋಕದ ಮೂರ್ತರೂಪಗಳು; ಅಮೂರ್ತವಾದ ಜ್ಞಾನಸಂಪತ್ತನ್ನು ಧಾರಣ ಮಾಡಿಕೊಂಡ ಶಬ್ದರೂಪಗಳು. ಶಬ್ದ ಕೇವಲ ಅರ್ಥದ ಅಭಿಧಾವೃತ್ತಿಯಲ್ಲಿ ನೆಲೆ ನಿಲ್ಲುವುದಿಲ್ಲ. ವ್ಯಂಜನಾ ವ್ಯಾಪಾರದಲ್ಲಿ ಅನುಭಾವಿತ ವಾಗುವುದು. ಈ ವ್ಯಂಜನಾ ವ್ಯಾಪಾರ ಬುದ್ಧಿ ಭಾವಗಳ ವಿದ್ಯುದಾಲಿಂಗನ ಪ್ರಭೆಯ ಫಲಿತ. ಹೀಗಾಗಿ ಪುಸ್ತಕಗಳು ಸಂಸ್ಕೃತಿ ನಾಗರೀಕತೆಗಳ ಸಂಚಯಿತ ಫಲವಾದಷ್ಟೇ ಸಂಸ್ಕೃತಿಯನ್ನು ನಿರಂತರವಾಗಿ ಉಜ್ಜೀವಿಸುವ ಧಾತು ದ್ರವ್ಯಗಳು.

ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕದಾದ್ಯಂತ ಪುಸ್ತಕ ಸಂಸ್ಕೃತಿಯನ್ನು ಬೆಳೆಸುವ ಸದುದ್ದೇಶದಿಂದ ಪ್ರಾರಂಭವಾದ ಒಂದು ಸಂಸ್ಕೃತಿ ಕೇಂದ್ರ. ವಾಚನಾಭಿರುಚಿ ಯನ್ನು ಬೆಳೆಸುವುದು ಹಾಗೂ ಪುಸ್ತಕೋದ್ಯಮವನ್ನು ಆರೋಗ್ಯಕರವಾಗಿ ಪೋಷಿಸುವುದು ಪ್ರಾಧಿಕಾರದ ಹೊಣೆಯಾಗಿರುತ್ತದೆ. ಅದಕ್ಕಾಗಿ ಹಲವು ರೀತಿಯ ಕಾರ್ಯಯೋಜನೆ ಗಳನ್ನು ಪ್ರಾಧಿಕಾರ ರೂಪಿಸಿಕೊಂಡಿದೆ. ಯುವ ಸಮುದಾಯದಲ್ಲಿ ವಾಚನಾಭಿರುಚಿ ಹೆಚ್ಚಿಸಲು ವಾಚನಾಭಿರುಚಿ ಕಮ್ಮಟಗಳನ್ನು ನಡೆಸುತ್ತಿದೆ. ಪ್ರಕಾಶಕರು, ಲೇಖಕರು ಹಾಗೂ ಓದುಗರ ನಡುವೆ ಚಿಂತನ ಕಮ್ಮಟಗಳನ್ನು ನಡೆಸುತ್ತಿದೆ. ಇವುಗಳ ಜೊತೆಗೆ ಎರಡನೆಯ ಆದ್ಯತೆಯಾಗಿ ಪುಸ್ತಕ ಪ್ರಕಟಣೆಯ ಜವಾಬ್ದಾರಿಯನ್ನು ನಿರ್ವಹಿಸುತ್ತಿದೆ. ಶೈಕ್ಷಣಿಕ ಶಿಸ್ತಿನಲ್ಲಿ ಅಧ್ಯಯನ ಮಾಡುವ ಪರಾಮರ್ಶನ ಗ್ರಂಥಗಳ ಜೊತೆಗೆ ಜನಸಾಮಾನ್ಯರಿಗೆ ಅಗತ್ಯವಾಗಿ ಬೇಕಾದ ಅರಿವನ್ನು ಹಂಚುವ ಪುಸ್ತಕಗಳ ಪ್ರಕಟಣೆಯೂ ಪ್ರಾಧಿಕಾರದ ಉದ್ದೇಶವಾಗಿದೆ.

ಇತಿಹಾಸದ ಪುಟಗಳಲ್ಲಿ ಚಿತ್ರದುರ್ಗಕ್ಕೆ ವಿಭಿನ್ನವೂ ವಿಶಿಷ್ಟವೂ ಆದ ಸ್ಥಾನವಿದೆ.

ಮದಕರಿನಾಯಕ ಒನಕೆ ಓಬವ್ವರ ಸಾಹಸಗಾಥೆಗಳು ಅಲ್ಲಿನ ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದ ಜೀವನಗಾಥೆಗಳಾಗಿವೆ. ಕರ್ನಾಟಕದ ಜಾನಪದ ಜಗತ್ತಿನಲ್ಲೂ ಚಿತ್ರದುರ್ಗದ ಕೊಡುಗೆ ಅಪಾರವೂ ಅನನ್ಯವೂ ಆದುದು. ಹಲವು ಬುಡಕಟ್ಟು ಸಮುದಾಯಗಳಿಗೆ ನೆಲೆಬೀಡಾಗಿರುವ ಈ ನೆಲದ ಗಂಧ ಸಾಂಸ್ಕೃತಿಕ ಬಹುತ್ವದ ಅರ್ದ್ರಭಾವದಲ್ಲಿ ಅರಳಿರುವುದು; ಆಧುನಿಕತೆಗೆ ಮುಖಮಾಡಿಯೂ ಗ್ರಾಮೀಣ ಸೊಗಡನ್ನು ಇಂದಿಗೂ ತನ್ನ ಬದುಕಿನ ಬನಿಯಾಗಿಸಿಕೊಂಡಿರುವುದು ಇಂಥ ನೆಲದ ಬದುಕಿನ ಜಾನಪದ ಸಂಪದವನ್ನು ದಾಖಲಿಸಹೊರಟರೆ ಒಂದು ಹಳ್ಳಿಗೆ ಕನಿಷ್ಠ ಹತ್ತು ವಕ್ತೃಪ್ರತಿಭೆಗಳು ಎದುರಾಗುತ್ತವೆ. ವರ್ತಮಾನದಲ್ಲೇ ಇಷ್ಟು 'ಸಿರಿ' ಸಮೃದ್ಧಿ ಇರುವಾಗ ಇನ್ನು ಗತದ ಗರ್ಭದಲ್ಲಿ ಹೂತುಹೋದ ಮೌಖಿಕ ಪ್ರತಿಭೆಗಳ ಗಣನೆ ಲೆಕ್ಕಕ್ಕೆ ಸಿಗುವುದೇ?

ಇಂಥ ನಾಡಿನ ಇತಿಹಾಸದ ಬಗ್ಗೆ ಅತೀವ ಆಸ್ಥೆವಹಿಸಿ ಮಾನ್ಯ ಹುಲ್ಲೂರು ಶ್ರೀನಿವಾಸ ಜೋಯಿಸರು ಅನೇಕ ಸಂಶೋಧನ ಪ್ರಬಂಧಗಳನ್ನು ಬರೆದಿದ್ದಾರೆ. ವೃತ್ತಿಯಲ್ಲಿ ವಕೀಲರಾದರೂ ಚಿತ್ರದುರ್ಗದ ಇತಿಹಾಸ ಶೋಧವನ್ನು ತಮ್ಮ ಬದುಕಿನ ಆದ್ಯಕರ್ತವ್ಯವಾಗಿಸಿಕೊಂಡು ವಸ್ತುನಿಷ್ಠ ನೆಲೆಯಲ್ಲಿ ಇತಿಹಾಸ ರಚನೆ ಮಾಡಿದ್ದಾರೆ. ಒಂದು ನೆಲೆಯಲ್ಲಿ ತರಾಸು ಅವರು ಐತಿಹಾಸಿಕ ಕಾದಂಬರಿಗಳ ಮುಖೇನ ಚಿತ್ರದುರ್ಗದ ಇತಿಹಾಸವನ್ನು ವೈಭವೀಕರಿಸಿ ಕನ್ನಡ ಜನ ಅತ್ತ ಗಮನ ಹರಿಸುವಂತೆ ಮಾಡಿದ್ದರೆ, ಹುಲ್ಲೂರು ಶ್ರೀನಿವಾಸ ಜೋಯಿಸರು ಇತಿಹಾಸವನ್ನು ನಿಜವಾದ ಸಂಶೋಧಕ ಭಾವದಲ್ಲಿ ಪುನಾರಚಿಸುವ ನಿಷ್ಠೆ ಮೆರೆದಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ ಹುಲ್ಲೂರರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು. ಗಾಂಧೀಜಿಯವರ ತತ್ವಾದರ್ಶಗಳನ್ನು ನಿಷ್ಠೆಯಿಂದ ಪರಿಪಾಲಿಸಿದವರು. ಆವರ ಪಾರದರ್ಶಕ ಬದುಕಿನ ಜೀವನ ಚಿತ್ರಣವನ್ನು ಈ ಕೃತಿಯಲ್ಲಿ ಡಾ. ಬಿ. ರಾಜಶೇಖರಪ್ಪನವರು ಕಟ್ಟಿಕೊಟ್ಟಿದ್ದಾರೆ. ಆವರ ಬದುಕಿನ ವೈಯಕ್ತಿಕ ವಿವರಗಳಿಗಿಂತ ಆವರ ಸಾಧನೆಯ ಸಂಶೋಧನೆಯ ಆಳ ವಿಸ್ತಾರಗಳನ್ನು ಸೂಕ್ಷ್ಮ ವಿಶ್ಲೇಷಣೆಗೆ ಗುರಿಪಡಿಸಿದ್ದಾರೆ. ಉತ್ತಮ ಜೀವನದ ಸರಳ ನಡೆಯ ಸುಸಂಸ್ಕೃತ ಚೇತನ ಕುರಿತ ಇಂಥ ಬರಹಗಳು ಕನ್ನಡ ಪರಂಪರೆಯಲ್ಲಿ ಮಹತ್ವದ ದಾಖಲಾತಿಗಳು. ಈ ಪುಸ್ತಕವನ್ನು ರಚಿಸಿ, ಅಪರೂಪದ ಛಾಯಾಚಿತ್ರಗಳನ್ನು ಸಂಗ್ರಹಿಸಿ ಸೇರಿಸಿ, ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಇದನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ಗೆಳೆಯ ಡಾ. ರಾಜಶೇಖರಪ್ಪನವರಿಗೆ ಆತ್ಮೀಯ ಕೃತಜ್ಞತೆಗಳು.

ಬೆಂಗಳೂರು

**ಪ್ರೊ. ಎಸ್. ಜಿ. ಸಿದ್ಧರಾಮಯ್ಯ**
ಅಧ್ಯಕ್ಷರು

# ಪುಸ್ತಕದ ಮುನ್ನ

ಕನ್ನಡ ಪುಸ್ತಕ ಪ್ರಾಧಿಕಾರವು ' ಮರೆಯಲ್ಲಿರುವ ಮಹಾನುಭಾವರು ' ಎಂಬ ಪ್ರಕಟಣ ಮಾಲೆಯಲ್ಲಿ ನಾಡಿನ ಸಂಸ್ಕೃತಿ, ನಾಗರಿಕತೆ ಹಾಗೂ ಬದುಕನ್ನು ಕಟ್ಟುವಲ್ಲಿ ಜನಪರ ಕಾಳಜಿಯನ್ನಿಟ್ಟುಕೊಂಡು, ಪರಹಿತದಲ್ಲಿ ಸಮುದಾಯದ ಸೇವೆಯಲ್ಲಿ ಫಲಾಪೇಕ್ಷೆ ಇಲ್ಲದೆ ಬಾಳಿದ ಮಹನೀಯರನ್ನು, ಎಲ್ಲರ ನೆನಪಿನಿಂದ ಮರೆಯಾಗದಂತೆ, ಅವರ ಕಾರ್ಯಕ್ಷೇತ್ರದ ಹಿನ್ನೆಲೆಯಲ್ಲಿ ದಾಖಲಿಸಿ ಸಮಾಜಕ್ಕೆ ಪರಿಚಯಿಸುವ ಹಂಬಲ ಹೊಂದಿ, ಹುಲ್ಲೂರು ಶ್ರೀನಿವಾಸ ಜೋಯಿಸರ ಜೀವನ ಸಾಧನೆ ಕುರಿತಂತೆ ವ್ಯಕ್ತಿ ಚಿತ್ರಣವನ್ನು ನಿರೂಪಿಸಿಕೊಡಬೇಕೆಂದು ಕೇಳಿದಾಗ, ನಾನು ಸಂತೋಷದಿಂದ ಒಪ್ಪಿಕೊಂಡೆ. ಅದಕ್ಕೆ ಕಾರಣ ಕೇವಲ ಇತಿಹಾಸ ಸಂಶೋಧಕರಲ್ಲದೆ ಖ್ಯಾತ ಲೇಖಕರೂ ಸ್ವಾತಂತ್ರ್ಯ ಹೋರಾಟಗಾರರೂ ಶುಭ್ರ ಚಾರಿತ್ರ್ಯದ ಸಮಾಜ ಸೇವಕರೂ ಅಖಂಡ ಕನ್ನಡ ಪ್ರೇಮಿಗಳೂ ಆದ ಹುಲ್ಲೂರು ಶ್ರೀನಿವಾಸ ಜೋಯಿಸರ ಬಗ್ಗೆ ನನಗಿದ್ದ ಅಪಾರ ಗೌರವ. ಅವರ ಬಗ್ಗೆ ಒಂದು ಪುಸ್ತಕ ಬರೆಯುವುದೇ ಒಂದು ಸಾರ್ಥಕ ಕಾರ್ಯವೆಂದು ಭಾವಿಸಿ, ಇದನ್ನು ರಚಿಸಿ ನಿಮ್ಮ ಕೈಗೆ ನೀಡುತ್ತಿದ್ದೇನೆ.

ಇಂಥ ಅವಕಾಶವನ್ನು ನನಗೆ ನೀಡಿ ಈ ಪುಸ್ತಕವನ್ನು ಪ್ರಕಟಿಸಿದ್ದಕ್ಕಾಗಿ ನಾನು ಪ್ರಾಧಿಕಾರದ ಅಧ್ಯಕ್ಷರೂ ಪ್ರಿಯಮಿತ್ರರೂ ಪ್ರೊ. ಸಿದ್ಧರಾಮಯ್ಯ ಅವರಿಗೆ ನನ್ನ ತುಂಬು ಕೃತಜ್ಞತೆಗಳು. ಹಾಗೆಯೇ ಇದರ ಪ್ರಕಟಣೆಯಲ್ಲಿ ಕಾಳಜಿ ತೋರಿ ಸಹಕರಿಸಿದ ಪ್ರಾಧಿಕಾರದ ಆಡಳಿತಾಧಿಕಾರಿ ಅಶೋಕ ಎನ್. ಚಲವಾದಿ ಮತ್ತು ಅವರಿಗಿಂತ ಹಿಂದೆ ಆಡಳಿತಾಧಿಕಾರಿ ಆಗಿದ್ದ ಎನ್. ತಿಪ್ಪೇಸ್ವಾಮಿ ಅವರಿಗೂ ನನ್ನ ಧನ್ಯವಾದಗಳು.

ಜೋಯಿಸರಿಗೆ ಸಂಬಂಧಿಸಿದಂತೆ ನನಗೆ ಮಾಹಿತಿ ದೊರೆಯಲು ಅನೇಕರು ನೆರವಾಗಿದ್ದಾರೆ. ಜೋಯಿಸರ ಮೇಲೆ ಹಿಂದೆಯೇ ಬರೆಯಲಾಗಿದ್ದ ಹಲವು ಲೇಖನಗಳ ಮತ್ತು ಪುಸ್ತಕಗಳ ಲೇಖಕರಿಗೂ ಸಂಪಾದಕರಿಗೂ ನಾನು ಋಣಿಯಾಗಿದ್ದೇನೆ. ಜೋಯಿಸರ ಜೊತೆ ವಕೀಲಿ ವೃತ್ತಿಯಲ್ಲಿ, ಸ್ವಾತಂತ್ರ್ಯ ಹೋರಾಟದಲ್ಲಿ, ರಾಜ್ಯಾಡಳಿತ ದಲ್ಲಿ, ಅವರ ಪ್ರೀತಿಯ ಒಡನಾಡಿಯಾಗಿದ್ದ ರಾಷ್ಟ್ರನಾಯಕ ಎಸ್. ನಿಜಲಿಂಗಪ್ಪನವರನ್ನೂ

ಜೊತೆಗೆ ಇನ್ನೊಬ್ಬ ಒಡನಾಡಿ, ಅಭಿಮಾನಿ, ಖ್ಯಾತ ಹಿರಿಯ ನ್ಯಾಯವಾದಿ ಎಂ. ವೆಂಕೋಬರಾಯರನ್ನೂ ಹಾಗೆಯೇ ತಂದೆಯ ಮಾರ್ಗದಲ್ಲೇ ಸಾಗಿ ಬಂದ ಅವರ ಹಿರಿಯ ಮಗ ಎಚ್.ಎಸ್. ಪಾಂಡುರಂಗ ಜೋಯಿಸರನ್ನೂ ಬಹು ಹಿಂದೆಯೇ ಸಂದರ್ಶಿಸಿದಾಗ ಪಡೆದಿದ್ದ ಮಾಹಿತಿಯನ್ನು ಇಲ್ಲಿ ಬಳಸಿಕೊಂಡಿದ್ದೇನೆ.

ತಮ್ಮ ತಂದೆಯ ಕೆಲವು ಅಪ್ರಕಟಿತ ಹಸ್ತಪ್ರತಿಗಳನ್ನು ಅಧ್ಯಯನಕ್ಕಾಗಿ ನನಗೆ ನೀಡಿದ್ದಲ್ಲದೆ ಅವರ ಜೀವಿತ ಕಾಲದ ಅಪರೂಪದ ಸಂದರ್ಭಗಳ ಛಾಯಾಚಿತ್ರಗಳನ್ನು ನೀಡಿದ್ದವರು ಹಿರಿಯ ಮಗ ಪಾಂಡುರಂಗ ಜೋಯಿಸರು. ಹಾಗೆಯೇ ಜೋಯಿಸರ ಇನ್ನೊಬ್ಬ ಮಗ ಎಚ್.ಎಸ್. ನಾಗರಾಜ ಶರ್ಮ ಅವರು ಮುಂಬೈಯಿಂದ ಕೆಲವು ವಿಶೇಷ ಛಾಯಾಚಿತ್ರಗಳನ್ನೂ, ಪತ್ರಿಕೆಯ ತುಣುಕುಗಳನ್ನೂ ಕಳುಹಿಸಿ ಸಹಕರಿಸಿದ್ದಾರೆ. ಜೋಯಿಸರ ಮತ್ತೋರ್ವ ಪುತ್ರ ಎಚ್.ಎಸ್. ಮಯೂರ ಶರ್ಮ, ಬೆಂಗಳೂರು ಅವರು ತಂದೆಯ ಬಗೆಗೆ ಕೆಲವೊಂದು ಮಾಹಿತಿ ನೀಡಿದ್ದಾರೆ. ಜೋಯಿಸರ ಪುತ್ರಿ ಸಾವಿತ್ರಮ್ಮ (ಕಾಮಾಕ್ಷಮ್ಮ ಜಡೆ) ಹರಿಹರ ಅವರು ತಂದೆಯ ಕುರಿತು ಹಲವು ಹೃದಯ ಸ್ಪರ್ಶಿ ಸಂಗತಿಗಳನ್ನು ತಿಳಿಸಿ, ಲಿಖಿತವಾಗಿಯೂ ನೀಡಿ ಸಹಕರಿಸಿದ್ದಾರೆ. ತಮ್ಮ ತಾತನವರ ಪುಸ್ತಕದ ರಚನೆಯಾಗುವ ಬಗ್ಗೆ ಅಭಿಮಾನದಿಂದ ಸಹಕರಿಸಿದವರು ಹಿರಿಯ ಮಗನ ಪುತ್ರಿ ಮತ್ತು ಪುತ್ರರಾದ ಎಚ್.ಪಿ. ಜಯಶ್ರೀ ಪ್ರಸಾದ್ ಮತ್ತು ಎಚ್.ಪಿ. ಶ್ರೀನಿವಾಸ ಶರ್ಮ (ವಾಸು) ಅವರು. ಚಿಕ್ಕಪ್ಪನವರ ಬಗ್ಗೆ ಹೆಚ್ಚಿನ ವಿವರಗಳನ್ನು ಇತ್ತವರು ಜೋಯಿಸರ ಅಣ್ಣ ವೆಂಕಾಜೋಯಿಸರ ಮಗ ಭರಮಸಾಗರ ವಾಸಿ ಎಚ್.ವಿ. ರಂಗನಾಥ ಜೋಯಿಸ್ ಅವರು. ಇದಕ್ಕೆ ಸಹಕರಿಸಿದವರು ಅವರ ಮಕ್ಕಳಾದ ಎಚ್.ಆರ್. ಕೃಷ್ಣ ಜೋಯಿಸ್ ಮತ್ತು ಎಚ್.ಅರ್. ನೀಲಕಂಠ ಜೋಯಿಸ್ ಅವರು.

ಎಸ್ಸೆನ್ ಅವರ ಪುತ್ರ ವಿ. ರಾಜಶೇಖರ್ ಚಿತ್ರದುರ್ಗ ಅವರು ಟೆನ್ನಿಸ್ ಆಡಲು ಸೇರುತ್ತಿದ್ದ ತಮ್ಮ ತಂದೆ, ಜೋಯಿಸರು ಹಾಗೂ ವಕೀಲರಿದ್ದ ಒಂದು ಅಪರೂಪದ ಛಾಯಾಚಿತ್ರವನ್ನು ನೀಡಿದ್ದಾರೆ. ಶಂಕರ್ ಎಸ್. ಅಥಣಿ ಅವರು ಪ್ರಾಚ್ಯವಸ್ತು ಸಂಗ್ರಹಾಲಯದ ಚಿತ್ರವನ್ನು ನೀಡಿದ್ದಾರೆ. ಜೋಯಿಸರು ಹಾಗೂ ಡಾ. ಜೆ.ಎಸ್. ದೀಕ್ಷಿತ್ ಅವರು ಇರುವ ಇನ್ನೊಂದು ಅಪರೂಪದ ಛಾಯಾಚಿತ್ರ ಪ್ರೊ. ಲಕ್ಷ್ಮಣ್ ತೆಲಗಾವಿಯವರ ಒಂದು ಲೇಖನದಿಂದ ತೆಗೆದುಕೊಂಡದ್ದು. ಜೋಯಿಸರ ಕಾಲದ ಛಾಯಾಚಿತ್ರಗಳೊಳಗೆ ಬರುವ ಹಲವು ಪ್ರಮುಖ ವ್ಯಕ್ತಿಗಳನ್ನು ಗುರುತಿಸುವಲ್ಲಿ ನೆರವಾದವರು ಮಾಜಿ ಸಂಸದರೂ ನನ್ನ ಬಗೆಗೆ ಪ್ರೀತಿಯುಳ್ಳವರೂ ಆದ ಎಚ್. ಹನುಮಂತಪ್ಪನವರು, ಖ್ಯಾತ ಹಿರಿಯ ನ್ಯಾಯವಾದಿಗಳಾದ ಆಲಗಟ್ಟದ ವೇದಮೂರ್ತಿ ಸ್ವಾಮಿ, ಪತ್ರಕರ್ತ ಮಿತ್ರ ಕತೆಗಾರರು ಜಿ.ಎಸ್. ಉಜ್ಜಿನಪ್ಪ, ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಡಿ.ಎಸ್.

ಚಿದಾನಂದಪ್ಪ, ಹಿರಿಯ ವಕೀಲರಲ್ಲಿ ಬಹುಕಾಲ ಗುಮಾಸ್ತರಾಗಿದ್ದ ಪಿ.ಜಿ. ಜಯಣ್ಣ ಅವರುಗಳು.

ಜೋಯಿಸರ ಅಪ್ರಕಟಿತ ಕೃತಿ ' ಹರಿಹರ ಕ್ಷೇತ್ರ 'ದ ಬಗ್ಗೆ ತಮ್ಮ ಅಭಿಪ್ರಾಯ ಬರೆದು ಕಳುಹಿಸಿಕೊಟ್ಟವರು ಹಿರಿಯ ಇತಿಹಾಸ ವಿದ್ವಾಂಸ ಡಾ. ಎಂ.ವಿ. ಶ್ರೀನಿವಾಸ್ ಅವರು. ' ಕನ್ನಡ ನುಡಿ ' ಪತ್ರಿಕೆಯಲ್ಲಿ ಬಂದ ಜೋಯಿಸರಿಗೆ ಸಂಬಂಧಿಸಿದ ಎರಡು ಲೇಖನಗಳ ಪ್ರತಿಯನ್ನು ಕಳುಹಿಸಿಕೊಟ್ಟವರು ಡಾ. ಪಿ.ವಿ. ಕೃಷ್ಣಮೂರ್ತಿ ಅವರು. ಜೋಯಿಸರ ಕೆಲವು ಲೇಖನಗಳ ಶೀರ್ಷಿಕೆಗಳನ್ನು ನನ್ನ ಗಮನಕ್ಕೆ ತಂದವರು ಹುಬ್ಬಳ್ಳಿಯ ಪ್ರೊ. ಸಿ.ಪಿ. ಹೇಮಗಿರಿಮಠ ಅವರು. ಕೆಲವು ಅಗತ್ಯ ಪುಸ್ತಕಗಳನ್ನು ನೀಡಿದವರು ಅಶೋಕ ಗುಂಜಾಳ ಅವರು.

ಈ ಪುಸ್ತಕದ ಬಗ್ಗೆ ಆಸಕ್ತಿಯಿಂದ ವಿಚಾರಿಸುತ್ತಾ ಉತ್ತೇಜಿಸುತ್ತಾ ಬಂದವರು ನನ್ನ ಪ್ರಿಯಮಿತ್ರ ಹಿರಿಯ ಜಾನಪದ ವಿದ್ವಾಂಸ ಡಾ. ಮೀರಾಸಾಬಿಹಳ್ಳಿ ಶಿವಣ್ಣ ಅವರು. ಇದರ ಬಗ್ಗೆ ಆರಂಭದಿಂದ ಕಾಳಜಿ ತೋರಿಸಿದವರು ಮಾಜಿ ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಶಿವಗಂಗ ವೀರಭದ್ರಪ್ಪ, ಚಿತ್ರದುರ್ಗದ ಉದ್ಯಮಿ ಎಂ.ಎ. ಸೇತುರಾಂ, ಖ್ಯಾತ ಕತೆಗಾರರಾದ ಕಂನಾಡಿಗಾ ನಾರಾಯಣ, ಚಿತ್ರದುರ್ಗ ಪಾಳೆಯಗಾರರ ವಂಶಸ್ಥರಾದ ಚಳ್ಳಕೆರೆಯ ಪಿ.ಆರ್. ವೀರಭದ್ರನಾಯಕ್, ಎಸ್ಸೆನ್ ಕುಟುಂಬಕ್ಕೆ ಸೇರಿದ ಎಸ್.ಜೆ. ಮಂಜುನಾಥ್, ಪ್ರಿಯಮಿತ್ರರಾದ ಪ್ರೊ. ಆರ್.ಎಸ್. ಕಾಂತರಾಜ್, ವಕೀಲರಾದ ಎನ್.ಬಿ. ವಿಶ್ವನಾಥ್, ಸಾಹಿತ್ಯಾಭಿಮಾನಿ ಕೆ. ವೆಂಕಣ್ಣಾಚಾರ್, ಲೇಖಕ ಮಿತ್ರ ಟಿ.ಆರ್. ರಾಧಾಕೃಷ್ಣ, ಅವರುಗಳು.

ಈ ಪುಸ್ತಕದ ಅಕ್ಷರ ಜೋಡಣೆಯನ್ನು ಅಚ್ಚುಕಟ್ಟಾಗಿ ಮಾಡಿದವರು ಚಿತ್ರದುರ್ಗದ ಸಿ.ಬಿ. ನಾಗಭೂಷಣ ಅವರು. ಉತ್ತಮವಾಗಿ ರಕ್ಷಾಪುಟ ವಿನ್ಯಾಸ ಮಾಡಿ ಕೊಟ್ಟ ಖ್ಯಾತ ಕಲಾವಿದ ಪುಂಡಲೀಕ ಕಲ್ಲಿಗನೂರ ಅವರು. ಸೊಗಸಾಗಿ ಮುದ್ರಿಸಿದವರು ಬೆಂಗಳೂರಿನ ಇಳಾ ಮುದ್ರಣದವರು.

ಇವರೆಲ್ಲರ ಪ್ರೀತಿಯ ಸಹಕಾರಕ್ಕೆ ನನ್ನ ಹಾರ್ದಿಕ ವಂದನೆಗಳು.

ಚಿತ್ರದುರ್ಗ **ಡಾ. ಬಿ. ರಾಜಶೇಖರಪ್ಪ**

**ಅರ್ಪಣೆ**

ಜೋಯಿಸರೆಡೆಗೆ ನನ್ನ ಲಕ್ಷ್ಯ ಸೆಳೆದ
ಇತಿಹಾಸ ವಿದ್ವಾಂಸರಾದ

**ಪ್ರೊ. ಎಂ.ವಿ. ಶ್ರೀನಿವಾಸ್**

ಮತ್ತು

**ಪ್ರೊ. ಲಕ್ಷ್ಮಣ್ ತೆಲಗಾವಿ**

ಅವರಿಗೆ

# ಪರಿವಿಡಿ


| | | |
|---|---|---|
| ಆರಂಭ ಕಾಲ | ... | ೧ |
| ಸ್ವಾತಂತ್ರ್ಯ ಹೋರಾಟ - ' ಮೈಸೂರು ಚಲೋ ' ಚಳುವಳಿ | ... | ೫ |
| ಜೋಯಿಸರು, ಮನೆ ಮತ್ತು ಮಕ್ಕಳು | ... | ೯ |
| ಇತಿಹಾಸ ಸಂಶೋಧನೆ, ಸಾಧನೆ | ... | ೧೪ |
| ಅಪರೂಪದ ' ಮಾರ್ಗದರ್ಶಿ ' | ... | ೨೩ |
| ಸ್ನೇಹ, ಪ್ರೋತ್ಸಾಹ | ... | ೨೭ |
| ಪತ್ರಕರ್ತ, ಸಮಾಜ ಸೇವಕ | ... | ೩೪ |
| ವಸ್ತು ಸಂಗ್ರಹಾಲಯ ಸ್ಥಾಪನೆ | ... | ೩೭ |
| ಭಾಷಣ, ಇತಿಹಾಸ ಪ್ರಚಾರ | ... | ೪೦ |
| ಸರಳತೆ, ಸಜ್ಜನಿಕೆ | ... | ೪೩ |
| ಕನ್ನಡ ಪ್ರೇಮ, ಕಡೆಯ ದಿನಗಳು | ... | ೪೭ |
| ಜೋಯಿಸರ ಮತ್ತು ಅವರ ಸಂಶೋಧನೆಯ ಬಗೆಗೆ ಗಣ್ಯರ ಅಭಿಪ್ರಾಯಗಳು | ... | ೫೦ |
| ಅನುಬಂಧ | ... | ೫೫ |
| ಪರಾಮರ್ಶನ ಬರಹ | ... | ೬೫ |

ಇತಿಹಾಸ ಸಂಶೋಧಕ


# ಪುಲ್ಲೂರು ಶ್ರೀನಿವಾಸ ಜೋಯಿಸರು



ಶ್ರೀನಿವಾಸ ಜೋಯಿಸರು
ಕಷ್ಟಪಟ್ಟು ಕಟ್ಟಿಸಿದ ಸರಳ ಮನೆ
'ವಿಶ್ವಾಮಿತ್ರಾಶ್ರಮ'




ತಂದೆ ಪಾಂಡುರಂಗ ಜೋಯಿಸರ
ಕಡೆಗಾಲದಲ್ಲಿ ಯುವಕ ಶ್ರೀನಿವಾಸ
ಜೋಯಿಸರು, ತಾಯಿ ಪಾರ್ವತಮ್ಮ,
ಪತ್ನಿ ಸರಸ್ವತಮ್ಮ



ದಾಖಲಾತಿಗಳೊಂದಿಗೆ ಕೋರ್ಟಿಗೆ
ಹೊರಡಲು ಸಿದ್ಧವಾಗಿ ಮನೆಯ
ಮುಂದೆ ನಿಂತಿರುವ ಜೋಯಿಸರು




ಯಾವುದೋ ಗಂಭೀರ ವೀಕ್ಷಣೆಯಲ್ಲಿ
ವಕೀಲ ಜೋಯಿಸರು



**ಚಿತ್ರದುರ್ಗದ ಟೆನ್ನಿಸ್ ಕ್ರೀಡಾಪಟು ವಕೀಲರ ತಂಡ (೧೯೨೫)**


ಕುಳಿತವರು ( ಎಡದಿಂದ ): ೧. ಹುಲ್ಲೂರು ಶ್ರೀನಿವಾಸ ಜೋಯಿಸರು,
೨. ನರಸಿಂಹಮೂರ್ತಿ, ೩. ಎಂ.ಬಿ. ಕೃಷ್ಣರಾವ್, ೪. ಚಿತ್ರದುರ್ಗದ ಆಗಿನ ಜಿಲ್ಲಾಧಿಕಾರಿ
ನಿಂತವರು (ಎಡದಿಂದ): ೧. ಎಸ್. ನಿಜಲಿಂಗಪ್ಪ




ತಮ್ಮ ಮನೆಯ ಗ್ರಂಥ ಭಂಡಾರದಲ್ಲಿ ಅಧ್ಯಯನಮಗ್ನರಾದ ಜೋಯಿಸರು



ಸಹಕಾರ ಸುವರ್ಣ ಮಹೋತ್ಸವ ದಿನಾಚರಣೆಯಲ್ಲಿ
ಜೋಯಿಸರು, ಎಸ್. ಭೀಮರಾವ್ ಮತ್ತು ಇತರರು




ಕಾರ್ಯಕ್ರಮವೊಂದರಲ್ಲಿ (ಎಡದಿಂದ) ೩. ಕೆಂಗಲ್ ಹನುಮಂತಯ್ಯನವರು,
೫. ಟಿ. ಮಾರಪ್ಪ, ೬. ಜೋಯಿಸರು




(ಎಡದಿಂದ) ೧. ಹು.ಶ್ರೀ. ಪಾಂಡುರಂಗ ಜೋಯಿಸ್, ೩. ಕಡ್ಲೆಬಾಳು ಭೀಮರಾವ್,
೪. ಜೋಯಿಸರು, ೫. ಸಾಹುಕಾರ್ ವೀರಭದ್ರಪ್ಪನವರು.



ಚಿತ್ರದುರ್ಗದಲ್ಲಿ ಎಸ್ಸೆನ್ ಮನೆಯ ಮುಂದೆ
ಮುಂದೆ ನಿಂತ ಸಾಲು (ಎಡದಿಂದ): ೨. ಎಸ್. ನಿಜಲಿಂಗಪ್ಪ,
೩. ಎಸ್. ವೀರಬಸಪ್ಪ ೪. ಜೋಯಿಸರು



ಮನೆಯ ಮುಂದೆ ಮಕ್ಕಳೊಂದಿಗೆ ಜೋಯಿಸರು
ಜೊತೆಯಲ್ಲಿ ಕುಳಿತವರು ಪಾಂಡುರಂಗ ಜೋಯಿಸ್,
ನಿಂತವರು ಮಯೂರ ಶರ್ಮ, ಸಾವಿತ್ರಮ್ಮ, ನಾಗರಾಜ ಶರ್ಮ




ಜೋಯಿಸರ ಪುತ್ರರು
(ಎಡದಿಂದ) ಕೊನೆಯ ಮಗ ಮಯೂರ ಶರ್ಮ,
ಹಿರಿಯ ಮಗ ಪಾಂಡುರಂಗ ಜೋಯಿಸ್, ಎರಡನೆಯ ಮಗ ನಾಗರಾಜ ಶರ್ಮ




' ಚಿತ್ರದುರ್ಗದ ಗತವೈಭವ ' ಛಾಯಾಚಿತ್ರಗಳ ಪ್ರದರ್ಶನದೊಂದಿಗೆ
ಇತಿಹಾಸ ವಿವರಿಸುತ್ತಿರುವ ಜೋಯಿಸರು



ವಿದೇಶೀ ಮಹಿಳೆಯೊಬ್ಬರಿಗೆ
ಕೋಟೆಯ ಮಾರ್ಗದರ್ಶನದಲ್ಲಿ
ನಿರತರಾದ ಜೋಯಿಸರು



ರಂಗಯ್ಯನ ಬಾಗಿಲ ಮುಂದೆ ಜಪಾನಿ
ಸಂದರ್ಶಕರೊಬ್ಬರೊಂದಿಗೆ
ಜೋಯಿಸರು



ಜೋಯಿಸರು ಆಪ್ತ ವಿದ್ವಾಂಸ ಮಿತ್ರ ಬಿ. ಶಿವಮೂರ್ತಿ ಶಾಸ್ತ್ರಿ ಅವರೊಂದಿಗೆ




ಯುವಕ ಇತಿಹಾಸ ಪ್ರಾಧ್ಯಾಪಕ ಡಾ. ಜಿ.ಎಸ್. ದೀಕ್ಷಿತ್ ಅವರೊಂದಿಗೆ ಜೋಯಿಸರು
ದೊಡ್ಡೇರಿ ಶೋಧನೆಗೆ ಹೋದಾಗ



ಹಿಂದಿನ ಸಾಲು: (ಎಡದಿಂದ) ೧. ಎಸ್. ವೀರಬಸಪ್ಪ, ೫. ಜಿ. ವರದರಾಜರಾವ್,
ನಡುವಿನ ಸಾಲು: ೧. ಎಸ್. ಗುರುನಾಥಪ್ಪ, ೨. ಗುಬ್ಬಿ ವೀರಣ್ಣ,
೪. ಎಸ್. ನಿಜಲಿಂಗಪ್ಪ, ೫. ಜೋಯಿಸರು.




(ಎಡದಿಂದ) ೧. ಜಿ. ವರದರಾಜರಾವ್, ೩. ಜೋಯಿಸರು,
೪. ತಳುಕಿನ ರಾಮಸ್ವಾಮಯ್ಯ (ತರಾಸು ಅವರ ತಂದೆ)



ಪ್ರಾಚ್ಯವಸ್ತು ಸಂಗ್ರಹಾಲಯದ ಮುಂದೆ ಅಂದಿನ ಮುಖಂಡರಾದ
ಎ. ಭೀಮಪ್ಪ ನಾಯಕ್, ವಿ. ಮಸಿಯಪ್ಪ ಅವರೊಂದಿಗೆ ಜೋಯಿಸರು




ಬಂಧು ವರ್ಗದವರ ಜೊತೆಗೆ ಪ್ರವಾಸದಲ್ಲಿ ಜೋಯಿಸರು,
ಶ್ರೀರಂಗಪಟ್ಟಣದ ಬಳಿಯ ದರಿಯಾ ದೌಲತ್ ಮುಂದೆ



ಒಂದು ಮುಖ್ಯ ಕಾರ್ಯಕ್ರಮ ಸಂದರ್ಭದಲ್ಲಿ ಮುಖಂಡರಾದ
ಹೊ.ಚಿ. ಬೋರಯ್ಯ, ಎಸ್. ಭೀಮರಾವ್, ಜಿಲ್ಲಾಧಿಕಾರಿ ಎಚ್.ಎನ್. ಪಾಳೇಗಾರ್
ಮುಂತಾದ ಗಣ್ಯರೊಂದಿಗೆ ಜೋಯಿಸರು




ಮತ್ತೊಂದು ಮುಖ್ಯ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಟಿ.ವೆಂಕಟಶಿವರೆಡ್ಡಿ
ಮತ್ತು ಇತರ ಗಣ್ಯರೊಂದಿಗೆ ಜೋಯಿಸರು



ಮುಂದಿನ ಸಾಲು (ಎಡದಿಂದ): ೧. ಟಿ. ಮಾರಪ್ಪ, ೨. ಜೋಯಿಸರು, ೩. ಟಿ. ವೆಂಕಟಶಿವರೆಡ್ಡಿ (ಜಿಲ್ಲಾಧಿಕಾರಿ), ೪. ಕೆ.ಎಚ್. ಸತ್ಯನಾರಾಯಣ ರಾವ್, ೫. ಪಿ.ಎಚ್. ಜಯಪ್ಪ, ೬. ಬಿ.ಎಸ್. ಶಂಕರಪ್ಪ ಬೆಲಗೂರು.



ಹುಲ್ಲೂರಿನ ಕಾರ್ಯಕ್ರಮವೊಂದರಲ್ಲಿ ಮಕ್ಕಳಿಗೆ ಸಹಿ ಹಂಚುತ್ತಿರುವ ಜಿಲ್ಲಾಧಿಕಾರಿ ಟಿ. ವೆಂಕಟಶಿವರೆಡ್ಡಿ ಮತ್ತು ಶ್ರೀಮತಿ ಸುಧಾರೆಡ್ಡಿ ಅವರೊಂದಿಗೆ ಜೋಯಿಸರು



ಸಿದ್ದವ್ವನಹಳ್ಳಿ ಕೃಷ್ಣಶರ್ಮ ಮತ್ತು ಅವರ ಹಿರಿಯರೊಂದಿಗೆ ಜೋಯಿಸರು,
ಜೊತೆಯಲ್ಲಿ ಜಿ. ವರದರಾಜರಾವ್




ಮಿತ್ರರು ಸಾಹಿತಿಗಳೊಂದಿಗೆ ಜೋಯಿಸರು
(ಎಡದಿಂದ) ೧. ಎಂ. ವೆಂಕೋಜರಾವ್, ೨. ಜಿ. ವರದರಾಜರಾವ್, ೩. ರಂ.ಶ್ರೀ. ಮುಗಳಿ



ಖ್ಯಾತ ಗಮಕ ಕಲಾವಿದರಾದ ಶಕುಂತಲಾಬಾಯಿ, ಅವರ ಪತಿ ಪಾಂಡುರಂಗರಾವ್
ಅವರ ಜೊತೆ ಜೋಯಿಸರು ಮತ್ತು ಅವರ ಪುತ್ರಿ ಸಾವಿತ್ರಮ್ಮ




ಖ್ಯಾತ ಚಿತ್ರನಟ ಹೊನ್ನಪ್ಪ ಭಾಗವತರ್ ಮತ್ತು ಚಿತ್ರನಟಿ ಬಿ. ಸರೋಜಾದೇವಿ
ಅವರೊಂದಿಗೆ ಚಿತ್ರದುರ್ಗದ ಪ್ರವಾಸಿ ಮಂದಿರದ ಮುಂದೆ ಜೋಯಿಸರು



ಚಿತ್ರದುರ್ಗ ಕೋಟೆಯ ಮೊದಲ ಮಹಾದ್ವಾರ ರಂಗಯ್ಯನ ಬಾಗಿಲಲ್ಲಿ
ಜೋಯಿಸರು ಸ್ಥಾಪಿಸಿದ ಪ್ರಾಚ್ಯವಸ್ತು ಸಂಗ್ರಹಾಲಯ



ಪ್ರಾಚ್ಯವಸ್ತು ಸಂಗ್ರಹಾಲಯದ ಉದ್ಘಾಟನೆ ನೆರವೇರಿಸಲು ಆಗಮಿಸುತ್ತಿರುವ
ರಾಜಪ್ರಮುಖ ಜಯಚಾಮರಾಜೇಂದ್ರ ಒಡೆಯರ್




(ಎಡದಿಂದ): ೧. ಕಾವೇರಮ್ಮ, ೨. (ಅವರ ಪತಿ) ಎಚ್.ಎಸ್. ಪಾಂಡುರಂಗ ಜೋಯಿಸ್,
೩. ಎಚ್.ವಿ. ರಂಗನಾಥ ಜೋಯಿಸ್, ೪. (ಅವರ ಪತ್ನಿ) ಸಾವಿತ್ರಮ್ಮ



ತಂದೆಯ ತರುವಾಯ ಪ್ರಾಚ್ಯವಸ್ತು
ಸಂಗ್ರಹಾಲಯವನ್ನು ನೋಡಿಕೊಂಡ
ಪಾಂಡುರಂಗ ಜೋಯಿಸ್
ಪತ್ನಿ ಮತ್ತು ಮಕ್ಕಳೊಂದಿಗೆ




ಜೋಯಿಸರ ಪುತ್ರಿ ಸಾವಿತ್ರಮ್ಮ
(ಕಾಮಾಕ್ಷಮ್ಮ ಜೆಡೆ)
ಪತಿ ದತ್ತಾತ್ರಿ ರಾವ್ ಅವರೊಂದಿಗೆ



ಜೋಯಿಸರು ತೆಗೆದೆದ್ದೆನ್ನುವ ಒಂದು
ವಿಶೇಷ ಛಾಯಾಚಿತ್ರ:
೨. ಪ್ರೊ. ಎ.ಎನ್.ಮೂರ್ತಿರಾವ್
೩. ಸುಬ್ಬಾ ಜೋಯಿಸ್
(ಜೋಯಿಸರ ತಮ್ಮ)




ಜೋಯಿಸರು ತೆಗೆದದ್ದೆನ್ನುವ ಒಂದು
ಅಪರೂಪದ ಛಾಯಾಚಿತ್ರ:
ನಡುವೆ ಇರುವ ಪೈಜಾಮಧಾರಿ ಯುವಕ
ಕಾದಂಬರಿಕಾರ ತರಾಸು



ಜೋಯಿಸರ ಕೈಬರಹದ ಒಂದು ಪ್ರತಿ

# ಹುಲ್ಲೂರು ಶ್ರೀನಿವಾಸ ಜೋಯಿಸರ ವಂಶವೃಕ್ಷ




(ಆಧಾರ: ಎಚ್.ಎಸ್. ಪಾಂಡುರಂಗ ಜೋಯಿಸರ ಪುಸ್ತಕ 'ಹುಲ್ಲೂರು ಜೋಯಿಸರ ವಂಶಾವಳಿ' ಮತ್ತು ಅವರ ವಂಶಸ್ಥರು ನೀಡಿದ ಮೌಖಿಕ ಮಾಹಿತಿ)

# ಆರಂಭ ಕಾಲ

ಚಿತ್ರದುರ್ಗ ಪ್ರದೇಶದ ಇತಿಹಾಸದ ಪ್ರಸ್ತಾಪ ಬಂದಾಗ ಯಾರಿಗಾದರೂ ಥಟ್ಟನೆ ನೆನಪಿಗೆ ಬರುವ ಹೆಸರು ದಿ. ಹುಲ್ಲೂರು ಶ್ರೀನಿವಾಸ ಜೋಯಿಸರದು. ಅವರು ಕರ್ನಾಟಕ ಇತಿಹಾಸಕ್ಕೆ ಸಂಬಂಧಿಸಿದಂತೆ ಸಹ ಅನೇಕ (ಹಾಗೂ ಭಾರತ, ಇತಿಹಾಸಕ್ಕೆ ಸಂಬಂಧಿಸಿದಂತೆ ಕೂಡಾ ಕೆಲವು) ಲೇಖನಗಳನ್ನು ಬರೆದಿರುವವರಾದರೂ, ಚಿತ್ರದುರ್ಗ ಇತಿಹಾಸಕ್ಕೆ ಅವರು ಸಲ್ಲಿಸಿರುವ ಕೊಡುಗೆ ಬಹುದೊಡ್ಡದು. ಆದುದರಿಂದಲೇ '' ಚಿತ್ರದುರ್ಗದ ಇತಿಹಾಸವೆಂದರೆ ಜೋಯಿಸರು, ಜೋಯಿಸರೆಂದರೆ ಚಿತ್ರದುರ್ಗದ ಇತಿಹಾಸ '' ಎನ್ನುವಷ್ಟರ ಮಟ್ಟಿಗೆ ಅವರು ಹೆಸರು ಚಿತ್ರದುರ್ಗದೊಂದಿಗೆ ಬೆಸೆದುಕೊಂಡಿದೆ. ತಮ್ಮ ಪ್ರಶಂಸನೀಯ ಸಾಧನೆಯಿಂದ ಮತ್ತು ಪರಿಶುದ್ಧ ಜೀವನದಿಂದ ಅವರು ಕೇವಲ ಚಿತ್ರದುರ್ಗವಷ್ಟೆ ಅಲ್ಲ, ಇಡಿಯ ಕರ್ನಾಟಕವೇ ಹೆಮ್ಮೆ ಪಡುವಂತಹ ಮಹನೀಯರಲ್ಲೊಬ್ಬರಾಗಿದ್ದಾರೆ.

ಜೋಯಿಸರ ಮನೆತನದ ಚರಿತ್ರೆ ಕುತೂಹಲಕಾರಿಯಾಗಿದೆ. ಸ್ಮಾರ್ತ ಸಂಪ್ರದಾಯದ ವಿಶ್ವಾಮಿತ್ರ ಗೋತ್ರದ ಬ್ರಾಹ್ಮಣ ಮನೆತನದವರಾದ ಇವರ ಪೂರ್ವಿಕರು ಬಹು ಹಿಂದೆ ಈಗಿನ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಅಂಬಳಿ ಎಂಬ ಗ್ರಾಮದ ಕಲ್ಲೇಶ್ವರ ದೇವಸ್ಥಾನದ ಅರ್ಚಕ ವೃತ್ತಿಯಲ್ಲಿದ್ದರು (ಆ ಊರು ಕೊಟ್ಟೂರಿನ ಸಮೀಪದಲ್ಲಿದೆ); ಅಲ್ಲಿ ಜೀವನ ನಡೆಸುವುದು ದುರ್ಭರವೆನಿಸಿದಾಗ, ಈಗ್ಗೆ ಸುಮಾರು ಮುನ್ನೂರು ವರ್ಷಗಳ ಹಿಂದೆ ಚಿತ್ರದುರ್ಗ ಸಮೀಪದ ಹುಲ್ಲೂರು ಗ್ರಾಮಕ್ಕೆ ಬಂದು ನೆಲಸಿದರು, ಹೀಗೆ ಹುಲ್ಲೂರಿಗೆ ವಲಸೆಬಂದ ಈ ಮನೆತನದ ಹಿರಿಯರು ತಿಮ್ಮಣ್ಣ ಜೋಯಿಸರು ಮತ್ತು ದೇವಕ್ಕಮ್ಮ ಎಂದು ಹೇಳುತ್ತಾರೆ. ಇವರ ಮಕ್ಕಳು ವೆಂಕಾ ಜೋಯಿಸ, ರಾಮಾಜೋಯಿಸ, ರಂಗಾ ಜೋಯಿಸ ಮತ್ತು ನಾರಾಯಣ ಭಟ್ಟ. ಇವರಲ್ಲಿ ಮೊದಲ ಮೂವರು ಹುಲ್ಲೂರಿನಿಂದ ಚಿತ್ರದುರ್ಗಕ್ಕೆ ಬಂದು ನೆಲೆಸಿದರು. ಕೊನೆಯವರು ಚಿತ್ರದುರ್ಗ ಸಮೀಪದ ಬೆಳಗಟ್ಟ ಐಮಂಗಲ ಗ್ರಾಮಕ್ಕೆ ಹೋಗಿ ಅಲ್ಲಿ ನಿಂತರು. ಚಿತ್ರದುರ್ಗಕ್ಕೆ ಬಂದವರು ದೇವತಾ ಪೂಜೆ, ಪೌರೋಹಿತ್ಯ ಮತ್ತು ಜೋತಿಷ್ಯದಲ್ಲಿ ನಿರತರಾಗಿ ಜನರ ಪ್ರೀತಿ ವಿಶ್ವಾಸಗಳನ್ನು ಗಳಿಸಿದರು. ಬೆಳಗಟ್ಟ ಐಮಂಗಲಗಳಿಗೆ

ಹೋಗಿದ್ದವರು ಶ್ಯಾನುಭೋಗ ವೃತ್ತಿ, ಪುರೋಹಿತ ವೃತ್ತಿ ಮತ್ತು ಉಪಾಧ್ಯಾಯ ವೃತ್ತಿಯನ್ನು ಕೈಕೊಂಡರು. ಹುಲ್ಲೂರಿನಿಂದ ಚಿತ್ರದುರ್ಗಕ್ಕೆ ಮತ್ತು ಬೇರಡೆಗೆ ಹೋಗಿದ್ದರಿಂದ 'ಹುಲ್ಲೂರು' ಎನ್ನುವುದು ಇವರ ಮನೆತನದ ಹೆಸರಾಗಿ ಬಂದಿತು.

ಜೋಯಿಸರ ಮನೆ ದೇವತೆ ಬಾದಾಮಿ ಬಳಿ ಇರುವ ಬನಶಂಕರಿ. ಆದ್ದರಿಂದ ಇವರು ಪೂರ್ವಿಕರು ಮೊದಲಿಗೆ ಆ ಪ್ರದೇಶದಲ್ಲಿದ್ದು ತರುವಾಯ ಅಂಬಳಿಯತ್ತ ಬಂದವರಾಗಿರಬೇಕು ಎಂಬ ಊಹೆ ಇದೆ. ಅಂಬಳಿಯಿಂದ ಇವರು ಹುಲ್ಲೂರಿಗೆ ಬಂದ ಮೇಲೆ ಹುಲ್ಲೂರಿಗೆ ದಕ್ಷಿಣದಲ್ಲಿರುವ ಪಂಡರಹಳ್ಳಿ ಬೆಟ್ಟದ ಮೇಲಿರುವ ರಂಗನಾಥಸ್ವಾಮಿಯನ್ನು ಇವರು ಮನೆ ದೇವರ ರೀತಿಯಲ್ಲಿ ಆರಾಧಿಸುತ್ತಾ ಬಂದರು. ಆ ತರುವಾಯ ಇಡೀ ಕುಟುಂಬದವರು ಆಗಾಗ ಅಲ್ಲಿಗೆ ಹೋಗಿ ಪೂಜೆ ಸೇವೆ ಸಲ್ಲಿಸಿ ಬರುವ ಪರಿಪಾಠ ಬೆಳೆದುಬಂತು.

ಮೇಲೆ ಹೇಳಿದ ವೆಂಕಾ ಜೋಯಿಸರ ಎರಡನೇ ಪತ್ನಿ ಮಲ್ಲಮ್ಮನವರ ಮೂವರು ಗಂಡು ಮಕ್ಕಳಲ್ಲಿ ಹಿರಿಯ ಮಗ ಪಾಂಡುರಂಗ ಜೋಯಿಸರು ಚಿತ್ರದುರ್ಗದಲ್ಲಿ ಸ್ಥಳ ಪುರೋಹಿತರಾಗಿ ಮಾನ್ಯತೆ ಗಳಿಸಿದ್ದರು. ಅವರ ಪತ್ನಿ ಪಾರ್ವತಮ್ಮ. ಈ ದಂಪತಿಗಳ ಎರಡನೆಯ ಮಗನೇ ಶ್ರೀನಿವಾಸ ಜೋಯಿಸರು. ೧೮೯೨ರ ಮಾರ್ಚ್ ೨೯ರ ಮಂಗಳವಾರ, ಯುಗಾದಿ ಹಬ್ಬದ ದಿನ, ಚಿತ್ರದುರ್ಗದಲ್ಲಿ ಅವರು ಜನ್ಮ ತಾಳಿದರು. ಇವರ ಹಿರಿಯ ಸಹೋದರ ವೆಂಕಾ ಜೋಯಿಸರು ಮತ್ತು ಕಿರಿಯ ಸಹೋದರ ಸುಬ್ಬಾ ಜೋಯಿಸರು. ಚಿತ್ರದುರ್ಗದಲ್ಲಿಯೇ ಇವರ ಬಾಲ್ಯ, ಶಿಕ್ಷಣ ಸಾಗಿದವು.

ಅಲ್ಲಿಯೇ ಮೆಟ್ರಿಕ್ಯುಲೇಷನ್‌ವರೆಗೆ ಓದಿದ ಜೋಯಿಸರು ಆ ಪರೀಕ್ಷೆಯನ್ನು ಪಾಸು ಮಾಡಿ, ತಂದೆಯಂತೆ ಪೌರೋಹಿತ್ಯದ ದಾರಿ ಹಿಡಿಯದೆ ಸರ್ಕಾರಿ ನೌಕರಿಗೆ ಸೇರಿದರು. ಮೊದಲಿಗೆ ಆರ್ಥಿಕ ಅಭಿವೃದ್ಧಿ ಕಛೇರಿಯಲ್ಲಿ ಎರಡು - ಮೂರು ವರ್ಷ ಗುಮಾಸ್ತರಾಗಿ, ಆಮೇಲೆ ಅದನ್ನು ಬಿಟ್ಟು ಶಾಲಾ ಉಪಾಧ್ಯಾಯರಾಗಿ ಒಂದೆರಡು ವರ್ಷ ಕೆಲಸಮಾಡಿದರು. ಆದರೆ, ಸ್ವತಂತ್ರ ಪ್ರವೃತ್ತಿಯು ಅವರಿಗೆ ಸರ್ಕಾರಿ ನೌಕರಿ (ಯಲ್ಲಿರುವುದು) ಹಿಡಿಸಲಿಲ್ಲ. ಆದುದರಿಂದ ಉಪಾಧ್ಯಾಯ ವೃತ್ತಿಯಲ್ಲಿರುವಾಗಲೇ, ಆಗಿನ ಮೈಸೂರು ಸರ್ಕಾರ ನಡೆಸುತ್ತಿದ್ದ ಪ್ಲೀಡರ್ ಪರೀಕ್ಷೆಯನ್ನು ತೆಗೆದುಕೊಂಡು ಪಾಸು ಮಾಡಿದರು. ಆಗಿನ ಕಾಲಕ್ಕೆ ವಕೀಲರಾಗಲು ಎಲ್‌ಎಲ್.ಬಿ., ಅಥವಾ ಬಿ.ಎಲ್. ಕೋರ್ಸ್‌ಗಳನ್ನೇ ಮಾಡಬೇಕೆಂದೇನೂ ಇರಲಿಲ್ಲ. ಪ್ಲೀಡರ್ ಪರೀಕ್ಷೆ ಅಷ್ಟೇ ಸಾಕಾಗಿತ್ತು. ಇದಲ್ಲದೆ ಆಗ ಯಾವುದೇ ಸರ್ಕಾರಿ ನೌಕರಿ ಅಡಿಯಾಳುತನದ ವೃತ್ತಿ, ವಕೀಲಿ ವೃತ್ತಿ ಸ್ವಾತಂತ್ರ್ಯ ಸ್ವಾಭಿಮಾನಗಳ ವೃತ್ತಿ ಎಂಬ ಭಾವನೆ ದಟ್ಟವಾಗಿತ್ತು. ಹೀಗಾಗಿ ಅವರು ಒಂದು ದಿನ ಉಪಾಧ್ಯಾಯ ವೃತ್ತಿಗೆ ಶರಣು ಹೊಡೆದು ಸ್ವತಂತ್ರವಾದ ವಕೀಲಿ ವೃತ್ತಿಯನ್ನು

ಕೈಕೊಂಡರು. ಅಲ್ಲಿಂದ ಮುಂದೆ ಅವರು ತಮ್ಮ ವೃತ್ತಿಯ ದಾರಿಯನ್ನು ಬದಲಿಸಲಿಲ್ಲ.

ಜೋಯಿಸರಿಗೆ ಮೊದಲು ಚಳ್ಳಕೆರೆಯಿಂದ ತಂದ ಹೆಣ್ಣಿನೊಂದಿಗೆ ವಿವಾಹವಾಗಿತ್ತಾದರೂ, ಆಕೆ ಅಲ್ಪ ಕಾಲದಲ್ಲಿಯೇ ತೀರಿಹೋದದ್ದರಿಂದ ಎರಡನೆಯ ಮದುವೆಯಾಗಬೇಕಾಗಿ ಬಂತು. ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಕ್ಯಾಲನೂರು ಗ್ರಾಮದ ಜೋಡಿದಾರ ಶಂಕರಪ್ಪನವರ ಮಗಳು ಸರಸ್ವತಮ್ಮ ಎಂಬುವರನ್ನು ಮದುವೆಯಾಗಿ ಶ್ರೀನಿವಾಸ ಜೋಯಿಸರು ಗೃಹಸ್ಥ ಜೀವನವನ್ನು ಆರಂಭಿಸಿದರು. ಈ ದಂಪತಿಗಳಿಗೆ ಪಾಂಡುರಂಗ ಜೋಯಿಸ, ನಾಗರಾಜ ಶರ್ಮ, ಮಯೂರ ಶರ್ಮ, ವಿದ್ಯಾರಣ್ಯ, ಕುಮಾರಸ್ವಾಮಿ, ಪುಂಡಲೀಕ ಮತ್ತು ಧ್ರುವ ಎಂಬ ಗಂಡು ಮಕ್ಕಳೂ, ರಾಜಮ್ಮ (ರಾಜಲಕ್ಷ್ಮಿ), ಸಾವಿತ್ರಮ್ಮ, ಸುಶೀಲಮ್ಮ ಮತ್ತು ಶಕುಂತಲ ಎಂಬ ಹೆಣ್ಣು ಮಕ್ಕಳೂ ಆದರು. ಈ ಮಕ್ಕಳಲ್ಲಿ ಕುಮಾರಸ್ವಾಮಿ, ಪುಂಡಲೀಕ, ಶಕುಂತಲ ಮತ್ತು ಧ್ರುವ ಚಿಕ್ಕವರಿದ್ದಾಗಲೇ ತೀರಿಕೊಂಡರು. ತದನಂತರದ ಕಾಲದಲ್ಲಿ ಸುಶೀಲಮ್ಮ ವಿದ್ಯಾರಣ್ಯರೂ ತೀರಿಕೊಂಡರು. ೧೯೩೪ರಲ್ಲಿ ಜೋಯಿಸರು ತಮ್ಮ ೪೮ರ ವಯಸ್ಸಿನಲ್ಲಿರುವಾಗ, ಸುಖಕ್ಕಿಂತ ಕಷ್ಟವೇ ಹೆಚ್ಚಿಗೆ ಇದ್ದರೂ ಅವರೊಂದಿಗೆ ನಗುನಗುತ್ತ ಬಾಳನ್ನು ಸಾಗಿಸಿಕೊಂಡು ಬಂದ ಅವರ ಪತ್ನಿ ಸರಸ್ವತಮ್ಮ ಅನಾರೋಗ್ಯದಿಂದ ಹಾಸುಗೆ ಹಿಡಿದು, ಚೇತರಿಸಿಕೊಳ್ಳಲಾಗದೆ ವಿಧಿವಶರಾದರು. ಜೋಯಿಸರು ಮನಸ್ಸು ಮಾಡಿದ್ದರೆ ಮರು ಮದುವೆಯಾಗಲು ಆಗ ಸಾಧ್ಯವಿತ್ತು. ಆದರೆ ಅದನ್ನು ಬಯಸದೆ ಅವರು ತಮ್ಮ ಮಕ್ಕಳ ಪಾಲನೆ, ವಕೀಲಿವೃತ್ತಿ, ಜೊತೆಗೆ ಸಂಶೋಧನೆ ಇತ್ಯಾದಿಗಳಲ್ಲಿ ಮನಸ್ಸನ್ನು ತೊಡಗಿಸಿ ತಮ್ಮ ಮುಂದಿನ ಬದುಕನ್ನು ಸಾಗಿಸಿದರು.

ಜೋಯಿಸರ ಅಣ್ಣ ವೆಂಕಾಜೋಯಿಸರು ಬಹುಕಾಲ ಪುರಪುರೋಹಿತರಾಗಿ ಪೂರ್ವಿಕರ ವೃತ್ತಿಯನ್ನೇ ಮುಂದುವರಿಸಿದರು. ಅವರ ಮನೆತನದವರು ಚಿತ್ರದುರ್ಗ ತಾಲ್ಲೂಕು ಭರಮಸಾಗರದಲ್ಲಿ ಇದ್ದಾರೆ. ತಮ್ಮ ಸುಬ್ಬಾ ಜೋಯಿಸರು ಉನ್ನತ ವ್ಯಾಸಂಗ ಮಾಡಿ ಕಾಲೇಜಿನಲ್ಲಿ ರಸಾಯನ ಶಾಸ್ತ್ರದ ಉಪನ್ಯಾಸಕರಾದರು. ಇವರ ಸಂತತಿಯವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಜೋಯಿಸರು ತಮ್ಮ ಸಂಶೋಧನೆಯ ಸಾಧನೆಯಿಂದ ದೊಡ್ಡ ಹೆಸರು ಗಳಿಸಿದರು; ಆದರೆ ವಕೀಲಿ ವೃತ್ತಿಯಿಂದ ಮಾತ್ರ ಯಾವ ದೊಡ್ಡ ಆಸ್ತಿಪಾಸ್ತಿಯನ್ನೂ ಸಂಪಾದಿಸಲಿಲ್ಲ. ಅವರು ಸಂಶೋಧನೆಯನ್ನು ಬಿಟ್ಟು ಅಥವಾ ಕಡಮೆ ಮಾಡಿ ವಕೀಲಿಯ ಕಡೆಗೆ ಹೆಚ್ಚು ಗಮನಕೊಟ್ಟಿದ್ದರೆ ಚೆನ್ನಾಗಿ ಹಣ ಆಸ್ತಿ ಸಂಪಾದಿಸಬಹುದಿತ್ತು ಎಂದು ಅವರನ್ನು ಬಲ್ಲವರು ಹೇಳುತ್ತಾರೆ. ವಕೀಲಿವೃತ್ತಿ ಚೆನ್ನಾಗಿ ನಡೆಯುತ್ತಿದ್ದಾಗ ಇದ್ದುದರಲ್ಲಿ ಒಂದು ದೊಡ್ಡ ಮನೆಯನ್ನೂ ಅದರ ಹಿಂದೆ ಒಂದು ಚಿಕ್ಕ ಮನೆಯನ್ನೂ ಕಟ್ಟಿಸಿದ್ದ ಅವರು

ಮಕ್ಕಳ ಪೋಷಣೆ ಶಿಕ್ಷಣ ಮುಂತಾದುವುಗಳಿಗಾಗಿ ಮುಂದಿನ ದೊಡ್ಡ ಮನೆಯನ್ನು ಮಾರಬೇಕಾಗಿ ಬಂದದ್ದು ಒಂದು ವ್ಯಥೆಯ ಕಥೆ.

ಚಿತ್ರದುರ್ಗದ ವಕೀಲರೆಲ್ಲ ಸೇರಿ ದುರ್ಗದ ಈಶಾನ್ಯದ ಅಂಚಿನಲ್ಲಿ ತಮ್ಮದೇ ಒಂದು ಬಡಾವಣೆಯನ್ನು ಕಟ್ಟಲು ನಿರ್ಧರಿಸಿದರು. ಅದು ಆಗ ಕಾಡು ಗಿಡ ಪೊದೆಗಳಿಂದ ಕೂಡಿ ಹಾವು ಚೇಳು ಮುಂತಾದ ಅಪಾಯಕಾರಿ ಪ್ರಾಣಿಗಳ ಬೀಡಾಗಿದ್ದ ಊರ ಹೊರಗಿನ ಜಾಗ. ಆದರೂ ಧೈರ್ಯಮಾಡಿ ಅಲ್ಲಿ ಮೊದಲಿಗೆ ಮನೆ ಕಟ್ಟಿದವರೆಂದರೆ ತಳುಕಿನ ರಾಮಸ್ವಾಮಯ್ಯನವರು ಮತ್ತು ಜೋಯಿಸರು ಇಬ್ಬರೇ. ಊರೊಳಗಿನ ಹಳೆಯ ಮನೆಯನ್ನು ಬಿಟ್ಟು ಹೊಸ ಮನೆಗೆ (ಸುಮಾರು ೧೯೩೦ರಲ್ಲಿ) ಬಂದದ್ದೂ ಆಯಿತು; ಕೆಲವು ಕಾಲ ಇದ್ದದ್ದೂ ಆಯಿತು. ಆದರೆ ಮುಂದೆ ಆ ಮನೆಯನ್ನು ಉಳಿಸಿಕೊಳ್ಳುವುದು ಮಾತ್ರ ಸಾಧ್ಯವಾಗಲಿಲ್ಲ. ದೊಡ್ಡಮನೆ ಕೈಬಿಟ್ಟು ಹೋದರೂ ಹಿಂದಿನ ಚಿಕ್ಕ ಮನೆಯಾದರೂ ಉಳಿಯಿತಲ್ಲ ಎಂಬುದೇ ಜೋಯಿಸರಿಗಾದ ತೃಪ್ತಿ. 'ವಿಶ್ವಾಮಿತ್ರಾಶ್ರಮ' ಎಂದು ಹೆಸರಿಟ್ಟ ಆ ಮನೆಯಲ್ಲಿ ಅವರು ತಮ್ಮ ಕೊನೆಯುಸಿರೆಳೆಯುವವರೆಗೂ ವಾಸ ಮಾಡಿದರು. ಅವರ ತರುವಾಯ ಅದರಲ್ಲಿ ಅವರ ಹಿರಿಯ ಮಗ ಪಾಂಡುರಂಗ ಜೋಯಿಸರು ವಾಸಿಸುತ್ತಿದ್ದರು. ಆ ಸರಳ ಮನೆ ಈಗಲೂ ಇದ್ದು ಹುಲ್ಲೂರು ಶ್ರೀನಿವಾಸ ಜೋಯಿಸರ ಮತ್ತು ಪಾಂಡುರಂಗ ಜೋಯಿಸರ ನೆನಪನ್ನು ತರುತ್ತದೆ.

■■

# ಸ್ವಾತಂತ್ರ್ಯ ಹೋರಾಟ - ' ಮೈಸೂರು ಚಲೋ ' ಚಳುವಳಿ

ಚಿತ್ರದುರ್ಗದಲ್ಲಿ ವಕೀಲಿ ವೃತ್ತಿಗೆ ಆಗ ಹಲವರು ಹೆಸರಾಗಿದ್ದರು. ಸಿ. ಚನ್ನಕೇಶವಯ್ಯ, ಎಚ್.ಜಿ. ಕೃಷ್ಣರಾವ್, ಹರಿಹರದ ಗುಂಡೂರಾವ್, ಸಿ. ಖಂಡೇರಾವ್, ಎ. ಅನಂತಯ್ಯ ಶೆಟ್ಟಿ, ಎಂ.ಬಿ. ಕೃಷ್ಣರಾವ್, ಎಸ್. ನರಸಿಂಹ ಮೂರ್ತಿ, ಕಡ್ಲೇಬಾಳು ಭೀಮರಾವ್, ಎಚ್.ಎಸ್. ವೆಂಕಟಾಚಲಯ್ಯ, ಎಸ್. ವೀರಬಸಪ್ಪ, ಓ. ವೀರಬಸಪ್ಪ, ಟಿ.ಎಸ್. ರಾಮಸ್ವಾಮಯ್ಯ ಮುಂತಾದ ವಕೀಲ ಜೊತೆಯಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರೂ ಒಬ್ಬರಾದರು.

ಜೋಯಿಸರು ವಕೀಲಿ ವೃತ್ತಿಯನ್ನು ಹಿಡಿದು ಇಪ್ಪತ್ತು ವರ್ಷಗಳಾದರೂ ಹೇಳಿಕೊಳ್ಳುವಂತಹ ಸಂಪಾದನೆಯನ್ನೇನೂ ಮಾಡಲಿಲ್ಲ. ಅದಕ್ಕೆ ಕಾರಣ ಅವರು ಬಂದ ಎಲ್ಲಾ ಕೇಸುಗಳನ್ನು ಹಿಡಿಯುತ್ತಿರಲಿಲ್ಲ. ಅದರಲ್ಲೂ ಸುಳ್ಳು ಕೇಸುಗಳನ್ನು ಅವರು ತೆಗೆದುಕೊಳ್ಳುತ್ತಲೇ ಇರಲಿಲ್ಲ. '' ಇಂಥ ಕೇಸು ಇದ್ದರೆ ಬೇರೆ ವಕೀಲರ ಹತ್ತಿರ ಹೋಗಿ '' ಎಂದು ಭಿಡೆ ಇಲ್ಲದೆ ಹೇಳಿಬಿಡುತ್ತಿದ್ದರು.

ಆಮಧ್ಯೆ ಇಡೀ ದೇಶದಲ್ಲಿ ಉಕ್ಕಿ ಹರಿಯುತ್ತಿದ್ದ ಸ್ವಾತಂತ್ರ್ಯ ಹೋರಾಟದ ಪ್ರವಾಹ ಅವರನ್ನೂ ಸೆಳೆಯಿತು. ಚಿತ್ರದುರ್ಗದಲ್ಲಿ ಅಷ್ಟು ಹೊತ್ತಿಗೆ ಮಹಾರಾಷ್ಟ್ರದ ಬಾಲಗಂಗಾಧರ ತಿಲಕರಿಂದ ಪ್ರಭಾವಿತರಾದ ವಕೀಲ ಹರಿಹರದ ಗುಂಡೂರಾವ್ ಅವರು ' ತಿಲಕ್ ಸಂಘ ' ಎಂಬ ಸಂಘವೊಂದನ್ನು ಹುಟ್ಟುಹಾಕಿ, ಒಂದು ಉಚಿತ ವಾಚನಾಲಯವನ್ನೂ ಪುಸ್ತಕ ಭಂಡಾರವನ್ನೂ ಪ್ರಾರಂಭಿಸಿದ್ದರು. ಆ ಸಂಘದ ಮೂಲಕ ಮಹಾರಾಷ್ಟ್ರದಲ್ಲಿ ತಿಲಕರು ಮಾಡಿದಂತೆ ಗಣಪತಿ ಉತ್ಸವ ಏರ್ಪಡಿಸುವುದು, ಪ್ರಚಲಿತ ಸಮಸ್ಯೆಗಳ ಬಗ್ಗೆ ಗೋಷ್ಠಿ ಏರ್ಪಡಿಸುವುದು. ಆಲೂರು ವೆಂಕಟರಾಯರು, ರಂಗನಾಥ ದಿವಾಕರ, ನಾ.ಸು. ಹರ್ಡೀಕರ್, ಡಾ. ಭರದ್ವಾಜ್ ಇಂಥವರನ್ನು ಕರೆಸಿ ಅವರಿಂದ ಉಪನ್ಯಾಸ ಮಾಡಿಸುವುದು ಸ್ವಯಂಸೇವಕರನ್ನು ತರಬೇತುಗೊಳಿಸುವುದು - ಇಂಥ ಚಟುವಟಿಕೆಗಳ ಮೂಲಕ ಸ್ವಾತಂತ್ರ್ಯ ಆಂದೋಲನದ ಕಿಡಿಯನ್ನು ಹೊತ್ತಿಸಿದ್ದರು. ಜೊತೆಗೆ ಸ್ವದೇಶೀ ಚಳುವಳಿಯ ಅಂಗವಾಗಿ ಖಾದಿ ಪ್ರಚಾರ, ಖಾದಿ ಧಾರಣ, ವಿದೇಶೀ ವಸ್ತ್ರ ದಹನ,

ಗಾಂಧೀಜಿಯವರಂತೆ ಚರಕದಿಂದ ನೂಲು ತೆಗೆಯುವುದು, - ಇಂಥ ಕಾರ್ಯಗಳ ಮೂಲಕ, ತಾವೇ ರಚಿಸಿ ಪ್ರಕಟಿಸಿದ ' ಖಾದಿ ಮಹಿಮೆ ' ಎಂಬ ಪುಸ್ತಕದ ಮೂಲಕ ಗುಂಡೂರಾವ್ ಸಾರ್ವಜನಿಕರನ್ನು ಚಳುವಳಿಗೆ ಸೆಳೆದಿದ್ದರು.

ಗಾಂಧೀಜಿಯವರ ವಿಚಾರಧಾರೆಗೆ ಮನಸೋತ ಜೋಯಿಸರು ಗಾಂಧೀಜಿ ಅವರ ಅಪ್ಪಟ ಅನುಯಾಯಿಯಾದರು: ಖಾದಿಧಾರಿಯಾದರು; ಕಾಂಗ್ರೆಸ್ ಸದಸ್ಯರಾದರು; (ತಮ್ಮ ಆಪ್ತಮಿತ್ರ, ಎಸ್. ನಿಜಲಿಂಗಪ್ಪನವರಿಗಿಂತ ಮುಂಚೆಯೇ ಅವರು ಕಾಂಗ್ರೆಸ್ಸಿನಲ್ಲಿದ್ದರು ಎಂಬುದನ್ನು ಗಮನಿಸಬೇಕು). ಸ್ವದೇಶೀ ವಸ್ತುಗಳನ್ನು ಬಳಸುವ ವ್ರತ ತೊಟ್ಟರು; ಸ್ವದೇಶೀ ಮತ್ತು ಖಾದಿ ಪ್ರಚಾರ ಕೈಗೊಂಡರು; ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡರು; ಎರಡು ಬಾರಿ ಜೈಲುವಾಸವನ್ನೂ ಅನುಭವಿಸಿದರು.

೧೯೩೯ರಲ್ಲಿ ' ಅರಣ್ಯ ಸತ್ಯಾಗ್ರಹ ' ಎಂಬ ಪ್ರಸಿದ್ಧ ಸತ್ಯಾಗ್ರಹ ಜಿಲ್ಲೆಯಲ್ಲಿ ನಡೆಯಿತು. ಆಗ ಜೋಯಿಸರಿಗೆ ಅದರಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಲು ಆಗಲಿಲ್ಲ. ಆದರೆ೧೯೪೨ರಲ್ಲಿ ' ಕ್ವಿಟ್ ಇಂಡಿಯ ' ಚಳುವಳಿಯ ಕಾಲಕ್ಕೆ, ಚಿತ್ರದುರ್ಗದಲ್ಲಿ ( ಆಗ ನೀಲಕಂಠೇಶ್ವರ ದೇವಸ್ಥಾನದ ಬಳಿ ಇದ್ದ) ಕಾಂಗ್ರೆಸ್ ಕಛೇರಿಯ ಮೇಲೆ, ಸರ್ಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ, ರಾಷ್ಟ್ರಧ್ವಜವನ್ನು ಹಾರಿಸಿ ' ಧ್ವಜ ಸತ್ಯಾಗ್ರಹ 'ವನ್ನು ನಡೆಸಿದರು. ಆ ಕಾರಣಕ್ಕೆ ದಸ್ತಗಿರಿಯಾದ ಅವರು ಸುಮಾರು ಒಂದೂವರೆ ವರ್ಷಕಾಲ ಬೆಂಗಳೂರಿನ ಸೆಂಟ್ರಲ್ ಜೈಲಿನಲ್ಲಿ ಇರಬೇಕಾಯಿತು.

ಆಗ ದುರ್ಗದಲ್ಲಿ ಅವರ ಮನೆಯಲ್ಲಿದ್ದವರು ಅವರ ವಯಸ್ಸಾದ ತಾಯಿ ಮತ್ತು ಅವರ ಚಿಕ್ಕಮಕ್ಕಳು ಹಾಗೂ ಅವರ ತಂಗಿ ಪುಟ್ಟಮ್ಮ ಮತ್ತು ಅವರ ಮಕ್ಕಳು. ತಂಗಿ ಪುಟ್ಟಮ್ಮನನ್ನು ರೈಲ್ವೆ ಇಲಾಖೆಯಲ್ಲಿ ಸ್ಟೇಷನ್ ಮಾಸ್ಟರ್ ಆಗಿದ್ದ ತಾಳ್ಯದ ಸುಬ್ಬರಾವ್ ಎಂಬುವರಿಗೆ ಕೊಟ್ಟಿತ್ತು. ಆಗ ಎರಡನೇ ಮಹಾ ಯುದ್ಧ ನಡೆಯುತ್ತಿದ್ದುದರಿಂದ ಬೆಂಗಳೂರಿನ ಮೇಲೆ ಶತ್ರುಗಳು ಬಾಂಬ್ ಹಾಕಲಿದ್ದಾರೆ ಎಂಬ ವದಂತಿ ದಟ್ಟವಾಗಿದ್ದದ್ದರಿಂದ ತಂಗಿ ತನ್ನ ಮಕ್ಕಳೊಂದಿಗೆ ಜೋಯಿಸರ ಮನೆಗೆ ಬಂದಿದ್ದರು ಎಂದು ಹೇಳುತ್ತಾರೆ.. ಜೋಯಿಸರು ದಸ್ತಗಿರಿಯಾಗಿ ಜೈಲು ಸೇರಬೇಕಾಗಿ ಬಂದಾಗ ಮನೆಯಲ್ಲಿದ್ದವರಿಗೆ ಯಾವ ವ್ಯವಸ್ಥೆಯೂ ಇಲ್ಲದ ದಾರುಣಸ್ಥಿತಿ. ಅಂಥ ಪರಿಸ್ಥಿತಿಯಲ್ಲೂ ಜೋಯಿಸರು ನಿಶ್ಚಲ ಮನಸ್ಸಿನಿಂದ ದೇಶಪ್ರೇಮವನ್ನು ಮೆರೆದರು.

ಜೈಲಲ್ಲಿದ್ದ ಅವಧಿಯಲ್ಲಿ ಒಮ್ಮೆ ಅವರು ಕಾಯಿಲೆಗೆ ತುತ್ತಾದರು. ಕೈಕಾಲು ಕೀಲುಗಳು ಹಿಡಿದುಕೊಂಡು ಓಡಾಡಲಿಕ್ಕೇ ಆಗದಂತಾಯಿತು. ಸ್ವಾತಂತ್ರ್ಯ ಹೋರಾಟದಲ್ಲಿ ದುಮುಕಿ ಜತೆಯಲ್ಲೆ ಜೈಲುವಾಸಿಗಳಾಗಿದ್ದ ಆಪ್ತಮಿತ್ರ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರೂ ಇತರ ಕೆಲವರೂ ಅಲ್ಲದೆ ಜೈಲಿನ ಅಧಿಕಾರಿಗಳೂ ಸಹ '' ನೀವು ಏನಾದರೂ

ವಿವರಣೆ ಬರೆದುಕೊಟ್ಟು ಜೈಲಿನಿಂದ ಪಾರಾಗಿ ಹೋಗಿ; ಚಿಕಿತ್ಸೆ ಮಾಡಿಸಿಕೊಳ್ಳಿ'' ಎಂದು ಹೇಳಿದರು, ಒತ್ತಾಯಿಸಿದರು. ಆದರೆ ಜೋಯಿಸರು ಅದಕ್ಕೆ ಒಪ್ಪಲಿಲ್ಲ. ''ನಾನು ಹಾಗೆ ಜೈಲಿನಿಂದ ಹೊರಗೆ ಹೋಗುವುದಿಲ್ಲ; ಸತ್ತರೆ ಇಲ್ಲೇ ಸಾಯುತ್ತೇನೆ'' ಎಂದು ಹೇಳಿ ಅಲ್ಲೇ ಉಳಿದರು. (ಈ ಸಂಗತಿಯನ್ನು ಎಸ್. ನಿಜಲಿಂಗಪ್ಪನವರು ಸ್ಮರಿಸಿಕೊಂಡು ಜೋಯಿಸರ ಛಲವನ್ನೂ ದೇಶಪ್ರೇಮವನ್ನೂ ಕೊಂಡಾಡುತ್ತಿದ್ದರು).

ಜೋಯಿಸರು ಜೈಲು ಸೇರಿದ ಸಂಗತಿ ಸ್ವಲ್ಪ ಕಾಲದ ಮೇಲೆ ತಿಳಿದು, ಮುಂಬೈಯಲ್ಲಿ ಕೆಲಸದಲ್ಲಿದ್ದ ಅವರ ಹಿರಿಯಮಗ ಪಾಂಡುರಂಗ ಜೋಯಿಸರು, ಮನೆಯ(ಲ್ಲಿದ್ದವರ)ನ್ನು ನೋಡಿಕೊಳ್ಳಲು ಚಿತ್ರದುರ್ಗಕ್ಕೆ ಬಂದರು. ಆ ಹೊತ್ತಿಗೆ ಶ್ರೀನಿವಾಸ ಜೋಯಿಸರು ಬೆಂಗಳೂರಿನಿಂದ ಹೊರಡುತ್ತಿದ್ದ 'ತಾಯಿನಾಡು' 'ವಿಶ್ವಕರ್ನಾಟಕ'ದಂಥ ಪತ್ರಿಕೆಗಳಿಗೆ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು. ಈಗ ಅವರು ಜೈಲು ಸೇರಿದ್ದರಿಂದ ಮಗ ಪಾಂಡುರಂಗ ಜೋಯಿಸರು ತಂದೆಯ ಕೆಲಸವನ್ನು ಮುಂದುವರಿಸಿದರು. ತಂದೆಯ ಸ್ವಾತಂತ್ರ್ಯ ಹೋರಾಟ ದೇಶಪ್ರೇಮದಿಂದ ಸ್ಫೂರ್ತಿಪಡೆದ ಅವರು ಪತ್ರಿಕೆಗಳಿಗೆ ಚಳುವಳಿಯ ವರದಿಗಳನ್ನು ಕಳಿಸಿಕೊಡಲಾರಂಭಿಸಿದರು. ಆಗ ಪೋಲೀಸರು ಜಿಲ್ಲಾ ಮ್ಯಾಜಿಸ್ಟ್ರೇಟರು ಅವರಿಗೆ ಬೆದರಿಕೆ ಹಾಕಿ ನಿರ್ಬಂಧದಲ್ಲಿಡಲು ಪ್ರಯತ್ನಿಸಿದರು. ಆದರೆ ಅದಕ್ಕೆ ಅವರು ಅಧೀರರಾಗದೆ ತಮ್ಮ ಕಾರ್ಯವನ್ನು ಬಿಡದೆ ಹೇಗೋ ಮುಂದುವರಿಸಿದರು.

ಬೆಂಗಳೂರಿನ ಸೆಂಟ್ರಲ್ ಜೈಲಲ್ಲಿ ಖಾದಿ ಧಾರಿ ಚಳುವಳಿಗಾರರಿಗಾಗಿಯೇ 'ಖಾದಿ ಬ್ಯಾರಕ್' ಎಂಬ ಪ್ರತ್ಯೇಕ ವಿಭಾಗವಿತ್ತು. ಅಲ್ಲಿದ್ದ ಜೋಯಿಸರು ಕಾಯಿಲೆ ಬಿದ್ದು ಸ್ವಲ್ಪ ಕಾಲಾನಂತರ ಚೇತರಿಸಿಕೊಂಡು (ಸುಮಾರು ಒಂದು ವರ್ಷದ ಮೇಲೆ) ಜೈಲಿಂದ ಬಿಡುಗಡೆಯಾಗಿ ಬಂದರು. ಗೆಲವಿನಿಂದ ಅವರು ಊರಿಗೆ ಮರಳಿದಾಗ ಮನೆಯಲ್ಲಿ ಅವರ ವೃದ್ಧತಾಯಿ ಪಾರ್ವತಮ್ಮ ಮತ್ತು ಮಕ್ಕಳು ಎಲ್ಲರೂ ವಿಷಮಶೀತಜ್ವರ (ಟೈಫಾಯ್ಡ್)ದಿಂದ ನರಳುತ್ತ ಮಲಗಿದ್ದರು. ಉಪಚಾರ ಪಡೆಯಬೇಕಿದ್ದ ಜೋಯಿಸರೇ ಎಲ್ಲರನ್ನೂ ಉಪಚರಿಸಬೇಕಾಯಿತು. ಅಂದು ಸಂಭವಿಸಿದ ಒಂದು ದುರಂತ ಎಂದರೆ, ಹಿಂದೆಯೇ ಹೇಳಿದಂತೆ ಮಕ್ಕಳಾದ ಸುಶೀಲಮ್ಮ ವಿದ್ಯಾರಣ್ಯರು ಆ ಕಾಯಿಲೆಯಲ್ಲೇ ಅಸುನೀಗಿದ್ದು. ಯಾವುದಕ್ಕೂ ಧೃತಿಗೆಡದೆ ಜೋಯಿಸರು ಬಂದದ್ದನ್ನೆಲ್ಲ ಎದುರಿಸಿದರು. ಅದೇ ಹೊತ್ತಿಗೆ ಜಿಲ್ಲೆಯ ಜನ ಘೋರ ಬರಗಾಲದ ದವಡೆಗೆ ತುತ್ತಾಗುವ ದುರ್ಭರ ಪ್ರಸಂಗ ಬೇರೆ ಬಂದಿತು. ಆಗ ಜೋಯಿಸರು ಹಳ್ಳಿಹಳ್ಳಿಗಳನ್ನು ಸುತ್ತಿ, ಬಸವಳಿದ ಜನತೆಗೆ ಸರ್ಕಾರದ ವತಿಯಿಂದ ಗಂಜಿ ಕೇಂದ್ರಗಳನ್ನು ತೆರೆಯಲು ಶಕ್ತಿಮೀರಿ ಶ್ರಮಿಸಿದರು. ತಾವೇ ಸಂಕಷ್ಟದ ಸ್ಥಿತಿಯಲ್ಲಿದ್ದರೂ ಅವರು ಸಮಾಜದ ಸಂಕಷ್ಟಕ್ಕೆ ಸ್ಪಂದಿಸಿದ್ದು ಅವರ ಜನ

ಹಿತ ದೃಷ್ಟಿಗೆ ಸಾಕ್ಷಿಯಾಗಿದೆ.

ಜೋಯಿಸರು ಖಾದಿಧಾರಿಗಳಾಗಿ ಖಾದಿ ಪ್ರಚಾರವನ್ನು ಕೈಗೊಂಡರೆಂದು ಹಿಂದೆಯೇ ಹೇಳಲಾಯಿತಷ್ಟೆ. ಚಿತ್ರದುರ್ಗದ ಅಯ್ಯಣ್ಣನ ಪೇಟೆಯಲ್ಲಿ, ತಮ್ಮ ಪೂರ್ವಿಕರಿಂದ ಬಂದಿದ್ದ, ಸ್ವಂತ ಮನೆಯಲ್ಲೇ ಮಳಿಗೆಯೊಂದನ್ನು ತೆರೆದು ಖಾದಿ ಮಾರಾಟಕ್ಕೆ ಅವರು ವ್ಯವಸ್ಥೆಯನ್ನು ಕಲ್ಪಿಸಿದ್ದರು. ಎರಡು ಮೂರು ವರ್ಷ ತಾವೇ ಅದನ್ನು ನಡೆಸಿಕೊಂಡು ಬಂದರಾದರೂ ಆಮೇಲೆ ಅವರು ಅದನ್ನು ನೋಡಿಕೊಂಡು ಹೋಗಲು ಜೋಷಿ ಎಂಬುವರೊಬ್ಬರನ್ನು ಪ್ರೋತ್ಸಾಹಿಸಿ, ಅದನ್ನು ಅವರ ಸುಪರ್ದಿಗೇ ಬಿಟ್ಟು ಕೊಟ್ಟರು. ಕೊನೆಯವರೆಗೂ ಅವರು ಖಾದಿಯನ್ನು ಬಿಟ್ಟು ಬೇರೆ ಏನನ್ನೂ ಧರಿಸಲಿಲ್ಲ.

ಮುಂದೆ ೧೯೪೭ರ ಆಗಸ್ಟ್ ೧೫ಕ್ಕೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಿತಷ್ಟೆ. ಆಗ ಭಾರತ ಒಪ್ಪಿಕೊಂಡಿದ್ದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಗಿನ ಮೈಸೂರು ಸಂಸ್ಥಾನದ ಒಡೆಯರ್ ಅವರ ಪ್ರಭುತ್ವ ಇನ್ನೂ ಒಪ್ಪಿಕೊಂಡಿರಲಿಲ್ಲ. ಆ ನಿಲವಿನ ವಿರುದ್ಧ ಅದೇ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ 'ಮೈಸೂರು ಚಲೋ' ಎಂಬ ಮತ್ತೊಂದು ಚಳುವಳಿ ರೂಪುಗೊಂಡಿತು. ಆಗ ಜೋಯಿಸರು ಅದರಲ್ಲೂ ಪಾಲ್ಗೊಂಡರು. ಆ ಚಳುವಳಿ ತೀವ್ರ ಸ್ವರೂಪ ತಳೆದಾಗ, ಪರಿಸ್ಥಿತಿಯನ್ನು ಹತೋಟಿಗೆ ತೆಗೆದುಕೊಳ್ಳಲು ಮುಂಚಿತವಾಗಿಯೇ ಕೆಲವರನ್ನು ಬಂಧಿಸಿ ಸೆರೆಯಲ್ಲಿಡಲಾಯಿತು. ಹಾಗೆ ಬಂಧಿತರಾದ ಪ್ರಮುಖರಲ್ಲಿ ಜೋಯಿಸರೂ ಒಬ್ಬರು. ಹೀಗೆ ಅವರು ಮತ್ತೆ ಕೆಲವು ತಿಂಗಳು ಬೆಂಗಳೂರಿನ ಅದೇ ಸೆಂಟ್ರಲ್ ಜೈಲಿನಲ್ಲಿ ಕಳೆಯಬೇಕಾಯಿತು. ಈ ಮಧ್ಯೆ ಚಿತ್ರದುರ್ಗದ ದೊಡ್ಡಗರಡಿಯ ತರುಣ ಪೈಲ್ವಾನ ನಂಜಪ್ಪ (ಮತ್ತು ಮಿತ್ರರು) ಚಿತ್ರದುರ್ಗದ ತಾಲ್ಲೂಕು ಕಛೇರಿಯ ಮೇಲೆ ರಾಷ್ಟ್ರಧ್ವಜ ಹಾರಿಸಿದ್ದು, ಪೋಲೀಸರು ಗೋಲಿಬಾರ್ ಮಾಡಿದ್ದು, ಮಿಂಚಿನ ವೇಗದಲ್ಲಿ ನಂಜಪ್ಪ ಗುಂಡಿನಿಂದ ಪಾರಾಗಿ ತಪ್ಪಿಸಿಕೊಂಡು ಹೋದದ್ದು, ಇದಾದ ಕ್ಷಿಪ್ರಕಾಲದಲ್ಲೇ ಮೈಸೂರು ಸಂಸ್ಥಾನದ ಸರ್ಕಾರ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡು ಘೋಷಣೆ ಹೊರಡಿಸಿದ್ದು - ಅದೆಲ್ಲ ಈಗ ಅತ್ಯಂತ ರೋಚಕವಾದ ಇತಿಹಾಸ. ಇದೆಲ್ಲ ಆಗುವವರೆಗೆ ಬಂಧನದಲ್ಲಿದ್ದ ಜೋಯಿಸರು ಆಮೇಲೆ ಬಿಡುಗಡೆಯಾಗಿ ಹೊರಬಂದರು.

ಮುಂದೆ ಗಾಂಧೀಜಿಯವರು ನಿಧನರಾದ ಕಾಲಕ್ಕೆ ಅವರ ಚಿತಾಭಸ್ಮವನ್ನು ರಾಜ್ಯಕ್ಕೆ ತಂದಾಗ, ಅದರ ಒಂದು ಭಾಗವನ್ನು ಚಿತ್ರದುರ್ಗಕ್ಕೆ ತಂದು, ಮುಂದೆ ಅದನ್ನು ಹರಿಹರದ ಬಳಿ ತುಂಗಭದ್ರಾ ನದಿಯಲ್ಲಿ ವಿಸರ್ಜಿಸಲಾಯಿತು. ಈ ಕಾರ್ಯದಲ್ಲೂ ಸಹ ಜೋಯಿಸರು ಉತ್ಸಾಹದಿಂದ ಪಾಲ್ಗೊಂಡರು.

■■

# ಜೋಯಿಸರು, ಮನೆ ಮತ್ತು ಮಕ್ಕಳು

ಜೋಯಿಸರು ತಾವು ಕಟ್ಟಿಸಿದ ಮನೆಗೆ ತಮ್ಮ ಗೋತ್ರ ಪುರುಷನ ಹೆಸರನ್ನೇ ಇಟ್ಟು 'ವಿಶ್ವಾಮಿತ್ರಾಶ್ರಮ' ಎಂದು ಕರೆದರು. ಅವರ ಮನೆಯ ಹಿಂಭಾಗದಲ್ಲಿ ಒಂದು ಬಾವಿ. ಅದರ ಆಚೆಗೆ ಸಾಲಾಗಿ ನರಸಿಂಹಮೂರ್ತಿ, ಖಂಡೇರಾವ್ ಮುಂತಾದ ವಕೀಲರ ಮನೆಗಳಿದ್ದವು. ಆದರ ಆಚೆ ಸ್ವಲ್ಪ ದೂರದಲ್ಲಿ ವಕೀಲರಾದ ಎಸ್. ನಿಜಲಿಂಗಪ್ಪನವರ ಮನೆ ಇತ್ತು. ಈ ಎಲ್ಲ ವಕೀಲರೂ ಅವರ ಮನೆಯ ಸದಸ್ಯರು, ಜೋಯಿಸರು ಮತ್ತು ಅವರ ಮನೆಯ ಸದಸ್ಯರೊಂದಿಗೆ ಪ್ರೀತಿ ವಿಶ್ವಾಸದಿಂದ್ದರು.

ಮನೆಯ ಮುಂದುಗಡೆ ಒಂದು ಕೊಠಡಿ ನಿರ್ಮಿಸಲೆಂದು ಅರ್ಧ ಕಟ್ಟಿದ್ದ ಕಂಬ ಗೋಡೆ ಮಾತ್ರ ಬಹಳಕಾಲ ಹಾಗೆಯೇ ಉಳಿದಿತ್ತು. ಹುಡುಗರು ಅವನ್ನು ಸುತ್ತಿ ಹತ್ತಿ ಜೂಟಾಟ ಆಡುತ್ತಿದ್ದರು.

ಅವರು ಬ್ರಾಹ್ಮಣ(ಸ್ಮಾರ್ತ) ರಿದ್ದರೂ ಕರ್ಮಠರಾಗಿರಲಿಲ್ಲ; ಅಷ್ಟೇ ಅಲ್ಲ, ಮಡಿ, ಮಂತ್ರ, ಪೂಜೆ - ಪುನಸ್ಕಾರ, ಸಂಪ್ರದಾಯ ಇತ್ಯಾದಿಗಳ ಬಗ್ಗೆ ಅವರಿಗೆ ಆಸಕ್ತಿಯೇನಿರಲಿಲ್ಲ. ಹಬ್ಬ ಹರಿದಿನ ಬಂತೆಂದರೆ, ಬೇರೆ ಮನೆಗಳ ಹುಡುಗರು ಹೊಸಬಟ್ಟೆ ಹಾಕಿಕೊಂಡರೆ ಇವರ ಮಕ್ಕಳು ಮಾತ್ರ ಇದ್ದ ಬಟ್ಟೆಗಳನ್ನೆ ಸ್ವಚ್ಛಗೊಳಿಸಿ ಮಡಿಸಿಟ್ಟುಕೊಂಡು ಹಾಕಿಕೊಳ್ಳುತ್ತಿದ್ದರು. ತಂದೆ ಜೋಯಿಸರೂ ಕೂಡ ಇದ್ದ ಖಾದಿ ಪಂಚೆ ಷರಟುಗಳಲ್ಲೆ ತೃಪ್ತಿಪಟ್ಟುಕೊಳ್ಳುತ್ತಿದ್ದರು. ತಮ್ಮ ಹಾಗೆಯೇ ಮಕ್ಕಳು ಸಹ ಖಾದಿ ಬಟ್ಟೆಯನ್ನೇ ತೊಡುವಂತೆ ಹೇಳುತ್ತಿದ್ದರು. ಮಕ್ಕಳು ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದರು. ತಂದೆ ಜೋಯಿಸರು ಮನೆಯ ಹೊರಗೆ ಅನೇಕ ಚಟುವಟಿಕೆಗಳಲ್ಲಿ ಭಾಗವಹಿಸುವ ಅನಿವಾರ್ಯವಿದ್ದರೂ ಮಕ್ಕಳಿಗೆ ಯಾವ ರೀತಿಯಲ್ಲೂ ಅಸಮಾಧಾನವಾಗದಂತೆ ನೋಡಿಕೊಳ್ಳುತ್ತಿದ್ದರು.

ಜೋಯಿಸರಿಗೆ ಇತಿಹಾಸ ಪ್ರಾಚ್ಯವಸ್ತು ಕೋಟೆ ಇತ್ಯಾದಿಗಳ ಬಗ್ಗೆ ವಿಶೇಷವಾಗಿ ಗಮನಕೊಟ್ಟು ಓಡಾಡುತ್ತಿದ್ದುದ್ದರಿಂದ, ಮನೆಯ ಹೊರಗೆ ಅನೇಕ ಚಟುವಟಿಕೆಗಳನ್ನು ಭಾಗವಹಿಸುತ್ತಿದ್ದುದರಿಂದ ಹಣ ಸಂಪಾದನೆಯ ಬಗ್ಗೆ ಅವರು ಲಕ್ಷ್ಯಕೊಡಲಿಲ್ಲ. ವಕೀಲ

ವೃತ್ತಿಯಲ್ಲಿ ಬರುತ್ತಿದ್ದ ಅಷ್ಟಿಷ್ಟು ಹಣದಲ್ಲೇ ಮನೆತನವನ್ನು ತೂಗಿಸಬೇಕಾಗಿತ್ತು. ಪತ್ರಿಕೆಗಳಿಗೆ ವರದಿಗಾರರಾದ್ದಕ್ಕೆ ಆ ಕೆಲಸಕ್ಕೆ ಬರುತ್ತಿದ್ದ ಅತ್ಯಲ್ಪ ಸಂಭಾವನೆ ಸಣ್ಣಪುಟ್ಟ ಖರ್ಚಿಗೆ ಹೋಗುತ್ತಿತ್ತು. ಉಡಲು ಮತ್ತು ತೊಡಲು ಕಷ್ಟ ಪರಿಸ್ಥಿತಿ ಇದ್ದರೂ, ಊಟಕ್ಕೆ ಮಾತ್ರ ತಾಪತ್ರಯವಿರಲಿಲ್ಲ. ಮಕ್ಕಳ ಬಗ್ಗೆ ಜೋಯಿಸರ ಪ್ರೀತಿಯಲ್ಲಿ ಯಾವ ಕೊರತೆಯೂ ಇರಲಿಲ್ಲ. ಅವರ ಮಕ್ಕಳು ಇದನ್ನು ಇಂದು ಕೂಡ ನೆನಪಿಗೆ ತಂದುಕೊಳ್ಳುತ್ತಾರೆ.

ಈ ಮಧ್ಯೆ ಜೋಯಿಸರ ಮನೆಯಲ್ಲಿ ಒಮ್ಮೆ ಕಳ್ಳತನವಾಯಿತು. ಬೆಳ್ಳಿ ಬಂಗಾರ, ರೇಷ್ಮೆ ಸೀರೆ, ಬಟ್ಟೆ ಇದ್ದ ಒಂದು ಜಾಕಾಯಿ ಪೆಟ್ಟಿಗೆ ಮತ್ತು ಒಂದು ಟ್ರಂಕನ್ನು ಯಾರೋ ಅಪಹರಿಸಿದ್ದರು. ಈ ಘಟನೆ ನಡೆದ ಕಾಲಕ್ಕೆ ಜೋಯಿಸರ ತಾಯಿ ಇನ್ನೂ ಇದ್ದರು. ಕಳ್ಳರು ಎಲ್ಲ ತೆಗೆದುಕೊಂಡು ಹೋಗಿದ್ದರೂ ಎರಡು ಸೀರೆಯನ್ನು ಮಾತ್ರ ಬಿಟ್ಟು ಹೋಗಿದ್ದರು. ಅವರು ಎಸೆದು ಹೋಗಿದ್ದ, ಎರಡು ರೇಷ್ಮೆ ಸೀರೆ ದುರ್ಗದ ಬೆಟ್ಟದಲ್ಲಿ ಸಿಕ್ಕವು. ಮಧ್ಯೆ ಹರಿದ ಸೆರಗನ್ನು ಮಾತ್ರ ಮನೆಗೆ ತಂದು ಅದನ್ನು ಬಹಳ ಕಾಲದವರೆಗೆ ಇಟ್ಟುಕೊಂಡಿದ್ದರು. ಮುಂದೊಮ್ಮೆ ಚಿಕ್ಕವಳಿದ್ದ ಮೊಮ್ಮಗಳಿಗೆ (ಪಾಂಡುರಂಗ ಜೋಯಿಸರ ಪುತ್ರಿ) ಒಂದು ಲಂಗ ಹೊಲಿಸಲು ಅದನ್ನು ಬಳಸಿದ್ದಾಗಿ ಜೋಯಿಸರ ಮಗಳು ಸಾವಿತ್ರಮ್ಮ ಈಗಲೂ ನೆನಪಿಸಿಕೊಳ್ಳುತ್ತಾರೆ.

ಇದ್ದ ಒಬ್ಬಳೇ ಮಗಳಿಗೂ ಮೈಮೇಲೆ ಹಾಕಿಕೊಳ್ಳಲು ಮನೆಯಲ್ಲಿ ಹೆಚ್ಚು ಬಂಗಾರವೇನು ಇರಲಿಲ್ಲ. ಜೋಯಿಸರು ಮಗಳಿಗೆ ಒಂದು ಬಂಗಾರದ ಸರ ಕೊಟ್ಟಿದ್ದರು. ಶೃಂಗೇರಿ ಜಗದ್ಗುರುಗಳು ಜೋಯಿಸರಿಗೆ ಪ್ರಶಸ್ತಿ ಕೊಟ್ಟಾಗ ಕೊಟ್ಟಿದ್ದ ಒಂದು ಬಂಗಾರದ ಪದಕವನ್ನು ಮಗಳು ಆಗಾಗ ಖುಷಿಗೆ ಕೊರಳಲ್ಲಿ ಹಾಕಿಕೊಳ್ಳುತ್ತಿದ್ದರು. ತಾಯಿಯ ಬಂಗಾರದ ಸರ ಮುರಿಸಿ ಅದರಲ್ಲೆ ಓಲೆ ಮಾಡಿಸಿದ್ದರು. ಮಗಳಿಗೆ ಕಿವಿ ಚುಚ್ಚಿದ್ದೂ ಕೂಡ ಅವಳು ದೊಡ್ಡವಳಾದಮೇಲೆಯೇ.

ಮಗಳಿಗೆ ತಂದೆಯ ಮನೆಯಲ್ಲಿ ಇಟ್ಟದ್ದ ಹೆಸರು ಸಾವಿತ್ರಮ್ಮ. (ಗಂಡನ ಮನೆಯವರು ಕರೆದದ್ದು ಕಾಮಾಕ್ಷಮ್ಮ ಎಂದು. ಪ್ರೀತಿಗೆ ' ಪಚ್ಚಿ ' ಎಂದು ಕರೆಯುವುದು ಉಂಟು). ಮಕ್ಕಳಿಗೆಲ್ಲ ತಂದೆ ಒಂದೊಂದು ಮುದ್ದಿನ ಹೆಸರನ್ನು ಇಟ್ಟು ಕರೆಯುತ್ತಿದ್ದರು. ಹಿರಿಯ ಮಗನನ್ನು ' ರಂಗಸ್ವಾಮಿ ' ಎನ್ನುತ್ತಿದ್ದರು. ಈ ರಂಗಸ್ವಾಮಿ, ಪಾಂಡುರಂಗ ಎಂಬ ಹೆಸರೂ ಕೂಡ ಪಂಡರಹಳ್ಳಿಯ ಬೆಟ್ಟದ ಮೇಲಿರುವ ದೇವರ ಹೆಸರೇ.

ಅವರ ಮನೆಯ ಸುತ್ತಲಿನ ಜಾಗ ಒಂದು ಕೈತೋಟದಂತಿತ್ತು. ಅದರಲ್ಲೇ ಒಂದಷ್ಟು ಹಣ್ಣು ತರಕಾರಿ ಬೆಳೆಯುತ್ತಿದ್ದರು. ಪಡವಲ ಕಾಯಿ, ಹೀರೇಕಾಯಿ, ಹುರುಳಿಕಾಯಿ, ಮೂಲಂಗಿ ಮುಂತಾದ ತರಕಾರಿ ಗಿಡಗಳನ್ನು ಮತ್ತು ಸಂಪಿಗೆ ಮಲ್ಲಿಗೆ ಮುಂತಾದ ಗಿಡಬಳ್ಳಿಗಳನ್ನು ಹಾಗೂ ಪಪ್ಪಾಯಿ ಹಣ್ಣಿನ ಗಿಡಗಳನ್ನು ಬೆಳೆಸಿದ್ದರು.

ಪಪ್ಪಾಯಿ ಗಿಡಗಳಲ್ಲಿ ಉದ್ದನೆಯದಕ್ಕೆ ನಾಗರಾಜ ಎಂದೂ, ದಪ್ಪನೆಯದಕ್ಕೆ ಮಯೂರ ಎಂದೂ, ಇನ್ನೊಂದಕ್ಕೆ ವಿದ್ಯಾರಣ್ಯ ಎಂದು ಮಕ್ಕಳ ಹೆಸರನ್ನೇ ಇಟ್ಟಿದ್ದರು. ಮನೆಯ ಕಸವನ್ನೆಲ್ಲಾ ಒಂದು ಗುಂಡಿಗೆ ಹಾಕಿಸಿ ಅದರ ಮೇಲೆ ಮಣ್ಣು ಹಾಕಿಸಿ, ಅದರ ಮೇಲೆ ಬೀಜ ಊರಿಸುತ್ತಿದ್ದರು. ಅವರವರು ಬೀಜ ನೆಟ್ಟು ಬೆಳೆಸಿದ ಗಿಡಗಳಿಗೆ ಅವರವರ ಹೆಸರನ್ನೇ ಇಟ್ಟು, ಅವರವರ ಹೆಸರಿನ ಗಿಡಗಳಿಗೆ ಅವರವರೆ ನೀರು ಹಾಕುವುದು. ಕಾಳಜಿಯಿಂದ ನೋಡಿಕೊಳ್ಳುವುದು ಇಂತಹ ಕರ್ತವ್ಯವನ್ನು ವಹಿಸಿದ್ದರು. ಮಕ್ಕಳೂ ಸಹ ಅದನ್ನೆಲ್ಲ ಉತ್ಸಾಹದಿಂದಲೇ ಮಾಡುತ್ತಿದ್ದರು. ಹೀಗೆ ಮನೆಯಲ್ಲಿ ಬೆಳೆದ ಹಣ್ಣು ತರಕಾರಿಗಳನ್ನು ಮನೆಗೆ ಬಂದವರಿಗೆ ತೋರಿಸಿ '' ನೋಡಿ ಇದೆಲ್ಲಾ ನಮ್ಮ ಮನೆಯ ಕೈತೋಟದಲ್ಲಿಯೇ ಬೆಳೆದದ್ದು '' ಎಂದು ಹೇಳಿ ಅವರಿಗೂ ಕೊಟ್ಟು ಸಂತೋಷಿಸುತ್ತಿದ್ದರು.

ಜೋಯಿಸರಿಗೆ ಗಿಡ ಮರ ಬಳ್ಳಿಗಳ ಬಗ್ಗೆ ಹೇಗೋ ಹಾಗೆಯೇ ಪ್ರಾಣಿಗಳ ಬಗ್ಗೆಯೂ ಕಾಳಜಿ ಇತ್ತು. ಹಾಗಾಗಿಯೇ ಮನೆಯಲ್ಲಿ ಪಾರಿವಾಳ, ನಾಯಿ ಬೆಕ್ಕು ಸಾಕಿದ್ದರು. ನಾಯಿ ಬೆಕ್ಕುಗಳೆರಡಕ್ಕೂ ಒಂದೇ ತಟ್ಟೆಯಲ್ಲಿ ಅನ್ನ ಹಾಲು ಹಾಕಿ ಒಟ್ಟಿಗೆ ತಿನ್ನುವುದನ್ನು ಕಲಿಸಿದ್ದರು. ಅವುಗಳು ಒಟ್ಟಿಗೆ ತಿನ್ನುತ್ತಿದ್ದುದರ ಛಾಯಾಚಿತ್ರಕೂಡ ತೆಗೆದಿದ್ದರು.

ಬೆಳಗ್ಗೆ ಜೋಯಿಸರು ಚಿಕ್ಕಮಕ್ಕಳನ್ನು ಎಬ್ಬಿಸುವಾಗ ಏರುಧ್ವನಿಯಲ್ಲಿ '' ವಿಮಾನ ... ವಿಮಾನ ... ಏಳಿ... ಏಳಿ ''ಎಂದು ಕೂಗುತ್ತಿದ್ದರು. ಹಾಗೆಂದರೆ ಮೇಲೆ ವಿಮಾನ ಬರುತ್ತಿದೆ ಏಳಿ, ನೋಡಿ ಎಂದು ಹೇಳುತ್ತಿರುವರೇನೋ ಎನಿಸಿದರೂ ಅದರ ಅರ್ಥ ಸ್ವಾರಸ್ಯ ಬೇರೆಯೇ ಇತ್ತು. ವಿ = ವಿದ್ಯಾರಣ್ಯ, ಮಾ = ಮಯೂರ ಶರ್ಮ, ನ = ನಾಗರಾಜ ಶರ್ಮ ಎಂದು ಅದರ ಅರ್ಥ. ಹೀಗೆ ಮಕ್ಕಳ ಹೆಸರಿನ ಮೊದಲ ಅಕ್ಷರಗಳನ್ನು ಸೇರಿಸಿ ' 'ವಿಮಾನ' ಮಾಡಿದ್ದರು!

ಜೋಯಿಸರ ಪರಿಚಯಸ್ಥರಾದ ದೊಡ್ಡ ದೊಡ್ಡ ವ್ಯಕ್ತಿಗಳ ಮತ್ತು ಅಧಿಕಾರಿಗಳ ಮಕ್ಕಳು ಇವರಿಗೆ ಜೋಯಿಸರ ಮಕ್ಕಳೆಂದು ಬಹುವಾಗಿ ಕಾಳಜಿ ತೋರುತ್ತಿದ್ದರು. ಜೋಯಿಸರಲ್ಲಿ ಒಂದು ಸಣ್ಣ ಗ್ರಂಥ ಭಂಡಾರವೇ ಇತ್ತು. ಅವರಲ್ಲಿ ಆದರಲ್ಲಿದ್ದ ಅನೇಕ ಪುಸ್ತಕಗಳನ್ನು ಓದಲು ಮಿತ್ರರು ಆಸಕ್ತರು ಕೇಳಿ ಪಡೆಯುತ್ತಿದ್ದರು. ಹಳೆಯ ಕಾಗದ ಪತ್ರಗಳು, ಪೇಪರ್ ಕಟಿಂಗ್ ಗಳು, ತಾಳೆಗರಿ ಕಟ್ಟುಗಳು ಇಂತಹವುಗಳನ್ನು ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದರು.

ಭಾನುವಾರ ಬೀಸಿಬೇಳೆ ಬಾತು ರಾಷ್ಟ್ರೀಯ ಹಬ್ಬದ ದಿನ ಸಹಿ ತಪ್ಪದೇ ಮಾಡಿಸುತ್ತಿದ್ದರು. ಅವರಿಗೆ ಪ್ರೀತಿಯ ಉಣಿಸುಗಳೆಂದರೆ ಬೋಂಡ ಮುಂತಾದ ಕರಿದ

ಪದಾರ್ಥಗಳು, ಮಜ್ಜಿಗೆ ಹುಳಿ, ಬೆಳ್ಳುಳ್ಳಿ ಸಾರು. ಅವರಿಗೆ ವಾಯು ವ್ಯಾಧಿ ಬಂದಾಗ ರಾತ್ರಿವೇಳೆ ಬೆಳ್ಳುಳ್ಳಿ ಸಾರನ್ನು ಮಾಡಿಸಿಕೊಳ್ಳುತ್ತಿದ್ದರು. ಅವರ ತಾಯಿ ಇದ್ದಾಗ ಬೇಕಾದ್ದನ್ನು ಕೇಳಿ, ಅವರಿಂದ ಉಣ್ಣಲು ತಿನ್ನಲು ಮಾಡಿಸಿಕೊಳ್ಳುತ್ತಿದ್ದರು. ಅವರು ಹೋದ ಮೇಲೆ ಅಡಿಗೆ ಕೆಲಸದ ಜವಾಬ್ದಾರಿಯೆಲ್ಲ ಚಿಕ್ಕವಯಸ್ಸಿನ ಮಗಳ ಮೇಲೆ ಬಿತ್ತು. ಇವರಿಗೆ ಕಷ್ಟ ಪರಿಸ್ಥಿತಿ ಇದ್ದರೂ ಕೆಲವೊಂದು ಸಾರಿ ಪರ ಸ್ಥಳದ ಕಕ್ಷಿಗಾರರನ್ನು ಮನೆಯಲ್ಲಿಯೇ ಇಟ್ಟುಕೊಂಡು ಜೋಯಿಸರು ಅವರಿಗೂ ಊಟ ಹಾಕಿಸುತ್ತಿದ್ದರು.

ಜೋಯಿಸರು ತಮ್ಮ ಕೈಲಾದ ಮಟ್ಟಿಗೂ ಗಂಡು ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸಿದರು. ಉತ್ತಮ ರೀತಿಯಲ್ಲೇ ಬಾಳು ಸಾಗಿಸುವ ಮಾರ್ಗದಲ್ಲಿ ಅವರನ್ನು ಬೆಳೆಸಿದರು. ಕಾಲಕಳೆದಂತೆ ಮಕ್ಕಳು ಬೆಳೆದು ದೊಡ್ಡವರಾಗಿ ಅವರಿಗೆ ದೊರೆತ ಉದ್ಯೋಗಗಳಲ್ಲಿ ನಿರತರಾದರು. ಇಂಟರ್‌ಮೀಡಿಯೆಟ್ ವರೆಗೆ ಓದಿ ಮುಂಬೈಯಲ್ಲಿ ನೌಕರಿಯಲ್ಲಿದ್ದ ಹಿರಿಯ ಮಗ ತಂದೆ ಚಳುವಳಿಯಲ್ಲಿ ಪಾಲ್ಗೊಂಡು ದಸ್ತಗಿರಿಯಾಗಿ ಹೋದ್ದರಿಂದ ಮಧ್ಯದಲ್ಲೇ ನೌಕರಿಯನ್ನು ತೊರೆದು ಬಂದು ಮನೆಯ ಜವಾಬ್ದಾರಿ ಹೊರಬೇಕಾಯಿತು. ಮುಂದೆ ಇನ್ನಿಬ್ಬರು ಗಂಡು ಮಕ್ಕಳಲ್ಲಿ ನಾಗರಾಜ ಶರ್ಮ ಬಿ.ಎ. (ಪತ್ರಿಕೋದ್ಯಮ) ಓದಿ ಮುಂಬೈಯಲ್ಲಿ ನೌಕರಿ ಹಿಡಿದದ್ದು ತಂದೆಗೆ ಎಷ್ಟೋ ಸಮಾಧಾನವೆನಿಸಿತು. ಮಯೂರ ಶರ್ಮ ಬಿ.ಎಸ್ಸಿ. ವರೆಗೆ ಓದನ್ನು ಮುಂದುವರಿಸಿ ತಂದೆಯ ನಿಧನಾನಂತರ ಹುಬ್ಬಳ್ಳಿಯಲ್ಲಿ ರೈಲ್ವೆ ಇಲಾಖೆಯ ನೌಕರಿಯಲ್ಲಿ ನಿರತರಾದರು. ಆಮೇಲೆ ಅಲ್ಲಿಂದ ಮುಂದೆ ಮುಂಬೈಯನ್ನು ಸೇರಿ ಅಲ್ಲಿಯೇ ನೆಲೆಗೊಂಡರು.

ಜೋಯಿಸರು ನಿಧನರಾಗುವ ಹೊತ್ತಿಗೆ ಮನೆಯಲ್ಲಿ ಮಕ್ಕಳಾರಿಗೂ ಮದುವೆಯಾಗಿರಲಿಲ್ಲ. ಮಗಳ ಮದುವೆ ವಿಳಂಬವಾದುದರ ಬಗ್ಗೆ ಜೋಯಿಸರಿಗೆ ಚಿಂತೆ ಬಾಧಿಸುತ್ತಿತ್ತು. ತಂಗಿಯ ಮದುವೆಯಾಗುವವರೆಗೂ ತಾನು ಮದುವೆಯಾಗದೆ ಇದ್ದ ಪಾಂಡುರಂಗ ಜೋಯಿಸರು ತಂಗಿಯ ಮದುವೆ ಆದ ಒಂದು ವರ್ಷದ ಮೇಲೆ ತಾವು ಮದುವೆಯಾದರು. ಸಹೋದರಿಯ ಮದುವೆಗೆ ಅಣ್ಣನಿಗೆ ತಮ್ಮಂದಿರಿಬ್ಬರು ಬೆಂಬಲವಾಗಿ ನಿಂತರು. ಜೊತೆಗೆ ಜೋಯಿಸರ ಅಣ್ಣ ವೆಂಕಾಜೋಯಿಸರ ಮಗ ಚಿತ್ರದುರ್ಗದ ಬಳಿಯ ಭರಮಸಾಗರ ಗ್ರಾಮದ ವಾಸಿ ರಂಗನಾಥ ಜೋಯಿಸರು (ಪಾಂಡುರಂಗ ಜೋಯಿಸರಿಗಿಂತ ಹತ್ತು ವರ್ಷ ಹಿರಿಯರು) ಸಹ ಇವರಿಗೆ ಬೆಂಬಲವಾಗೇ ಇದ್ದರು.

ಜೋಯಿಸರ ಸಾಮಾನ್ಯ ದಿನಚರಿ ಹೀಗಿತ್ತು: ಬೆಳಗ್ಗೆ ಕೋರ್ಟಿಗೆ ಹೋದವರು ಅಪರಾಹ್ನ ೧ ಗಂಟೆಯ ಮೇಲೆ ಮನೆಗೆ ಮರಳಿ ಊಟ ಮಾಡಿ ಸ್ವಲ್ಪ ವಿಶ್ರಾಂತಿಯ ನಂತರ ಸಾಯಂಕಾಲ ಆರರಿಂದ ೮ರವರೆಗೆ ಕೋಟೆಯ ಕಡೆ ಸ್ನೇಹಿತರೊಂದಿಗೆ ಹೋಗುತ್ತಿದ್ದರು.

ಅಲ್ಲಿಂದ ಮರಳಿದ ಮೇಲೆ ಸುಮಾರು ೭ ರಿಂದ ೯ ಗಂಟೆಯವರೆಗೆ ಚಿತ್ರದುರ್ಗ ಟೌನ್ ಕ್ಲಬ್ಬಿನಲ್ಲಿ ತಮ್ಮ ಸಹೋದ್ಯೋಗಿಗಳು ಉನ್ನತ ಅಧಿಕಾರಿಗಳು ಇತರ ಗಣ್ಯರೊಂದಿಗೆ ಮೊದಲಿಗೆ ಟೆನ್ನಿಸ್ ಆಡುತ್ತಿದ್ದ ಅವರು ಆಮೇಲೆ ಇಸ್ಪೀಟ್ ಆಟದಲ್ಲಿ ಮಗ್ನ ರಾಗುತ್ತಿದ್ದರು. ಆಟಕ್ಕೆ ಹೆಚ್ಚು ಬಾಜಿಯನ್ನೇನೂ ಕಟ್ಟುತ್ತಿರಲಿಲ್ಲ. ಅವರು ಕ್ಲಬ್ಬಿಗೆ ಹೋಗುತ್ತಿದ್ದುದು ದಿನದ ಆಯಾಸವನ್ನು ಕಳೆಯಲು, ಎಲ್ಲ ಸ್ನೇಹಿತರೊಂದಿಗೆ ಕಲೆತು ಮನಸ್ಸನ್ನು ಹಗುರ ಮಾಡಿಕೊಳ್ಳಲು. ಆಮೇಲೆ ಅವರು ಮನೆಗೆ ತೆರಳಿ ಊಟದ ನಂತರ ರಾತ್ರಿಯೆಲ್ಲ ಬಹಳ ಹೊತ್ತಿನವರೆಗೆ ಓದುವುದು ಬರೆಯುವುದು ಮಾಡುತ್ತಲೇ ಇರುತ್ತಿದ್ದರು. ಅವರ ಸಂಶೋಧನೆಯ ಜೊತೆಗೆ 'ತಾಯಿನಾಡು' 'ವಿಶ್ವಕರ್ನಾಟಕ' ಪತ್ರಿಕೆಗಳಿಗೆ ವರದಿಗಳನ್ನು ಸಿದ್ಧಪಡಿಸಿ ಕಳುಹಿಸಿಕೊಡುತ್ತಿದ್ದರು. ಕೊನೆ ಕೊನೆಗೆ ಆ ಕೆಲಸವನ್ನು ಅವರ ಹಿರಿಯ ಮಗ ಪಾಂಡುರಂಗ ಜೋಯಿಸರಿಗೆ ವಹಿಸಿದರು.

ಅವರಿಗೆ ತೀರಾ ವಯಸ್ಸಾಗುವವರೆಗೂ ಹೆಚ್ಚು ಕಡಿಮೆ ಪ್ರತಿದಿನವೂ ಬೆಟ್ಟದ ಮೇಲೆ ಹೋಗುತ್ತಿದ್ದರು. ಬೆಟ್ಟ ನೋಡಲು ಬಂದ ಕೆಲವರಿಗೆ ಬೆಟ್ಟ ತೋರಿಸಿ ವಿವರಿಸುವುದು, ಬೇರೆ ಬೇರೆಡೆ ಹೋಗಿ ಇತಿಹಾಸ ಕುರಿತು ಜನರಲ್ಲಿ ಅಭಿಮಾನ ಹುಟ್ಟುವಂತೆ ಉಪನ್ಯಾಸ ಮಾಡುವುದು, ಒಂದೊಂದು ಸ್ಥಳಕ್ಕೆ ಹೋದಾಗಲೂ ಆ ಸ್ಥಳದ ಚರಿತ್ರೆಯನ್ನು ಅಭ್ಯಸಿಸುವುದು, ಪ್ರಾಚ್ಯವಸ್ತುಗಳನ್ನೂ ಹಸ್ತಪ್ರತಿಗಳನ್ನೂ ಸಂಗ್ರಹಿಸುವುದು, ಬೆಟ್ಟ ನೋಡಲು ಬಂದವರಿಗೆ ಅದರಲ್ಲೂ ವಿದೇಶೀಯರಿಗೆ ಅನಿವಾರ್ಯವಾದಾಗ ಕೆಲವೊಮ್ಮೆ ತಂಗಲು ಮನೆಯಲ್ಲೇ ಅನುವು ಮಾಡಿಕೊಡುವುದು - ಇದು ಸಹ ಅವರ ದಿನಚರಿಯ ಭಾಗವೇ ಆಗಿಹೋಗಿತ್ತು.

ಸಂಶೋಧನೆಯ ವಿಷಯವಾಗಿ ಜೋಯಿಸರು ಮಕ್ಕಳೊಂದಿಗೆ ಏನನ್ನೂ ಸಾಮಾನ್ಯವಾಗಿ ಮಾತನಾಡುತ್ತಿರಲಿಲ್ಲ; ಅವರದೇ ಚಿಂತನೆಯ ಲೋಕದಲ್ಲಿ ಮಗ್ನರಾಗಿರುತ್ತಿದ್ದರಲ್ಲದೆ ಬಹಿರ್ದೆಶೆಗೆ ಹೋಗುವಾಗಲೂ ತಮ್ಮ ಜೊತೆಯಲ್ಲಿ ಪೆನ್ನು ಹಾಳೆಯನ್ನು ಕೊಂಡೊಯ್ಯುತ್ತಿದ್ದರೆಂದರೆ ಅವರು ಸಮಯದ ಸದುಪಯೋಗಕ್ಕೆ ಎಷ್ಟು ಮಹತ್ವ ವಿತ್ತಿದ್ದರೆಂಬುದು ತಿಳಿಯುತ್ತದೆ.

ಜೋಯಿಸರಿಗೆ ಚಿತ್ರದುರ್ಗದ ಬಳಿಯ ಪಂಜೇನಹಟ್ಟಿಯಲ್ಲಿ ಸುಮಾರು ೪ ಎಕರೆ, ಹಿರಿಯೂರು ಬಳಿಯ ಜವನಗೊಂಡನಹಳ್ಳಿಯಲ್ಲಿ ೪ ಎಕರೆ, ಹುಲ್ಲೂರಲ್ಲಿ ೬ ಎಕರೆ ಜಮೀನು ಇತ್ತಾದರೂ ಅವರಿಗಾಗಲಿ, ಮಕ್ಕಳಿಗಾಗಲಿ ಅವುಗಳನ್ನು ಉಳಿಸಿಕೊಂಡು ಅನುಭವಿಸಲಾಗಲಿಲ್ಲ.

■■

# ಇತಿಹಾಸ ಸಂಶೋಧನೆ, ಸಾಧನೆ

ಸ್ವಾತಂತ್ರ್ಯ ಹೋರಾಟದ ಕಾಲಕ್ಕಾಗಲೇ ಜೋಯಿಸರು ಚಿತ್ರದುರ್ಗ ಹಾಗೂ ಕರ್ನಾಟಕ ಇತಿಹಾಸದತ್ತ ಆಕರ್ಷಿತರಾಗಿದ್ದರು. ಚಿತ್ರದುರ್ಗ ಇತಿಹಾಸದ ಬಗ್ಗೆ ಅಧ್ಯಯನ ಕೈಗೊಳ್ಳಲು ಅವರಿಗೆ ಸ್ಫೂರ್ತಿ ನೀಡಿದ್ದು - ಚಿತ್ರದುರ್ಗದವರೇ ಆದ ಡಾ. ಪಿ. ಕೃಷ್ಣರಾವ್ ಎಂಬುವರು ವಿದ್ಯಾರ್ಥಿಯಾಗಿದ್ದಾಗಲೇ ' ಪ್ರಬುದ್ಧ ಕರ್ಣಾಟಕ ' ದಲ್ಲಿ ೧೯೧೯ರಲ್ಲಿ ಪ್ರಕಟಿಸಿದ್ದ ' ಚಿತ್ರದುರ್ಗದ ಬೆಟ್ಟ ' ಮತ್ತು ೧೯೨೧ರಲ್ಲಿ ಪ್ರಕಟಿಸಿದ್ದ ' ನಾಯಕ ಸಾಮ್ರಾಜ್ಯ ' ಎಂಬ ಲೇಖನಗಳು ಎಂದು ಜೋಯಿಸರೇ ಹೇಳುತ್ತಿದ್ದರಂತೆ. ಚಿಕ್ಕ ಹುಡುಗರಾಗಿದ್ದಾಗ ತಮ್ಮ ವಯಸ್ಸಿನ ಹುಡುಗರೊಂದಿಗೆ ಆಟವಾಡುತ್ತಿದ್ದ ಜೋಯಿಸರು ತಮ್ಮ ಹಳೆಯ ಮನೆಯ ಒಳಗೆ ಬಚ್ಚಿಟ್ಟುಕೊಳ್ಳಲು ಬಂದಾಗ ಬಾಗಿಲು ತೆರೆದ ಸದ್ದು ತಂದೆ ಪಾಂಡುರಂಗ ಜೋಯಿಸರ ಗಾಢ ನಿದ್ರೆಯನ್ನು ಕಲಕಿತು. ನಿದ್ರಾಭಂಗದಿಂದ ಸಿಟ್ಟಿಗೆದ್ದ ಅವರು ಕೈಗೆ ಸಿಕ್ಕಿದ ಕೋಲಿನಿಂದ ಜೋಯಿಸರನ್ನು ಶಿಕ್ಷಿಸಲು ಬಂದಾಗ ಬಾಲಕ ಜೋಯಿಸರ ಕಾಲಿಗೆ ತೀವ್ರ ಪೆಟ್ಟಾಗಿ ಒಂದೆರಡು ತಿಂಗಳ ಕಾಲ ಹಾಸಿಗೆಯಲ್ಲೆ ಮಲಗಿ ಚಿಕಿತ್ಸೆ ಪಡೆಯಬೇಕಾಯಿತಂತೆ. ಆಗ ತಾಯಿ ಅವರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾ ಮನರಂಜಿಸುವ, ಅನೇಕ ವೀರಪುರುಷರ, ಸಾಹಸದ ಕಥೆಗಳನ್ನು ನೋವು ಮರೆಯುವಂತೆ ಹೇಳುತ್ತಿದ್ದರಂತೆ. ಹೀಗೆ ಶೈಶವದಲ್ಲಿ ತಾಯಿ ಪಾರ್ವತಮ್ಮನವರ ತುಂಬು ಪ್ರೀತಿ, ಸ್ಫೂರ್ತಿ ಮತ್ತು ಪ್ರಭಾವದಿಂದ ಸಾಹಿತ್ಯ ಇತಿಹಾಸಗಳ ಬಗ್ಗೆ ಅಭಿರುಚಿ ಅಂಕುರಿಸಲ್ಪಟ್ಟು, ಬಾಲ್ಯದಲ್ಲಿ ದುರ್ಗದ ಕೋಟೆ ಕಾಡು ಗುಡ್ಡ ಬಂಡೆಗಳನ್ನು ಸುತ್ತುತ್ತ, ಇಲ್ಲಿಯ ಶೂರ ಧೀರ ಪಾಳೆಯಗಾರರ ವೃತ್ತಾಂತಗಳನ್ನು ಕೇಳುತ್ತ ಬೆಳೆದಿದ್ದ ಜೋಯಿಸರು ಇತಿಹಾಸದತ್ತ ಸೆಳೆಯಲ್ಪಟ್ಟದ್ದು ಸಹಜವೇ ಆಗಿತ್ತು. ಜೊತೆಗೆ ಸ್ವಾತಂತ್ರ್ಯಾಂದೋಲನ ಹಾಗೂ ಸ್ವದೇಶಾಭಿಮಾನಗಳ ಪ್ರಭಾವವೂ ಸಹ ಅವರು ಒಬ್ಬ ಸಂಶೋಧಕರಾಗಿ ಲೇಖಕರಾಗಿ ಬೆಳೆಯಲು ಪೂರಕವಾಯಿತೆಂದು ಹೇಳಬಹುದು.

ಜೋಯಿಸರಿಗೆ ಎಳವೆಯಿಂದಲೂ ಇದ್ದ ಓದಿನ ಹವ್ಯಾಸ ಕಾಲ ಕಳೆದಂತೆ ತೀಕ್ಷ್ಣ ಹಸಿವಾಗಿ ಬೆಳೆಯಿತು. ಆಗಿನ ಕಾಲಕ್ಕೆ ಲಭ್ಯವಿದ್ದ ಬಹುಪಾಲು ಇತಿಹಾಸದ ಹಾಗೂ ಸಾಕಷ್ಟು

ಸಾಹಿತ್ಯದ ಗ್ರಂಥಗಳನ್ನೂ ನಿಯತಕಾಲಿಕೆಗಳ (ಲೇಖನಗಳ)ನ್ನೂ ಓದುತ್ತ ಎರಡೂ ಕ್ಷೇತ್ರಗಳ ಬಗ್ಗೆ ತೀವ್ರ ಆಸಕ್ತಿಯನ್ನು ಅವರು ಬೆಳೆಸಿಕೊಂಡರು. ಜೈಲು ವಾಸದ ಅವಧಿಯಂತೂ ಅವರಿಗೆ ಅಧ್ಯಯನದ ಅವಧಿಯೇ ಆಯಿತು. ಅಲ್ಲಿ ಅವರು ಅನೇಕ ಪುಸ್ತಕಗಳನ್ನೂ ಲೇಖನಗಳನ್ನೂ ಓದಿದರು. ಇತಿಹಾಸ ಸಾಹಿತ್ಯಗಳ ಪರಿಚಯ ಮಾಡಿಕೊಳ್ಳಲು ಅವರು ಆ ಅವಧಿಯನ್ನು ಪೂರ್ಣವಾಗಿ ಉಪಯೋಗಿಸಿಕೊಂಡರು.

ಹಿಂದೆಯೇ ಹೇಳಿದಂತೆ ಚಿತ್ರದುರ್ಗದ ಬೆಟ್ಟ ಕೋಟೆ ಅಷ್ಟೇ ಅಲ್ಲದೆ ಬೇರೆ ಬೇರೆಯ ಊರುಗಳನ್ನು ಸುತ್ತುವುದು, ಅಲ್ಲಿಯ ಪ್ರಾಚ್ಯವಸ್ತುಗಳನ್ನು ವೀಕ್ಷಿಸುವುದು, ಸ್ಥಳೀಯ ಹಿರಿಯರ ಮೂಲಕ ಮತ್ತು ತಮ್ಮಲ್ಲಿಗೆ ಬರುತ್ತಿದ್ದ ಕಕ್ಷಿದಾರರ ಮೂಲಕ ಸಹ ಅನೇಕ ಸ್ಥಳಗಳ ವಿವರವನ್ನೂ ಅನೇಕರಲ್ಲಿದ್ದ ತಾಳೇಗರಿ ಕಾಗದದ ಹಸ್ತಪ್ರತಿಗಳು ಪತ್ರದಾಖಲೆಗಳು ಮುಂತಾದ ಆಕರಗಳನ್ನೂ ಸಂಗ್ರಹಿಸುವುದು, ಭಾಷಣಕ್ಕೆಂದು ಬೇರೆಬೇರೆಯ ಊರುಗಳಿಗೆ ಹೋದಾಗಲೂ ಆಯಾ ಸ್ಥಳಗಳ ಐತಿಹಾಸಿಕ ಅಂಶಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಅವುಗಳ ಅಧ್ಯಯನ ಕೈಕೊಂಡು ಲೇಖನಗಳನ್ನು ಬರೆಯುವುದು - ಹೀಗೆ ಹತ್ತು ಹಲವು ರೀತಿಯಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಅವರ ಜೀವನದ ಉತ್ತರಾರ್ಧವೆಲ್ಲ ಪೂರ್ತಿಯಾಗಿ ಸಂಶೋಧನ ಅಧ್ಯಯನ ಲೇಖನ ಭಾಷಣ, ಇವುಗಳಲ್ಲೇ ತುಂಬಿಹೋಯಿತು. ೧೯೨೨ ರಿಂದ ೧೯೫೮ ರವರೆಗೆ ಸುಮಾರು ೩೬ ವರ್ಷ ಅವರು ಚಿತ್ರದುರ್ಗ ಹಾಗೂ ಕರ್ನಾಟಕ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಸುಮಾರು ಇನ್ನೂರಕ್ಕೂ ಹೆಚ್ಚು ಲೇಖನಗಳನ್ನೂ ಹತ್ತಾರು ಪುಸ್ತಕಗಳನ್ನೂ ಬರೆದರು. ಕನ್ನಡದ ಆಗಿನ ಸುಮಾರು ೫೦ ರಷ್ಟು ಪತ್ರಿಕೆಗಳಲ್ಲಿ, ವಿದ್ವತ್ ಪತ್ರಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಅವರ ನೂರಾರು ಲೇಖನಗಳು ಪ್ರಕಟವಾದುವು (ಅನುಬಂಧವನ್ನು ನೋಡಿ). ಕೆಲವು ಲೇಖನಗಳನ್ನು ಅವರು ಇಂಗ್ಲಿಷಿನಲ್ಲೂ ಪ್ರಕಟಿಸಿದರು. ಮತ್ತೆ ಕೆಲವು ಹಿಂದಿ ತೆಲುಗು ಭಾಷೆಗಳಿಗೂ ಅನುವಾದಗೊಂಡುವು. (ಅವರ ಕೆಲವು ಅಪ್ರಕಟಿತ ಲೇಖನಗಳು ಅವರ ಮರಣೋತ್ತರದ ಈಚಿನ ಕಾಲದಲ್ಲೂ ಪ್ರಕಟವಾಗಿವೆ).

ಜೋಯಿಸರ ಸಂಶೋಧನಾಸಕ್ತಿ ಅಧ್ಯಯನ ಲೇಖನಗಳ ವ್ಯಾಪ್ತಿ ವಿಸ್ತಾರವಾದದ್ದು ಮತ್ತು ವೈವಿಧ್ಯಮಯವಾದದ್ದು. ಆಗಿನ ಕಾಲಕ್ಕೆ ಒಂದು ಸಂಸ್ಥೆ ಮಾಡಬಹುದಾದಷ್ಟು ಕೆಲಸವನ್ನು ಅವರು ಒಬ್ಬರೇ ಕೈಕೊಂಡು ಮಾಡಿದ್ದಾರೆ ಎನ್ನುವುದು ಅತಿಶಯೋಕ್ತಿಯ ಮಾತಲ್ಲ. ಕನ್ನಡನಾಡಿನ ವೀರರನ್ನೂ ವೀರಮಹಿಳೆಯರನ್ನೂ ಕುರಿತು ಅವರು ಅನೇಕ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದಿದ್ದಾರೆ. 'ಗಂಡುಗಲಿ ಕುಮಾರರಾಮ', 'ಕನ್ನಡ ಕಲಿ ಸಿರುಮನ ಚರಿತೆ' (ಸಿರುಮನೃಪಾಲ) ಇವು ಗಂಭೀರ

ಶೈಲಿಯ ಪುಸ್ತಕಗಳಾದರೆ, 'ಮಯೂರಶರ್ಮ ಮತ್ತು ಇತರ ಕಥೆಗಳು', 'ನಾಡಕತೆಗಳು', 'ಹುಳಿಯಾರು ಮಾರಭೂಪಾಲ', 'ಸಳ', 'ಕಪೋತವಾಕ್ಯ', ಇವು ಜನಪ್ರಿಯ ಶೈಲಿಯ ಕಥನರೂಪದ ಪುಸ್ತಕಗಳಾಗಿವೆ. 'ಹೊಯ್ಸಳಾನ್ವಯ ಪ್ರತಾಪ', 'ಹೊಯ್ಸಳ ವಿನಯಾದಿತ್ಯ', 'ಬಾಬಮ್ಮ', 'ವೀರಮಲ್ಲಮ್ಮ', 'ವೀರರಮಣಿ ಓಬವ್ವ' ಮುಂತಾದವು ಸಹ ಜನಪ್ರಿಯ ಧಾಟಿಯ ಆದರೆ ಗಂಭೀರ ವಿಷಯದ ಲೇಖನಗಳಾಗಿವೆ. 'ಚಿತ್ರದುರ್ಗ ಜಿಲ್ಲೆಯಲ್ಲಿ ಬೌದ್ಧಧರ್ಮದ ಕುರುಹುಗಳು', 'ಜೈಮಿನಿ ಭಾರತದಲ್ಲಿ ಚಾರಿತ್ರಿಕ ಕಾಲದ ವಿಷಯಗಳು', 'ಕದಂಬ ಮಯೂರಶರ್ಮನು ಚಂದ್ರಹಾಸನೇ?', 'ರಾಮ ಗಿರ್ಯಾಶ್ರಮ', 'ಗೊಮ್ಮಟೇಶ್ವರ ಪ್ರತಿಷ್ಠಾಪನೆಯ ಕಾಲ', 'ಭಾಸ - ಒಂದು ಒಗಟು', 'ಚಿನ್ಮೂಲಾದ್ರಿಯ ವೀರಶೈವ ಧರ್ಮ ಕ್ರಾಂತಿಪುರುಷರು' ಇವೇ ಮುಂತಾದ ಲೇಖನಗಳು ಅವರ ಸಂಶೋಧನಾಸಕ್ತಿಯ ಹರಹನ್ನು ತೋರಿಸುತ್ತವೆ.

ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ ಮತ್ತು ಚಿತ್ರದುರ್ಗ ಪಾಳೆಯಗಾರರ ಇತಿಹಾಸ ಕುರಿತಂತೆ ಜೋಯಿಸರು ಮಾಡಿರುವ ಸಂಶೋಧನೆ ಮತ್ತು ಬರೆದಿರುವ ಲೇಖನಗಳೂ ಉಲ್ಲೇಖನೀಯವಾದವು, ಎಂ. ಎಸ್. ಪುಟ್ಟಣ್ಣನವರು ಕೆಲವು ಆಕರಗಳನ್ನು ಆಧರಿಸಿ 'ಚಿತ್ರದುರ್ಗದ ಪಾಳಯಗಾರರು' ಎಂಬ ಪುಸ್ತಕವನ್ನು ೧೯೨೪ರಲ್ಲಿ ಹೊರತರುವುದಕ್ಕೆ ಮೊದಲೇ, ೧೯೨೨ರಷ್ಟು ಹಿಂದೆಯೇ ಚಿತ್ರದುರ್ಗ ಇತಿಹಾಸ ರಚನೆಗೆ ತೊಡಗಿದವರು ಜೋಯಿಸರು ಎನ್ನುವುದು ಗಮನಿಸಬೇಕಾದ ಸಂಗತಿ. 'ಚಿತ್ರದುರ್ಗದ ಬಖೈರು' ಎಂಬುದು ಅವರು ಸಂಪಾದಿಸಿರುವ, ಚಿತ್ರದುರ್ಗದ ಕೊನೆಯ ಪಾಳೆಯಗಾರ ಮದಕೇರಿ ನಾಯಕನ ಇತಿಹಾಸ ಕುರಿತ ಒಂದು ಪ್ರಮುಖ ಆಕರ ಕೃತಿ. 'ಭರಮಣ್ಣನಾಯಕನ ಸಮರ ವಿಜಯ', : ಹಿರೇ ಮದಕರಿನಾಯಕನ ತಾರಾವಳಿ', 'ಮದಕರಿ ರಾಜೇಂದ್ರ ದಂಡಕ' ಮುಂತಾದ ಚಿತ್ರದುರ್ಗ ಪಾಳೆಯಗಾರರ ಇತಿಹಾಸಕ್ಕೆ ನೆರವಾಗುವ ಕವಿಕೃತಿಗಳನ್ನೂ ಮತ್ತು ಕೆಲವು ಜನಪದ ಗೀತೆಗಳನ್ನೂ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ. ನಾಡಿನ ಪ್ರಮುಖ ಮಠಗಳ ಸಾಲಿನಲ್ಲಿ ಬರುವ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ಹಾಗೂ ಸಿರಿಗೆರೆಯ ತರಳಬಾಳು ಬೃಹನ್ಮಠ ಇವುಗಳ ಇತಿಹಾಸ, ಇವುಗಳಿಗೆ ಸಂಬಂಧಿಸಿದ ಸಾಹಿತ್ಯ ಕೃತಿಗಳು ಇತ್ಯಾದಿಗಳ ಬಗ್ಗೆ ವಿವರವಾಗಿ ಬರೆದಿದ್ದಾರೆ. ಚಿತ್ರದುರ್ಗ ಪಾಳೆಯಗಾರರಿಗೆ ಸಂಬಂಧಿಸಿದ ಅನೇಕ ಕಾಗದಪತ್ರಗಳನ್ನೂ, ಹಸ್ತಪ್ರತಿ ದಾಖಲೆಗಳನ್ನೂ ಅಭ್ಯಸಿಸಿ ಅನೇಕ ಲೇಖನಗಳನ್ನು ಬರೆದಿದ್ದಾರೆ. 'ಐತಿಹಾಸಿಕ ಪತ್ರವ್ಯವಹಾರಗಳು', 'ಚಿತ್ರದುರ್ಗದ ಪತನ', 'ಚಿತ್ರದುರ್ಗದ ಪತನಾನಂತರ', 'ಮಾಯಿಕೊಂಡದ ಮುತ್ತಿಗೆ'. 'ರಸಾಸಿದ್ಧರು', 'ಚಿತ್ರದುರ್ಗದ ಏಳುಸುತ್ತಿನ ಕೋಟೆ' ಮುಂತಾದ ಲೇಖನಗಳನ್ನು ಇಲ್ಲಿ ಹೆಸರಿಸಬಹುದು.

ಜೋಯಿಸರು ಐತಿಹಾಸಿಕ ದಾಖಲೆಗಳನ್ನು ಹುಡುಕುತ್ತಿದ್ದಾಗ ಅನಿರೀಕ್ಷಿತವಾಗಿ ದೊರೆತ ಒಂದು ಹಸ್ತಪ್ರತಿಯೇ 'ಸಿರುಮನ ಚರಿತ್ರೆ.' ಅದರ ಕರ್ತೃ ಕೆಂಚಶೆಟ್ಟಿಯ ಮಗ ರಾಮ. ಈ ಸಾಂಗತ್ಯ ಕೃತಿಯನ್ನು ಓದಿ ಮೆಚ್ಚಿಕೊಂಡ ಜೋಯಿಸರು ಅದರ ಕಥೆಯನ್ನು ಗದ್ಯದಲ್ಲಿ ಬರೆದು ಪ್ರಕಟಿಸಿದರು. ಆದರೆ ಅವರು ಮೂಲವನ್ನೂ ಏಕೆ ಪ್ರಕಟಿಸಲಿಲ್ಲವೋ! ಚಿತ್ರದುರ್ಗ ಜಿಲ್ಲೆಯ ಇಂದಿನ ಶ್ರೀರಾಮಪುರ ಹಿಂದೊಂದು ಕಾಲಕ್ಕೆ ಬೂದಿಹಾಳು ಎಂಬ ಹೆಸರಿನ ಪಾಳೆಯಪಟ್ಟು. ಅದನ್ನು ಸಿರುಮನೆಂಬ ಗೊಲ್ಲ ಜನಾಂಗದ ಪಾಳೆಯಗಾರ ಆಳುತ್ತಿದ್ದ. ಅವನ ಶೌರ್ಯ ಐಶ್ವರ್ಯಗಳಿಗೆ ಅಸೂಯೆಪಟ್ಟ ಸುತ್ತಲಿನ ಪಾಳೆಯಗಾರರು ವಿಜಯನಗರದ ಸಾಳುವ ನರಸಿಂಗರಾಯನನ್ನು ಪ್ರಚೋದಿಸಿ ಬೂದಿಹಾಳು ಕೋಟೆಗೆ ಮುತ್ತಿಗೆ ಹಾಕಿಸಿದರು. ಆರು ತಿಂಗಳ ಕಾಲ ಸಾಹಸದಿಂದ ಹೋರಾಡಿದ ಸಿರುಮ, ನರಸಿಂಗರಾಯನೊಂದಿಗೆ ಸಂಧಾನ ತಿರಸ್ಕರಿಸಿ, ಯುದ್ಧ ಮಾಡಿ ತನ್ನ ಮಕ್ಕಳು, ಸೇನೆ ಎಲ್ಲವೂ ಯುದ್ಧ ಭೂಮಿಯಲ್ಲಿ ಹತವಾದಾಗ ರಾಣಿವಾಸದೊಂದಿಗೆ ಅಗ್ನಿ ಪ್ರವೇಶ ಮಾಡಿದ್ದು 'ಕನ್ನಡ ಕಲಿ ಸಿರುಮನ ಕತೆ' (ಸಿರುಮನೃಪಾಲ).

ಕುಮಾರ ರಾಮನ ಹಾಗೆಯೇ ಕವಿಗಳ ಮನಸ್ಸನ್ನು ಗಾಢವಾಗಿ ಸೆಳೆದ ಸಿರುಮನ ಶೌರ್ಯ, ಸ್ವಾಭಿಮಾನ ಮತ್ತು ದುರಂತದ ಚರಿತ್ರೆ ಹಲವು ಕಾವ್ಯ ಕೃತಿಗಳಿಗೆ ವಸ್ತುವಾಗಿರುವುದು ಗಮನಾರ್ಹ. ಈಚೆಗೆ ಡಾ. ಎಂ.ಎಂ. ಕಲಬುರ್ಗಿಯವರು ೧೯೮೦-೯೦ರ ದಶಕದಲ್ಲಿ ಮೇಲೆ ಹೇಳಿದ ಕೆಂಚ ಶೆಟ್ಟಿಯ ಮಗ ರಾಮ ಕವಿಯದೂ ಸೇರಿದಂತೆ ಸಿರುಮನನ್ನು ಕುರಿತ ಮೂರು ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಆದರೆ ಸಿರುಮನಂತಹ ಚಿಕ್ಕ ಪ್ರಾಂತದ ದೊರೆಯೊಬ್ಬನ ಚರಿತ್ರೆಯನ್ನು ಮೊತ್ತ ಮೊದಲು ಬೆಳಕಿಗೆಟ್ಟವರು ಹುಲ್ಲೂರು ಶ್ರೀನಿವಾಸ ಜೋಯಿಸರು ಎಂಬುದು ಗಮನಾರ್ಹ.

ಜೋಯಿಸರಿದ್ದ ಕಾಲದಲ್ಲಿ ಅವರ ಕೆಲವು ಚಿಕ್ಕ ಪುಸ್ತಕಗಳು ಪ್ರಕಟವಾಗಿದ್ದನ್ನು ಬಿಟ್ಟರೆ, ಅನೇಕ ಪತ್ರಿಕೆಗಳಲ್ಲಿ, ಸ್ಮರಣಸಂಚಿಕೆಗಳಲ್ಲಿ, ವಿಶೇಷಾಂಕಗಳಲ್ಲಿ ಚೆದುರಿಹೋಗಿದ್ದ ಅವರ ನೂರಾರು ಲೇಖನಗಳು ಪುಸ್ತಕ ರೂಪದಲ್ಲಿ ಪ್ರಕಟವಾಗಿ ರಲಿಲ್ಲ. ಹಾಗಾಗಿ "ಅವರ ಬಿಡಿ ಲೇಖನಗಳೆಲ್ಲ ಒಂದು ಉತ್ತಮವಾದ ಪುಸ್ತಕ ರೂಪದಲ್ಲಿ ಒಂದುಗೂಡುವುದು ಅವಶ್ಯಕ" ಎಂದು ಅನೇಕರು ಹಾರೈಸುತ್ತಲೇ ಇದ್ದರು.

ಈ ಉದ್ದೇಶ ಸಾಧನೆಗಾಗಿ ೧೯೭೩ರಲ್ಲಿ ಬಿ.ವಿ. ವೈಕುಂಠರಾಜು ಅವರ ಅಧ್ಯಕ್ಷತೆಯಲ್ಲಿ 'ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣ ಸಮಿತಿ'ಯು ರೂಪುಗೊಂಡಿತು. ಈ ಸಮಿತಿಯ ಆಶಯದಂತೆ, ಸಂಪಾದಕರಾದ ಲಕ್ಷ್ಮಣ್ ತೆಲಗಾವಿ ಮತ್ತು ಡಾ. ಎಂ.ವಿ. ಶ್ರೀನಿವಾಸ್ ಅವರು, ಮೊದಲಿಗೆ ಆಯ್ದು ಸಿದ್ಧಪಡಿಸಿದ ಜೋಯಿಸರ ೪೭ ಲೇಖನಗಳ ಸಂಪುಟ "ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ

ಲೇಖನಗಳು'' ಆ ವರ್ಷವೇ ಪ್ರಕಟವಾಯಿತು. ಅದು ಪ್ರಾರಂಭದ ಸಂಪುಟವಾದ್ದರಿಂದ ಕೆಲವು ಕೊರತೆಗಳು ಇದ್ದುವಾದರೂ ಜನತೆಯಿಂದ ಅದಕ್ಕೆ ಒಳ್ಳೆಯ ಸ್ವಾಗತ ದೊರೆಯಿತು.

'' ಎಲ್ಲೆಲ್ಲೋ ಅಸ್ತವ್ಯಸ್ತವಾಗಿ ಇದ್ದ ಜೋಯಿಸರ ಲೇಖನಗಳನ್ನೆಲ್ಲ ಆಯ್ದು ಸಂಗ್ರಹಿಸುವ ಕೆಲಸ ನಿಜವಾಗಿ ದೊಡ್ಡ ಕೆಲಸ. ಈ ರೀತಿಯಲ್ಲಿ... ಪುಸ್ತಕ ರೂಪದಲ್ಲಿ ಬರದೆ ಇದ್ದಿದ್ದರೆ, ಜೋಯಿಸರು ಸಂಶೋಧನ ಕ್ಷೇತ್ರದಲ್ಲಿ ಮಾಡಿದ ಕೃಷಿ ಜನತೆಗೆ ಗೊತ್ತಾಗುತ್ತಿರಲಿಲ್ಲ ಮತ್ತು ಅವುಗಳ ಉಪಯೋಗ ಸಹ ದೊರಕದೆ ಹೋಗುತ್ತಿತ್ತು. ಯಾವುದೇ ಒಂದು ಕ್ರಮ ನಿಯಮವನ್ನು ಹಾಕಿಕೊಂಡು ಅವರು ಸಂಶೋಧನ ಕಾರ್ಯ ಮಾಡಿಲ್ಲದಿರಬಹುದು. ಆದರೆ ಅವರ ಗಮನಕ್ಕೆ ಬಂದುದೆಲ್ಲವನ್ನೂ, ಅವರಿಗೆ ಅನಿಸಿದುದೆಲ್ಲವನ್ನೂ, ಅವರಿಗೆ ದೊರೆತ ಆಧಾರ, ಊಹೆಗಳ ಮೇಲೆ ವ್ಯಾಪಕವಾದ ಸಾಮಗ್ರಿಗಳನ್ನು ಸ್ವಯಂಪ್ರೇರಣೆಯಿಂದ ಮಾಡಿರುವುದನ್ನು ನಾವು ಕೃತಜ್ಞತೆಯಿಂದ ಸ್ಮರಿಸಬೇಕು.'' '' ಜೋಯಿಸರ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿ ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟನ ಸಮಿತಿ ನಿಜವಾಗಿ ಒಂದು ಒಳ್ಳೆಯ ಕೆಲಸವನ್ನು ಮಾಡಿದೆ. '' ಎಂದು ಪತ್ರಿಕೆಗಳು ಪ್ರಶಂಸಿದುವಲ್ಲದೆ, ಕೆಲವು ಸಲಹೆಗಳನ್ನು ಮುಂದಿಟ್ಟವು. ಆದೇನೇ ಇದ್ದರೂ '' ಪ್ರಸ್ತುತ ಗ್ರಂಥ ಕನ್ನಡ ನಾಡಿನ ಇತಿಹಾಸ ಹಾಗೂ ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳವರು ಓದಲೇ ಬೇಕಾದ ಸ್ವಾರಸ್ಯ ಪೂರ್ಣವಾದ ಕೃತಿ.''

ಅದಾದ ಮೇಲೆ ೧೯೯೫ರಲ್ಲಿ ಅದೇ ಸಂಪಾದಕರು ಆಯ್ದು ಸಿದ್ಧಪಡಿಸಿದ ೪೮ ಲೇಖನಗಳ ಸಂಪುಟ'' ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು '' ಪ್ರಕಟವಾಗಿದೆ. ಈ ಸಂಪುಟದ ಬಿಡುಗಡೆಗೆ ಬಂದಿದ್ದ ಖ್ಯಾತ ಇತಿಹಾಸ ವಿದ್ವಾಂಸ ಡಾ. ಷ. ಶೆಟ್ಟರ್ ಅವರು ಆಗ ಹೇಳಿದ ಮಾತು ಮನನೀಯವಾದವು: '' ಅದೇನು ಕಾರಣವೋ ಆ ಕಾಲಕ್ಕೆ ಇತಿಹಾಸ ಸಾಹಿತ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡಿದ ಅನೇಕರು ವಕೀಲ ವೃತ್ತಿಯವರು ಎನ್ನುವುದು ಒಂದು ಆಶ್ಚರ್ಯ ಸಂಗತಿ. ಜೋಯಿಸರು ಮತ್ತು ಅವರ ಸಮಕಾಲೀನರಾದ ಶಿ.ಶಿ. ಬಸವನಾಳ, ಕಪಟರಾಳ ಕೃಷ್ಣರಾಯರು ವೃತ್ತಿಯಲ್ಲಿ ವಕೀಲರಾಗಿದ್ದರೂ ಅವರು ಕೋರ್ಟಿಗೆ ಹೋಗಲಿಲ್ಲ, ಪುಸ್ತಕ ಭಂಡಾರಕ್ಕೆ ಹೋದರು. ಹೀಗೆ ವೃತ್ತಿಗಿಂತ ಹವ್ಯಾಸದಿಂದ ಸಂಶೋಧನೆ ನಡೆಸಿದ ವ್ಯಕ್ತಿಗಳ ಶ್ರಮ ಅತ್ಯಂತ ಸಾರ್ಥಕ ಮತ್ತು ಅರ್ಥಪೂರ್ಣ... ಹುಲ್ಲೂರು ಶ್ರೀನಿವಾಸ ಜೋಯಿಸರು ಕನ್ನಡ ನಾಡಿನ ಚರಿತ್ರೆ, ಸಂಸ್ಕೃತಿ ಸಾಹಿತ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡು ದುಡಿದರು... ಕೆಲವು ಕವಿಗಳ ಕಾಲ, ಸ್ಥಳ, ಕುಲ ವಿಚಾರದಲ್ಲಿ ಕೆಲವು ವಿದ್ವಾಂಸರು ಜಂಗಿಕುಸ್ತಿಯಲ್ಲಿ ಪಾಲ್ಗೊಂಡಹಾಗೆ ಜೋಯಿಸರು ಪಾಲ್ಗೊಳ್ಳಲಿಲ್ಲ... ಹೋಲಿಕೆಗೆ ನೋಡಿದಾಗ ಗೋವಿಂದ ಪೈ ಅವರದು ಬಹಳ ಆಳವಾದ ಸಂಶೋಧನೆ; ಹುಲ್ಲೂರು ಶ್ರೀನಿವಾಸ ಜೋಯಿಸರದು ಬಹಳ

ವಿಸ್ತಾರವಾದ ಸಂಶೋಧನೆ. ಇದಕ್ಕೆ ಈಗ ಬಿಡುಗಡೆಯಾಗಿರುವ ಈ ಸಂಪುಟ ಒಳ್ಳೆಯ ಸಾಕ್ಷಿಯಾಗಿದೆ.'' ಮೊದಲನೆಯ ಸಂಪುಟದ ಸಂಬಂಧದಲ್ಲಿ ಹೇಳಲಾಗಿದ್ದ ಸಲಹೆಗಳನ್ನು ಈ ಸಂಪುಟದಲ್ಲಿ ಅನುಸರಿಸಿರುವುದು ಶ್ಲಾಘನೀಯವಾಗಿದೆ. ಜೋಯಿಸರ ಇತರ ಲೇಖನಗಳ, ಅದರಲ್ಲೂ ಹೆಚ್ಚಾಗಿ ಸಾಹಿತ್ಯ ಸಂಬಂಧಿಯಾದ ಲೇಖನಗಳ ಇನ್ನೊಂದು ಸಂಪುಟ ' ಸಾಹಿತ್ಯಿಕ ಲೇಖನಗಳು ' ಅಥವಾ ' ಬಿಡಿ ಲೇಖನಗಳು ' ಪ್ರಕಟವಾಗುವ ನಿರೀಕ್ಷೆಯೂ ಇದೆ.

ಜೋಯಿಸರು ಇಷ್ಟೆಲ್ಲ ಲೇಖನಗಳನ್ನು ಬರೆದರೂ ಪುಸ್ತಕಗಳನ್ನು ರಚಿಸಿದರೂ ಇನ್ನು ಕೆಲವನ್ನು ಅವರಿಗೆ ಪೂರ್ಣಗೊಳಿಸಲಾಗಲಿಲ್ಲ. ಪೂರ್ಣಗೊಂಡ ಕೆಲವು ಪ್ರಕಟವಾಗಲೂ ಇಲ್ಲ. ಅವರ ಒಂದು ಹಾಳೆಯಲ್ಲಿ ಹೀಗೆ ಬರೆದಿದ್ದಾರೆ: ಪೂರ್ತಿ ಮಾಡಬೇಕಾಗಿರುವ ಲೇಖನಗಳು - ೧. ಗುಣವರ್ಮನ ಶೂದ್ರಕ, ೨. ಕರೀಭಂಟ, ೩. ಶ್ರೀ ಶಾಸನ ಮಂಜರಿ, ೪. ನಿಡುಗಲ್ಲು ಚೋಳ ಮಹಾರಾಜರು; ಪುಸ್ತಕಗಳು - ೧. ಹರಿಹರ, ೨. ಬಖೈರು, ೩. ಕುಮಾರ ರಾಮ. ಅವರು ಈ ವಿವರವನ್ನು ಬರೆದ ದಿನಾಂಕ ತಿಳಿಯದು. ಆದರೂ ಈ ಸಂಬಂಧದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

ಮೇಲೆ ತಿಳಿಸಿದ ಪೂರ್ತಿಮಾಡಬೇಕಾಗಿರುವ ಲೇಖನಗಳ ಪಟ್ಟಿಯಲ್ಲಿ ೧ ಮತ್ತು ೪ನೆಯ ಕ್ರಮ ಸಂಖ್ಯೆಯ ಲೇಖನಗಳು ಈವರೆಗೆ ಎಲ್ಲಿಯೂ ಪ್ರಕಟವಾದಂತೆ ತಿಳಿದು ಬಂದಿಲ್ಲ. ಅವರು ಅವನ್ನು ಪೂರ್ಣ ಮಾಡಲು ಸಾಧ್ಯವಾಗದೇ ಹೋಗಿರಬಹುದು. ಆದರೆ ' ಶ್ರೀ ಶಾಸನ ಮಂಜರಿ ' ಎಂಬ ಶೀರ್ಷಿಕೆಯ ಅವರ ಎರಡು ಲೇಖನಗಳು ಪ್ರಕಟವಾಗಿವೆ. ಮೇಲೆ ಸೂಚಿಸಿರುವುದು. ಇವೇ ಲೇಖನಗಳಲ್ಲೊಂದೋ ಅಥವಾ ಇವಲ್ಲದೆ ಮತ್ತೆ ಬೇರೊಂದೋ ತಿಳಿಯದು.

ಹಾಗೆಯೇ ಪೂರ್ತಿ ಮಾಡಬೇಕಾಗಿರುವ ಪುಸ್ತಕಗಳ ಪಟ್ಟಿಯಲ್ಲಿರುವ ಬಖೈರು, ಕುಮಾರ ರಾಮ ಇವು ಪ್ರಕಟವಾಗಿವೆ. ' ಚಿತ್ರದುರ್ಗ ಬಖೈರ ' ನ್ನು ಅವರು ಸಂಪಾದಿಸಿ ಕೆಲವು ಟಿಪ್ಪಣಿಗಳೊಂದಿಗೆ ' ತಾಯಿನಾಡು ' ಪತ್ರಿಕೆಯಲ್ಲಿ ೧೯೫೨ರಲ್ಲಿ ಪ್ರಕಟಿಸಿದ್ದರು. ಅದೇ ಅವರ ನಿಧನಾನಂತರದಲ್ಲಿ ೧೯೬೫ರಲ್ಲಿ, ಪುಸ್ತಕರೂಪದಲ್ಲಿ ಪ್ರಕಟವಾಗಿದೆ. ಹಾಗೆಯೇ ಅದಕ್ಕೂ ಮೊದಲೇ ಪ್ರಕಟವಾಗಿ ನಾಡಿನ ಇತಿಹಾಸ ಪ್ರಿಯರಿಗೆ ಮೆಚ್ಚಿಗೆಯಾದ ಪುಸ್ತಕ ' ಕುಮಾರ ರಾಮ '. ಜೋಯಿಸರು ಆ ಪುಸ್ತಕಕ್ಕೆ ಇನ್ನೇನಾದರೂ ಹೆಚ್ಚಿನ ವಿಷಯ ಸೇರಿಸಿ ಪರಿಷ್ಕೃತ ಆವೃತ್ತಿಯನ್ನೇನಾದರೂ ತರಬೇಕೆಂಬ ಸಿದ್ಧತೆಯಲ್ಲಿದ್ದು ಹಾಗೆ ಬರೆದರೋ ಏನೋ?

ಈಗ ಲಭ್ಯವಿರುವ ಅವರ ' ಹರಿಹರ ಕ್ಷೇತ್ರ, ' ಪುಸ್ತಕದ ಹಸ್ತಪ್ರತಿಯನ್ನು ನೋಡಿದರೆ ಅವರು ಅದನ್ನು ಪೂರ್ಣಗೊಳಿಸಿದ್ದು ಕಾಣುತ್ತದೆ. ಆದರೆ ಅದು ಅವರಿದ್ದ

ಕಾಲದಲ್ಲಿ ಪ್ರಕಟವಾಗಲಿಲ್ಲ. ಈ ಪುಸ್ತಕ ಇನ್ನೂ ಪ್ರಕಟವಾಗಿಲ್ಲದಿರುವುದರಿಂದ ಇದು ಒಳಗೊಂಡ ವಿಷಯದ ಬಗ್ಗೆ ವಾಚಕರಲ್ಲಿ ಕುತೂಹಲ ಉಂಟಾಗುವ ಕಾರಣ ಆ ಬಗ್ಗೆ ಸ್ವಲ್ಪ ವಿವರಣೆ ಕೊಡುವುದು ಅವಶ್ಯಕವೆನಿಸುತ್ತದೆ. ಖ್ಯಾತ ಇತಿಹಾಸ ವಿದ್ವಾಂಸ ಡಾ. ಎಂ.ವಿ. ಶ್ರೀನಿವಾಸ್ ಅದರ ಬಗ್ಗೆ ಕೊಡುವ ವಿವರ ಹೀಗಿದೆ:

'' ಜೋಯಿಸರು ಗ್ರಂಥವನ್ನು ಎರಡು ಭಾಗಗಳನ್ನಾಗಿ ವಿಭಜಿಸಿ ಮೊದಲ ಭಾಗದಲ್ಲಿ ಹರಿಹರ ಕ್ಷೇತ್ರ ಪರಿಚಯ, ಪೀಠಿಕೆ, ಪುರಾಣ ಕಾಲ ಅನಂತರ ದೇವಾಲಯದ ವಾಸ್ತು ಶಿಲ್ಪ ಹಾಗೂ ಇತಿಹಾಸ (ಕದಂಬರಿಂದ ಮೈಸೂರು ಒಡೆಯರ ವರೆಗಿನ ವಿವಿಧ ರಾಜ ವಂಶಗಳ ಕಾಲದಲ್ಲಿ ಹರಿಹರದ ಬೆಳವಣಿಗೆ) ಇವನ್ನು ವಿವರಿಸಿದ್ದಾರೆ. ಎರಡನೆಯ ಭಾಗದಲ್ಲಿ ಅಲ್ಲಿಯ ಶಾಸನಗಳ ಪಾಠ ಮತ್ತು ಅವುಗಳ ಅನುವಾದ ನೀಡಿದ್ದಾರೆ. ಅನಂತರ ಕೆಲವು ಆಧಾರಗಳನ್ನು ಸೂಚಿಸಿದ್ದಾರೆ... ಧಾರ್ಮಿಕ ಕ್ಷೇತ್ರವನ್ನು ಕುರಿತು ಇತಿಹಾಸದ ಚೌಕಟ್ಟಿನಲ್ಲಿ ಚೊಕ್ಕವಾಗಿ ನಿರೂಪಿಸಲ್ಪಟ್ಟಿರುವ ಈ ಕೃತಿ ಜೋಯಿಸರ ಒಂದು ಉಪಯುಕ್ತ ಕೃತಿಯಾಗಿದೆ. ಕೆಲವು ಸಣ್ಣ ಪುಟ್ಟ ದೋಷಗಳನ್ನು ಬಿಟ್ಟರೆ ಹರಿಹರ ಕ್ಷೇತ್ರ ಧಾರ್ಮಿಕ ಸಾಂಸ್ಕೃತಿಕ ಕ್ಷೇತ್ರಗಳನ್ನು ಪರಿಚಯಿಸುವ ಉತ್ತಮ ಕೃತಿ.''

ಇನ್ನು 'ಕರೀಭಂಟ'ದ ವಿಚಾರ. ಜೋಯಿಸರು ಮೇಲೆ ತಿಳಿಸಿದ ಲೇಖನಗಳ ಪಟ್ಟಿಯಲ್ಲಿ ಇದನ್ನು ಹೆಸರಿಸಿದ್ದರೂ ಆ ವಿಷಯ ಒಂದು ಪುಸ್ತಕದ ಗಾತ್ರಕ್ಕೆ ಬೆಳೆದಿತ್ತೆಂದು ಈಗ ಇರುವ ಹಸ್ತಪ್ರತಿಯನ್ನು ನೋಡಿದಾಗ ಅನಿಸುತ್ತದೆ. ಕರೀಭಂಟನನ್ನು ಕುರಿತ ಅವರ (ಪೂರ್ಣತೆಯ ಸಿದ್ಧತೆಯಲ್ಲಿದ್ದ) ಜೋಯಿಸರ ಬರಹವನ್ನು ಜಿ. ವರದರಾಜರಾವ್ ಅವರು ನೋಡಿದ್ದರೆಂದು ಅವರ 'ಕುಮಾರ ರಾಮನ ಸಾಂಗತ್ಯಗಳು' ಎಂಬ ಸಂಶೋಧನ ಮಹಾ ಪ್ರಬಂಧದೊಳಗೆ ಅವರು ಮಾಡಿರುವ ಪ್ರಸ್ತಾಪದಿಂದ ತಿಳಿಯುತ್ತದೆ. ೧೯೭೭ರಲ್ಲಿ 'ಕರಿಭಂಟನ ಐತಿಹಾಸಿಕತೆ' ಎಂಬ ಒಂದು ಸಂಶೋಧನ ಲೇಖನ ಬರೆದಿರುವ ಎಸ್.ವಿ. ಗೌಡೂರ್ ಅವರು, ಮೇಲೆ ಹೇಳಿದ ಡಾ. ಜಿ. ವರದರಾಜರಾಯರ ಪ್ರಸ್ತಾಪದ ಜೊತೆಗೆ ಜೋಯಿಸರ ಅಪ್ರಕಟಿತ ಬರಹವನ್ನು ನೋಡಿರುವಂತೆ ಭಾಸವಾಗುತ್ತದೆ. ಆದರೆ ಜೋಯಿಸರ ಆ ಬರಹ ಈವರೆಗೂ ಪ್ರಕಟವಾಗಿಲ್ಲವಾದ್ದರಿಂದ ಅದರ ಬಗ್ಗೆ ಒಂದೆರಡು ಅಂಶಗಳನ್ನು ಇಲ್ಲಿ ಹೇಳಬಹುದು.

ಕರೀಭಂಟನನ್ನು ಕುರಿತ ಜೋಯಿಸರ ಬರಹ ಅವರ ವಿಸ್ತಾರವಾದ ಸಂಶೋಧನೆಗಳಲ್ಲೊಂದು. 'ಕರೀಭಂಟನ ಕಥೆ' ಎಂದು ಅವರು ಕರೆದಿರುವ ಆ ಪುಸ್ತಕ ಫುಲ್‌ಸ್ಕೇಪ್ ಗಾತ್ರದ ಸುಮಾರು ೭೦ ಪುಟಗಳಷ್ಟಿದ್ದು, ವಿಷಯ ಸಂಗ್ರಹ ಅಚ್ಚರಿಗೊಳಿಸುವ ಪ್ರಮಾಣದಲ್ಲಿದೆ. ಇಷ್ಟಾದರೂ ಈ ಸಂಗ್ರಹದಲ್ಲಿ ನಿರ್ದಿಷ್ಟ ಕ್ರಮವಿಲ್ಲದೇ ಕೆಲವು ವಿವರಗಳು ಪುನರಾವರ್ತನೆಗೊಂಡಿವೆ. ಇದರಲ್ಲಿ ಮೊದಲಿಗೆ ಕರೀಭಂಟನದೆಂದು

ಪ್ರಚಲಿತವಾಗಿರುವ ಕಥೆಯನ್ನು ಕೊಟ್ಟಿದ್ದಾರೆ. ಅದರೊಳಗೆ ಬರುವ ಪ್ರತಿಯೊಂದು ಪಾತ್ರವನ್ನೂ ಸ್ಥಳವನ್ನೂ ವಿಸ್ತಾರವಾದ ಟಿಪ್ಪಣಿ ವಂಶವೃಕ್ಷ ಉಲ್ಲೇಖಗಳ ಸಮೇತ, ಇತಿಹಾಸದ ಗಂಗ, ಹೊಯ್ಸಳ ಇತ್ಯಾದಿ ವಂಶಗಳ ವ್ಯಕ್ತಿಗಳೊಂದಿಗೆ ಮತ್ತು ನಿರ್ದಿಷ್ಟ ಸ್ಥಳಗಳೊಂದಿಗೆ ಗುರುತಿಸಲು ಪ್ರಯತ್ನ ಮಾಡಿದ್ದಾರೆ. ಮುಂದೆ ಇವೆಲ್ಲವನ್ನೂ ವ್ಯವಸ್ಥೆಗೊಳಿಸಿ ಪುಸ್ತಕ ರೂಪದಲ್ಲಿ ವಾಚಕರ ಕೈಗಿಡುವ ಉದ್ದೇಶವನ್ನು ಜೋಯಿಸರು ಹೊಂದಿದ್ದರೆಂದು ಸ್ಪಷ್ಟವಾಗುತ್ತದೆ. ಇದು ಸುವ್ಯವಸ್ಥೆಗೊಂಡು ಸಂಪಾದಿಸಲ್ಪಟ್ಟು ಪ್ರಕಟವಾದರೆ ಅಭ್ಯಾಸಿಗಳಿಗೆ ಸಂಶೋಧಕರಿಗೆ ಅಮೂಲ್ಯ ಪುಸ್ತಕವೊಂದು ದೊರೆತಂತಾಗುತ್ತದೆ.

ಮೇಲೆ ಹೇಳಿದ ಪಟ್ಟಿಯಲ್ಲಿಲ್ಲದ ಅವರ ಇನ್ನೊಂದು ಅಪ್ರಕಟಿತ ಕೃತಿಯೂ ಇದೆ. ಅದನ್ನು ಅವರು ' ಮರುಳಸಿದ್ಧ ಚರಿತೆ ' ಎಂದು ಹೆಸರಿಸಿದ್ದಾರೆ. ಇದು ಫುಲ್‌ಸ್ಕೇಪ್ ಗಾತ್ರದ ಸುಮಾರು ೮೦ ಪುಟಗಳಷ್ಟಿದೆ. ಇದರಲ್ಲಿ ಮೊದಲ ೪೦ ಪುಟ ' ಮರುಳ ಸಿದ್ಧ ಕಾವ್ಯ 'ದ ಕವಿ ಮತ್ತು ಗ್ರಂಥ ವಿಷಯ ಇತ್ಯಾದಿಗಳ ವಿವರಣೆಯನ್ನೊಳಗೊಂಡಿದ್ದರೆ ಅನಂತರದ ೪೦ ಪುಟಗಳು ಆ ಕಾವ್ಯದ ಸರಳ ಸುಂದರ ಗದ್ಯಾನುವಾದವನ್ನು ಒಳಗೊಂಡಿದೆ. ಇದು ಜೋಯಿಸರ ಹಳಗನ್ನಡ ಸಾಹಿತ್ಯದ ಬಗೆಗಿನ ಪ್ರೇಮವನ್ನೂ ಕವಿ - ಸಾಹಿತ್ಯ ಕುರಿತ ಅವರ ಸಂಶೋಧನೆಯ ಕ್ರಮವನ್ನೂ ಮನಸ್ಸಿಗೆ ತರುತ್ತದೆ. ಇದು ಕೂಡ ಪ್ರಕಟವಾದರೆ, ಹಳಗನ್ನಡ ಸಾಹಿತ್ಯದ ಬಗೆಗೆ ಈ ಕಾಲದಲ್ಲಿ ಕುಂದುತ್ತಿರುವ ಆಸಕ್ತಿ ಕೆಲ ಮಟ್ಟಿಗೆ ಚಿಗುರಲು ನೆರವಾಗಬಹುದು ಎನಿಸುತ್ತದೆ.

ಹೀಗೆ ಬೆಳಕು ಕಾಣದಿರುವ ಇನ್ನೂ ಹಲವಾರು ಲೇಖನಗಳೂ ಪುಸ್ತಕಗಳೂ ಇರಬಹುದಾದ ಸಾಧ್ಯತೆ ಇದೆ. ಈ ಪುಸ್ತಕದ ಕೊನೆಯಲ್ಲಿ ಅನುಬಂಧದಲ್ಲಿ ಕೊಟ್ಟಿರುವ ಜೋಯಿಸರ ಲೇಖನಗಳ ಮತ್ತು ಪುಸ್ತಕಗಳ ಪಟ್ಟಿ ಸಮಗ್ರ ಎಂದು ಹೇಳುವಂತಿಲ್ಲ.

ಅಂತೂ ಮೇಲೆ ಹೇಳಿದ ಗ್ರಂಥ ಪ್ರಕಟಣ ಸಮಿತಿ ಹೊರ ತಂದ ಜೋಯಿಸರ ಲೇಖನಗಳ ಎರಡು ಸಂಪುಟಗಳ ಪ್ರಕಟಣೆಯಿಂದ, ಇತಿಹಾಸವನ್ನು ಕುರಿತು ಇಷ್ಟೊಂದು ಲೇಖನಗಳನ್ನು ಬರೆದೂ ಮರೆವಿನಲ್ಲಿ ಮುಚ್ಚಿಹೋಗುತ್ತಿದ್ದ ಅವರನ್ನು ಮತ್ತೊಮ್ಮೆ ಕರ್ನಾಟಕದ ಜನತೆಯ ಸ್ಮರಣೆಗೆ ತಂದಂತಾಗಿದೆ. ಅವರ ಉಳಿದ ಎಲ್ಲ ಲೇಖನಗಳೂ ಪುಸ್ತಕಗಳೂ ಪ್ರಕಟವಾದರೆ ಇತಿಹಾಸ ಸಂಶೋಧನ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ, ಅಧ್ಯಯನಶೀಲರಿಗೆ ಅಮೂಲ್ಯ ನಿಧಿಯೊಂದು ದೊರೆತಂತಾಗುತ್ತದೆ ಎನ್ನಬಹುದು. ಹಾಗೆಯೇ ಜೋಯಿಸರಿಗೆ ತಕ್ಕ ಗೌರವದ ಸ್ಮಾರಕವನ್ನೂ ಆಮೂಲಕ ನಿಲ್ಲಿಸಿದಂತೆ ಆಗುತ್ತದೆ. ಅವರ ಶ್ರಮದಿಂದ ಸ್ಥಾಪಿತವಾದ ವಸ್ತು ಸಂಗ್ರಹಾಲಯಕ್ಕೆ ಅವರ ಹೆಸರಿಡಬೇಕೆಂದು೧೯೪೮ರಲ್ಲಿ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಸೂಚಿಸಿದ ಸೂಕ್ತ

ಸಲಹೆಯೊಂದು ಇನ್ನೂ ಹಾಗೇ ಉಳಿದಿದೆ.

ಪ್ರಾದೇಶಿಕ ಇತಿಹಾಸಕ್ಕಾಗಿ ಶ್ರಮಿಸಿದ ಕಪಟರಾಳ ಕೃಷ್ಣರಾವ್ (ಸುರಪುರದ ಇತಿಹಾಸ), ಚಿಕ್ಕೆರೂರು ಗೋವಿಂದಾಚಾರ್ಯ (ಹರಪನಹಳ್ಳಿ ಇತಿಹಾಸ), ಕೆ. ನಾರಾಯಣಾಚಾರ್ಯ (ಮಧುಗಿರಿ ಇತಿಹಾಸ), ನಾ. ಭಾ. ಶಾಸ್ತ್ರಿ (ಕೊಪ್ಪಳದ ಇತಿಹಾಸ) - ಇಂಥ ಕೆಲವೇ ಕೆಲವರ ಸಾಲಿನಲ್ಲಿ ಶ್ರೀನಿವಾಸ ಜೋಯಿಸರು ವಿಶಿಷ್ಟ ಸ್ಥಾನ ಹೊಂದಿದ್ದಾರೆ.

■ ■

## ಅಪರೂಪದ ' ಮಾರ್ಗದರ್ಶಿ '

ಜೋಯಿಸರು ತಮ್ಮ ಸಂಶೋಧನೆಯ ಜೊತೆಗೆ, ಚಿತ್ರದುರ್ಗದ ಬೆಟ್ಟ ಕೋಟೆ ಮೊದಲಾದ ಪ್ರಾಚ್ಯಸ್ಮಾರಕಗಳನ್ನು ನೋಡಲು ಬರುತ್ತಿದ್ದ ಅನೇಕ ಸಂದರ್ಶಕರಿಗೆ ಮಾರ್ಗದರ್ಶಿಯ ಹಾಗೆ ಸ್ವಯಂ ಜೊತೆಯಲ್ಲಿ ಹೋಗಿ, ಅತ್ಯಂತ ಸ್ಫೂರ್ತಿಯಿಂದ ಪ್ರತಿಯೊಂದನ್ನೂ ತೋರಿಸಿ, ವರ್ಣಿಸುತ್ತಿದ್ದರು. ಬೆಟ್ಟ ನೋಡಲು ಬರುವವರು ಪ್ರಮುಖ ವ್ಯಕ್ತಿ (ವಿಐಪಿ) ಗಳೇ ಆಗಬೇಕಾಗಿರಲಿಲ್ಲ, ಪರಿಚಿತರೂ ಆಗಬೇಕಾಗಿರಲಿಲ್ಲ. ಅವರು ಯಾರಿದ್ದರೂ ಸರಿಯೇ, ಅವರಿಗೆ ನಿಜವಾದ ಆಸಕ್ತಿ ಇದೆ ಎನ್ನಿಸಿದರೆ ಆಯಿತು. ಜೋಯಿಸರು ಅವರಿಗೆ ಬೆಟ್ಟ ತೋರಿಸಲು ಹೊರಟುಬಿಡುತ್ತಿದ್ದರು. ಆ ದಿನ ಕೋರ್ಟಿನಲ್ಲಿ ಕೆಲಸವಿದ್ದರೆ, ತಮ್ಮ ಯಾರಾದರೊಬ್ಬರು ಸಹೋದ್ಯೋಗಿ ಮಿತ್ರರಿಗೆ ಅದರ ಬಗ್ಗೆ ತಿಳಿಸಿ, ಏನು ಮಾಡಬೇಕೆಂದು ಹೇಳಿ, ಬೆಟ್ಟ ತೋರಿಸಲು ಹೊರಡುತ್ತಿದ್ದರು.

'' ಒಮ್ಮೆ ಯಾರೋ ಹೊರಗಿನ ಮಿತ್ರರು ಚಿತ್ರದುರ್ಗವನ್ನು ನೋಡಲು ಬಂದರು. ಜೋಯಿಸರು ಅತ್ಯುತ್ಸಾಹದಿಂದ ಅವರಿಗೆ ಚಿತ್ರದುರ್ಗವನ್ನೆಲ್ಲಾ ತೋರಿಸಿ, ಹುಲೇಗೊಂದಿ (ಚಂದ್ರವಳ್ಳಿ) ಪ್ರದೇಶಕ್ಕೆ ಬಂದು ಅಂಕಳಿಮಠ, ಮಯೂರಶಾಸನ, ಮಯೂರತಟಾಕ ಮುಂತಾದವನ್ನು ತೋರಿಸಿದರು. ಎದುರಿಗೆ ಎದ್ದು ಕಾಣುತ್ತಿದ್ದ ಧವಳಪ್ಪನ ಗುಡ್ಡವನ್ನು ನೋಡಬೇಕೆಂಬ ಆಸೆಯನ್ನು ಆ ಮಿತ್ರರು ವ್ಯಕ್ತಪಡಿಸಿದರು. ಜೊತೆಯಲ್ಲಿದ್ದ ತರಾಸು ಮತ್ತಿತರ ಹುಡುಗರನ್ನು ಕರೆದುಕೊಂಡು ಜೋಯಿಸರು ಧವಳಪ್ಪನ ಗುಡ್ಡಕ್ಕೆ ಏರಲು ಆಗ ಇದ್ದ ಒಂದೇ ದಾರಿ, ಹಳೆಯ ಹಾದಿಯಲ್ಲಿ ನಡೆದರು. ಜೋಯಿಸರದು ಸ್ಥೂಲ ಕಾಯ. ಆ ದಾರಿಯಲ್ಲಿ ಧವಳಪ್ಪನ ಗುಡ್ಡ ಏರಬೇಕಾದರೆ ಬಂಡೆಗಳ ನಡುವಣ ಕಿಂಡಿಯಲ್ಲಿ ನುಸುಳಿ ಹೋಗಬೇಕು. ಹಾಗೆ ನುಸುಳಿ ಹೋಗಬೇಕಾದಾಗ ಜೋಯಿಸರ ದಪ್ಪನೆಯ ಶರೀರ ಅದಕ್ಕೆ ಆಸ್ಪದ ಕೊಡಲಿಲ್ಲ. ಅಂತಹ ಕಠಿಣ ಪರಿಸ್ಥಿತಿಯಲ್ಲೂ ಜೋಯಿಸರು ತಮ್ಮ ಉತ್ಸಾಹ ಕಳೆದುಕೊಳ್ಳಲಿಲ್ಲ. ಮೇಲೆ ಏರಿದವರು ಕೈಹಿಡಿದು ಎಳೆಯಬೇಕು. ಕೆಳಗಿನಿಂದ ಒಬ್ಬರು ಜೋಯಿಸರನ್ನು ಮೇಲಕ್ಕೆ ತಳ್ಳಬೇಕು - ಈ ಅವಸ್ಥೆಯನ್ನು ದಾಟಿ, ಹಣ್ಣುಗಾಯಿ ನೀರುಗಾಯಿಯಾಗಿ ಜೋಯಿಸರು ಎರಡು

ಬಂಡೆಗಳ ನಡುವೆ ಸುಸುಳಿ ಮೇಲೆ ಬಂದರು. ಚಿತ್ರದುರ್ಗ, ಅಲ್ಲಿನ ಪರಿಸರ, ಇತಿಹಾಸ ವನ್ನು ಹೊರಗಿನಿಂದ ಬಂದ ಮಿತ್ರರಿಗೆ ಪರಿಚಯಿಸುವ ಕಾರ್ಯದಲ್ಲಿ ತಮ್ಮ ಶ್ರಮವನ್ನು ಮರೆತರು - ಜೋಯಿಸರು. '' ಹೀಗೆ ಜೋಯಿಸರು ದೈಹಿಕ ಆಯಾಸವನ್ನು ಲೆಕ್ಕಿಸದ ಚಿತ್ರದುರ್ಗವನ್ನು ನೋಡಲು ಬಂದವರಿಗೆ ಕಿಂಚಿತ್ತೂ ನಿರಾಶೆಯಾಗದಂತೆ ಮಾರ್ಗ ದರ್ಶನ ನೀಡಿ ಅವರ ಮನ ತಣಿಸುತ್ತಿದ್ದುದನ್ನು ತರಾಸು ಅವರ ಬಾಯಿಂದ ಕೇಳಿದ ಅವರ ಒಡನಾಡಿ ನಾ. ಪ್ರಭಾಕರ್ ಪಾಂಡವಪುರ ಅವರು ಒಂದೆಡೆ ದಾಖಲಿಸಿದ್ದಾರೆ.

'' ಅವರೊಂದಿಗೆ ಬೆಟ್ಟ ಕೋಟೆಯಲ್ಲಿ ಅಡ್ಡಾಡಿದಾಗ, ಹಿಂದೆಂದೂ ಕಾಣದ ಸೌಂದರ್ಯ, ಅಪೂರ್ವ ವೈಶಿಷ್ಟ್ಯ ಕಂಡುಬರುತ್ತದೆ. ಅಂತಲೇ ಅದೊಂದು ರಸಾನುಭವವಾಗುತ್ತದೆ. '' ಎಂದು ಅವರೊಂದಿಗೆ ಬೆಟ್ಟದಲ್ಲಿ ಅಡ್ಡಾಡಿ ರಸಾನುಭವ ಪಡೆದ ತರಾಸು ಅವರೇ ಒಂದೆಡೆ ವರ್ಣಿಸಿದ್ದಾರೆ. '' ಜೋಯಿಸರ ವಿವರಣೆಯನ್ನು ಕೇಳುತ್ತಿರುವಾಗ ನಮ್ಮ ಸಂಸ್ಕೃತಿಯ ಚರಿತ್ರೆ ಕಣ್ಣಿಗೆ ಕಟ್ಟಿದಂತಾಯಿತು '' ಎಂದು ಕವಿ ಡಿ.ಎಸ್. ಕರ್ಕಿ ಸ್ಮರಿಸಿಕೊಂಡಿದ್ದಾರೆ. '' ಚಿತ್ರದುರ್ಗವನ್ನು ತೋರಿಸುತ್ತಾ ಅವರು ವಿವರಿಸುತ್ತಿದ್ದುದನ್ನು ಕೇಳುವಾಗ ಅವರೊಂದು ವಿಶ್ವಕೋಶ ಎನಿಸುತ್ತಿತ್ತು '' ಎಂದು 'ತಾಯಿನಾಡು' ದಿನಪತ್ರಿಕೆಯ ಸಂಪಾದಕರಾಗಿದ್ದ ಪಿ.ಆರ್. ರಾಮಯ್ಯ ಉದ್ಗರಿಸಿರುವುದು ಅತಿಶಯೋಕ್ತಿ ಎನಿಸುವುದಿಲ್ಲ.

ಮೈಸೂರು ಸಂಸ್ಥಾನದ ಕೊನೆಯ ಮಹಾರಾಜರೂ, ಅಂದೊಮ್ಮೆ ರಾಜಪ್ರಮುಖರೂ ಆಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಒಮ್ಮೆ ಚಿತ್ರದುರ್ಗಕ್ಕೆ ಬಂದಿದ್ದಾಗ, ಪ್ರಖ್ಯಾತವಾದ ಚಂದ್ರವಳ್ಳಿಯ ಉತ್ಖನನ ಪ್ರದೇಶವನ್ನು ತೋರಿಸಲು ಅವರೊಂದಿಗೆ ಜೋಯಿಸರು ಹೋಗಿದ್ದಾಗ ನಡೆದ ಒಂದು ಘಟನೆ ಸ್ವಾರಸ್ಯಕರವಾಗಿದೆ. ಅಲ್ಲಿ ಬಂಡೆಗಳ ಬಳಿ ಒಂದೆಡೆ ಬರುತ್ತಿದ್ದಂತೆ ಜೋಯಿಸರು '' ಹುಲಿ! ಹುಲಿ! '' ಎಂದು ಕೂಗಿಕೊಂಡರಂತೆ. ಒಡೆಯರ್ ಮತ್ತು ಜತೆಯಲ್ಲಿ ಬಂದಿದ್ದವರು ಸ್ವಲ್ಪ ಗಾಬರಿಗೊಳ್ಳಲು, ಆಗ ಜೋಯಿಸರು ಬಂಡೆಯೊಂದರಲ್ಲಿ ಪುರಾತನ ಮನುಷ್ಯ ಮೂಡಿಸಿರುವ ದೊಡ್ಡದಾದ ಹುಲಿಯ ಚಿತ್ರವನ್ನು ತೋರಿಸಿ, '' ನೋಡಿ ಸ್ವಾಮಿ, ಇಲ್ಲಿದೆ ಹುಲಿ! '' ಎಂದಾಗ, ಒಡೆಯರ್ ಅವರು ಮತ್ತು ಜತೆಯಲ್ಲಿ ಬಂದಿದ್ದವರ ಗಾಬರಿ ಮಾಯವಾಗಿ ನಗೆಯ ಅಲೆ ಹೊಮ್ಮಿತಂತೆ. ಜೋಯಿಸರ ವಿನೋದಪ್ರಿಯತೆಗೆ ಒಡೆಯರ್ ಅವರು ಬೇಸರ ಮಾಡಿಕೊಳ್ಳದೆ ತಾವೂ ನಕ್ಕು ಅದನ್ನು ಸ್ವಾಗತಿಸಿದರು.

ಹೀಗೇ ಮೈಸೂರಿನ ಮುಖ್ಯಮಂತ್ರಿಗಳಾಗಿದ್ದ ಕೆ. ಹನುಮಂತಯ್ಯನವರು, ಕೇಂದ್ರ ಸರ್ಕಾರದ ಉಪ ಗೃಹಮಂತ್ರಿಯಾಗಿದ್ದ ಬೆಳಗಾವಿಯ ಪ್ರೊ. ವಿ.ಎನ್. ದಾತಾರ್, ಹಿರಿಯ

ಕವಿ ದ.ರಾ. ಬೇಂದ್ರೆ, ಕಾದಂಬರಿಕಾರರಾದ ದೇವುಡು ನರಸಿಂಹಶಾಸ್ತ್ರಿ, ಆನಕೃ, ಬೀಚಿ ವಿದ್ವಾಂಸರಾದ ಪ್ರೊ. ರಂ.ಶ್ರೀ. ಮುಗಳಿ, ಪ್ರೊ. ತೀ.ನಂ. ಶ್ರೀ, ಪ್ರೊ. ಸ.ಸ. ಮಾಳವಾಡ, ಪ್ರೊ. ಎ.ಎನ್. ಮೂರ್ತಿರಾವ್ ಪ್ರಖ್ಯಾತ ಗಮಕ ಕಲಾವಿದರಾದ ಶಕುಂತಲಾಬಾಯಿ ಮತ್ತು ಅವರ ಪತಿ ಪಾಂಡುರಂಗರಾವ್, ಚಿತ್ರಕಲಾವಿದರಾದ ಹೊನ್ನಪ್ಪ ಭಾಗವತರ್, ಬಿ. ಸರೋಜಾದೇವಿ,ಮುಂತಾದವರು ಜೋಯಿಸರ ಮಾರ್ಗದರ್ಶನದಲ್ಲಿ ಚಿತ್ರದುರ್ಗದ ಬೆಟ್ಟ ಕೋಟೆಯನ್ನು ನೋಡಿ ಆನಂದಿಸಿದವರಲ್ಲಿ ಸೇರಿದ್ದಾರೆ.

ಚಂದ್ರವಳ್ಳಿಯ ಉತ್ಖನನ ಮತ್ತು ಚಿತ್ರದುರ್ಗದ ಪ್ರಾಚ್ಯವಸ್ತು ಅಧ್ಯಯನ ಇವುಗಳಿಗಾಗಿ ಡಾ. ಎಂ.ಎಚ್. ಕೃಷ್ಣ ಅವರು ಇಲ್ಲಿಗೆ ಬಂದಿದ್ದಾಗ ಅವರಿಗೆ ಜೋಯಿಸರು ತಾಮ್ರ ಶಾಸನ ಮುಂತಾಗಿ ಅನೇಕ ಮಾಹಿತಿ ನೀಡಿ ನೆರವಾಗಿದ್ದರು. ಹಾಗೆಯೇ ಗಳಗನಾಥರು, ಎಸ್. ಶ್ರೀಕಂಠಯ್ಯ ಮುಂತಾದವರಿಗೆ ಸಹ ದುರ್ಗದ ಪರಿಸರವನ್ನು ಪರಿಚಯ ಮಾಡಿಕೊಟ್ಟವರು ಜೋಯಿಸರು. ಚಂದ್ರವಳ್ಳಿಯ ಪರಿಸರದಲ್ಲಿ ಸುತ್ತಾಡುವಾಗ ಬಂಡೆಯೊಂದರಲ್ಲಿ ಕಂಡುಬಂದ ಬ್ರಾಹ್ಮೀಲಿಪಿಯ ಪ್ರಾಚೀನ ಶಾಸನವೊಂದನ್ನು ಡಾ. ಕೃಷ್ಣ ಅವರು ಓದಿ, ಅದು ಕದಂಬ ಮಯೂರಶರ್ಮನದೆಂದು ಹೇಳಿದಾಗ ಜೋಯಿಸರಿಗೆ ಆದ ಹರ್ಷ ಅಷ್ಟಿಷ್ಟಲ್ಲ. ಇದಾದ ಕೆಲ ಕಾಲದ ಮೇಲೆ ಹುಟ್ಟಿದ ಅವರ ಕೊನೆಯ ಮಗನಿಗೆ ಅವರು ಮಯೂರಶರ್ಮ ಎಂದು ನಾಮಕರಣ ಮಾಡಲು ಅದೇ ಸ್ಫೂರ್ತಿಯಾಯಿತು. ಚಿತ್ರದುರ್ಗದ ಬೆಟ್ಟ ಕೋಟೆಯ ಪ್ರಾಚ್ಯ ಪರಿಸರ ಮತ್ತು ಇತಿಹಾಸ ಜೋಯಿಸರ ಪಾಲಿಗೆ ಎಂಥ ಜೀವಂತ ಆಸಕ್ತಿಯ ವಿಷಯವಾಗಿದ್ದುವು ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ.

■■

# ಸ್ನೇಹ, ಪ್ರೋತ್ಸಾಹ

ಸ್ನೇಹ ಜೀವಿಯಾಗಿದ್ದ ಜೋಯಿಸರ ಸ್ನೇಹಿತ ವರ್ಗ ತುಂಬ ದೊಡ್ಡದು. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಚಳುವಳಿಗಳ ಸಂದರ್ಭದಲ್ಲಿ ಎಸ್. ವೀರಬಸಪ್ಪ, ಸಾಹುಕಾರ್ ವೀರಭದ್ರಪ್ಪ, ಎ. ಭೀಮಪ್ಪನಾಯಕ್, ವಿ. ಮಸಿಯಪ್ಪ ಮುಂತಾದ ಅನೇಕ ಪ್ರಮುಖರು ಅವರ ಸ್ನೇಹ ವಲಯದಲ್ಲಿದ್ದರೂ, ಅವರಲ್ಲಿ ತುಂಬ ಆಪ್ತರೆನಿಸಿದವರು ಎಸ್. ನಿಜಲಿಂಗಪ್ಪ ಮತ್ತು ಎಸ್. ರಂಗರಾವ್. ನಿಜಲಿಂಗಪ್ಪನವರ ಬಗೆಗಿನ ಅವರ ಅಭಿಮಾನವಂತೂ ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಬೆಳೆದು ಬಂದದ್ದು. ಸ್ವಾತಂತ್ರ್ಯ ಹೋರಾಟದ ಪ್ರಥಮದಲ್ಲಿ ಪೋಲಿಸರು ನಿಜಲಿಂಗಪ್ಪನವರನ್ನು ದಸ್ತಗಿರಿ ಮಾಡಲು ಬಂದಾಗ ಅವರಿಗೆ ಧೈರ್ಯ ತುಂಬುವಂತೆ ಜೋಯಿಸರು "ನಿಜಲಿಂಗಪ್ಪನವರೇ ನಿಶ್ಚಿಂತವಾಗಿರಿ. ನಿಮ್ಮದು ಚಂದ್ರಹಾಸನ ಜಾತಕ. ಮಂತ್ರಿ ದುಷ್ಟಬುದ್ಧಿ ಚಂದ್ರಹಾಸನನ್ನು ಮುಗಿಸಲು ಎಷ್ಟು ಸಂಚು ಹೂಡಿದರೂ ಏನಾಯಿತು? ಕೊನೆಯಲ್ಲಿ ಜಯಶೀಲನಾದದ್ದು ಅವನೇ, ಸಿಂಹಾಸನವೇರಿದ್ದೂ ಅವನೇ" ಎಂದು ಹೇಳಿದ್ದರಂತೆ. ಅವರು ಒಮ್ಮೊಮ್ಮೆ "ನಮ್ಮ ನಿಜಲಿಂಗಪ್ಪನವರು ಒಂದಲ್ಲ ಒಂದು ದಿನ ಅತ್ಯುನ್ನತಸ್ಥಾನಕ್ಕೆ ಹೋಗುತ್ತಾರೆ" ಎಂದೂ ಹೇಳುತ್ತಿದ್ದರಂತೆ. ಮುಂದೆ ಅವರ ಆ ಎಲ್ಲ ಮಾತೂ ನಿಜವಾಯಿತು; ಒಂದು ರೀತಿಯಲ್ಲಿ ಭವಿಷ್ಯವಾಣಿಯಾಯಿತು, ಎನ್ನುತ್ತಾರೆ.

ಜೋಯಿಸರು ಮತ್ತು ತಳುಕಿನ ಟಿ.ಎಸ್. ರಾಮಸ್ವಾಮಯ್ಯನವರ ಒಡನಾಟ ತುಂಬ ಅನ್ಯೋನ್ಯವಾದದ್ದು ಅವರೇನು ಒಡಹುಟ್ಟಿದವರಲ್ಲದಿದ್ದರೂ ಅದಕ್ಕಿಂತ ಹೆಚ್ಚಾಗಿ ಅಣ್ಣತಮ್ಮಂದಿರಂತಿದ್ದರು. ಚಿತ್ರದುರ್ಗದ 'ಕರ್ಣಾಟಕ ಸಂಘ'ದ ಕಾರ್ಯಕ್ರಮಗಳನ್ನು ಏರ್ಪಡಿಸುವಲ್ಲಿ ಅವರಿಬ್ಬರೂ ಜತೆಗೂಡಿ ಶ್ರಮಿಸುತ್ತಿದ್ದುದು ಅಂದಿನ ದಿನಗಳಲ್ಲಿ ಕಾಣುತ್ತಿದ್ದ ಸಾಮಾನ್ಯ ಸಂಗತಿಯಾಗಿತ್ತು. ಅವರ ಇನ್ನೊಬ್ಬ ಒಡನಾಡಿ, ಕತೆಗಾರರೂ ವಕೀಲ(ಪಬ್ಲಿಕ್ ಪ್ರಾಸಿಕ್ಯೂಟರ್)ರೂ ಆದ ಬಿ.ಕೆ. ರಾಮಚಂದ್ರರಾವ್. ಅವರು 'ಕರ್ಣಾಟಕ ಸಂಘ'ದ ಕಾರ್ಯದರ್ಶಿಯಾಗಿದ್ದರು. ವಿದ್ಯಾರ್ಥಿದಶೆಯಲ್ಲೇ 'ಓಬವ್ವ'ನ ಬಗ್ಗೆ ಕವನ ಬರೆದು ಜೋಯಿಸರ ಮನಗೆದ್ದು ಮುಖತಃ ಪರಿಚಯಕ್ಕೆ ಮೊದಲೇ ಆತ್ಮೀಯರಾಗಿದ್ದವರು ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜಿಗೆ ಕನ್ನಡ

ಉಪನ್ಯಾಸಕರಾಗಿ ಬಂದ ಜಿ. ವರದರಾಜರಾವ್. ಜೋಯಿಸರೂ, ಅವರೂ, ಎಂ. ವೆಂಕೋಬರಾಯರೂ '' ಮಳೆ ಇರಲಿ ಬಿಸಿಲಿರಲಿ ಈ ತ್ರಿಮೂರ್ತಿಗಳು ದುರ್ಗದ ರಸ್ತೆಗಳಲ್ಲಿ ಸಂಜೆ ವಾಯುವಿಹಾರಕ್ಕಾಗಿ ಹೋಗುತ್ತಿದ್ದ ದೃಶ್ಯ ಸರ್ವೇಸಾಮಾನ್ಯವಾಗಿತ್ತು. '' ಚಿತ್ರದುರ್ಗದಲ್ಲಿ ಬೆಟ್ಟದಲ್ಲಿ ಅನೇಕ ವರ್ಷ ಕಾಣಬರುತ್ತಿದ್ದ ಈ ' ಮಿತ್ರತ್ರಯ 'ವನ್ನು ಸ್ನೇಹಿತರು (ಫ್ರೆಂಚ್ ಕಾದಂಬರಿಕಾರ ಅಲೆಕ್ಸಾಂಡರ್ ಡ್ಯೂಮಾನ ಜನಪ್ರಿಯ ಕಾದಂಬರಿ ' ಕತ್ತಿವರಸೆಯ ಮೂವರು ಸಾಹಸಿಗರು ' ಬಗೆಗೆ ತಿಳಿದವರು) ವಿನೋದವಾಗಿ ' Three Musketeers ' ಎಂದು ಕರೆಯುತ್ತಿದ್ದರು.

ಜಿ. ವರದರಾಜರಾಯರು ಕುಮಾರರಾಮ ಸಾಂಗತ್ಯಗಳನ್ನು ಕುರಿತು ಸಂಶೋಧನ ಪ್ರಬಂಧ ರಚಿಸಲು ಜೋಯಿಸರೇ ಮುಖ್ಯ ಸ್ಫೂರ್ತಿ. ಜೋಯಿಸರು ಕವಿಕೃತಿಗಳ ಆಧಾರದಿಂದ ಬರೆದ ' ಕುಮಾರ ರಾಮ ' ಒಂದು ಸೊಗಸಾದ ಪುಸ್ತಕವಾದರೂ ಕುಮಾರ ರಾಮನ ಬಗ್ಗೆ ಇನ್ನಷ್ಟು ಸಂಶೋಧನೆ ನಡೆಯುವುದು ಸೂಕ್ತವೆನಿಸಿ ಅವರು ಜಿ. ವರದರಾಜರಾಯರು ಸಂಶೋಧನ ಮಹಾಪ್ರಬಂಧವನ್ನು ಬರೆಯಲು ಅವರು ಉತ್ತೇಜಿಸಿದರು. ಜೋಯಿಸರ ಆ ಪುಸ್ತಕ ಜಿ. ವರದರಾಜರಾಯರು ಮತ್ತಿತರ ಕೆಲವರಿಗೆ ಕುಮಾರ ರಾಮನ ಬಗ್ಗೆ ಸಂಶೋಧನೆ ಕೈಕೊಳ್ಳಲು ಹಾಗೆಯೇ ದೇಜಗೌ, ಸು. ರುದ್ರಮೂರ್ತಿಶಾಸ್ತ್ರಿ, ಡಾ. ಸಿ. ಓಂಕಾರಪ್ಪ, ಮುಂತಾಗಿ ಕನ್ನಡದ ಹಲವು ಲೇಖಕರಿಗೆ ಕುಮಾರ ರಾಮನನ್ನು ಕುರಿತು ಅವರೂ ಸಹ ಕಥಾನಕ ಕಾದಂಬರಿ ನಾಟಕ ಇತ್ಯಾದಿಗಳನ್ನು ಬರೆಯಲು ಸ್ಫೂರ್ತಿ ನೀಡಿತು. ಡಾ. ಶೇಷಶಾಸ್ತ್ರಿ, ಡಾ. ಸಿ.ಎಸ್. ಪಾಟೀಲ್, ಮುಂತಾದವರನ್ನೊಳಗೊಂಡು ನಾನು ಸಹ ಕುಮಾರ ರಾಮನ ಶಿಲ್ಪಗಳನ್ನು ಗುರುತಿಸಲು ಪ್ರಯತ್ನ ಕೈಗೊಂಡದ್ದುಂಟು. ಎಚ್. ದೇವೀರಪ್ಪ (೧೯೫೦-೬೦ರ ದಶಕದಲ್ಲಿ), ಡಾ. ಎಂ.ಎಂ. ಕಲಬುರ್ಗಿ(೨೦೦೦ದ ದಶಕದಲ್ಲಿ) ಅವರು ಕುಮಾರ ರಾಮನನ್ನು ಕುರಿತ ಸಾಂಗತ್ಯಗಳ ಹಸ್ತಪ್ರತಿಗಳನ್ನು ಸಂಗ್ರಹಿಸಿ ಸಂಪಾದಿಸಿ ಪ್ರಕಟಿಸಿದರು. ಕನ್ನಡದ ಮೇರುನಟ ಡಾ. ರಾಜಕುಮಾರ್ ಅವರು ಕುಮಾರ ರಾಮನ ಪಾತ್ರದಲ್ಲಿ ಅಭಿನಯಿಸಬೇಕೆಂದು ತೀವ್ರವಾಗಿ ಹಂಬಲಿಸಿದರಾದರೂ ಅದು ಕೈಗೂಡಲಿಲ್ಲ. ಈಚೆಗೆ ಅವರ ಪುತ್ರ ಶಿವರಾಜಕುಮಾರ್ ಆ ಪಾತ್ರವನ್ನು ಅಭಿನಯಿಸಿದ ಚಲನಚಿತ್ರ ತೆರೆ ಕಂಡಿತು. ಹೀಗೆ ಕನ್ನಡ ಸಾಹಿತ್ಯ ಹಾಗೂ ಚಲನಚಿತ್ರ ರಂಗದಲ್ಲಿ ತೀವ್ರ ಸಂಚಲನಕ್ಕೆ ಪ್ರೇರಣೆಯ ಮೂಲ ಕುಮಾರ ರಾಮನ ಬಗ್ಗೆ ಪ್ರಪ್ರಥಮವಾಗಿ ಪರಿಚಯಿಸಿದ ಜೋಯಿಸರ ಪುಸ್ತಕ ಎಂಬುದನ್ನು ಗಮನಿಸಬೇಕು.

ಹಾಗೆಯೇ ತರಾಸು ಚಿತ್ರದುರ್ಗದ ಪಾಳೆಯಗಾರರ ಇತಿಹಾಸ ಆಧರಿಸಿದ ಕಾದಂಬರಿಗಳನ್ನು ಬರೆಯಲು ಜೋಯಿಸರ ಪ್ರೇರಣೆಯೇ ಕಾರಣ. ಆದರೆ ಆ ಕಾದಂಬರಿ

ಮಾಲಿಕೆ ಪ್ರಕಟವಾಗುವ ಹೊತ್ತಿಗೆ ಜೋಯಿಸರು ವಿಧಿವಶರಾಗಿದ್ದರು. ಚಿತ್ರದುರ್ಗ ಸಂಬಂಧದಲ್ಲಿ ತರಾಸು ಬರೆದ ಮೊತ್ತಮೊದಲ ಕಾದಂಬರಿ ' ಹಂಸಗೀತೆ 'ಯಲ್ಲಿ ತಂದಿರುವ ಲಾಯರ್ ರಾಘವೇಂದ್ರರಾಯರ ಪಾತ್ರ ಚಿತ್ರಣಕ್ಕೆ ಜೋಯಿಸರೇ ಮಾದರಿ. ಮ. ಶ್ರೀಧರಮೂರ್ತಿ ಅವರು ತಮ್ಮ ' ನೆರೆಹೊರೆಯವರು ' ಪುಸ್ತಕದಲ್ಲಿ ' ಸಂಶೋಧಕ ಶಂಕರರಾಯರು ' ಎಂಬ ಹಾಸ್ಯ ಲೇಖನ ಬರೆಯಲು ಜೋಯಿಸರೇ ಪರೋಕ್ಷ ಸ್ಫೂರ್ತಿ. ಆದರೆ ಆ ಪಾತ್ರ ಜೋಯಿಸರ ತದ್ವತ್ತಾದ ಚಿತ್ರಣವಲ್ಲ, ಎಷ್ಟೋಪಾಲು ಕಾಲ್ಪನಿಕ.

ಬಿ. ಶಿವಮೂರ್ತಿ ಶಾಸ್ತ್ರಿಗಳೂ ಜೋಯಿಸರೂ ಆಪ್ತ ಬಂಧುಗಳಂತೆ ಇದ್ದರು. ಶಾಸ್ತ್ರಿಗಳು ಎಷ್ಟೋ ಬಾರಿ ದುರ್ಗಕ್ಕೆ ಬಂದಾಗ ಜೋಯಿಸರಲ್ಲಿ ತಂಗಿ ಸಾಹಿತ್ಯ ಇತಿಹಾಸ ಹೀಗೆ ಅನೇಕ ವಿಷಯಗಳ ಮೇಲೆ ದಿನಗಟ್ಟಲೆ ಚರ್ಚಿಸುತ್ತಿದ್ದರು. ಖ್ಯಾತ ಕವಿ - ಸಂಶೋಧಕರಾಗಿದ್ದ ಮಂಜೇಶ್ವರ ಗೋವಿಂದ ಪೈ ಅವರಿಗೂ ಜೋಯಿಸರಿಗೂ ಅನೇಕ ವಿಷಯಗಳ ಬಗ್ಗೆ ನಡೆಯುತ್ತಿದ್ದ ಪತ್ರವ್ಯವಹಾರ ಅವರ ನಡುವಿನ ಸ್ನೇಹ ಸೇತುವಾಗಿತ್ತು. ಜೋಯಿಸರು ಆಗಿನ ಇತಿಹಾಸ ತಜ್ಞರಾದ ಡಾ. ಎಸ್. ಶ್ರೀಕಂಠಶಾಸ್ತ್ರೀ, ತಿ.ತಾ. ಶರ್ಮ, ಆರ್.ಎಚ್. ದೇಶಪಾಂಡೆ, ವೆಂಕೋಬರಾವ್ ಇವರೊಂದಿಗೂ ಸಂಪರ್ಕ ಹೊಂದಿದ್ದರು.

ಶ್ರೀನಿವಾಸ ಜೋಯಿಸರು ತಾವು ಸಂಶೋಧಕರೂ ಲೇಖಕರೂ ಆಗಿದ್ದುದರ ಜೊತೆಗೆ ಅವರ ಸಂಪರ್ಕಕ್ಕೆ ಬಂದ ಅನೇಕರಲ್ಲಿ ಸ್ಫೂರ್ತಿತುಂಬಿ ಅವರನ್ನೂ ಸಂಶೋಧಕರಾಗಿ ಲೇಖಕರಾಗಿ ಬೆಳೆಯಲು ಹೊಸ ಕೃತಿಗಳನ್ನು ಬರೆಯಲು ಪ್ರೋತ್ಸಾಹಿಸುತ್ತಿದ್ದರು. ಅರಿಂದ ಹಾಗೆ ಉತ್ತೇಜಿಸಲ್ಪಟ್ಟವರಲ್ಲಿ ಗಳಗನಾಥರು, ಸಿದ್ದವ್ವನಹಳ್ಳಿ ಕೃಷ್ಣಶರ್ಮ, ತರಾಸು, ಜಿ. ವರದರಾಜರಾವ್ ಮುಂತಾದ ಖ್ಯಾತನಾಮರ ಜತೆಗೆ ಅವರ ಮಗ ಹು.ಶ್ರೀ. ಪಾಂಡುರಂಗ ಜೋಯಿಸ, ತಮ್ಮ ಆಪ್ತ ಒಡನಾಡಿಗಳಾದ ಲಾಳಸಿಂಗಿ ಸೋಮಣ್ಣ, ಮುರುಗಪ್ಪ, ಎನ್. ಸೂರಪ್ಪ, ಸಿ. ರಂಗಯ್ಯ, ಲಾವಣಿ ಮಂಜಣ್ಣ (ಕೋಟೇಶ್ವರ ಮಂಜುನಾಥರಾವ್), ಲಾವಣಿ ಬಸವರಾಜಪ್ಪ, ಲಕ್ಷ್ಮೀನರಸಿಂಹಶಾಸ್ತ್ರಿ, ತ.ಸು. ರಾಮಸ್ವಾಮಯ್ಯ (ತರಾಸು ಅವರ ತಂದೆ), ವುಂತಕಲ್ ಶ್ರೀನಿವಾಸರಾವ್, ಪಿ.ಆರ್. ತಿಪ್ಪೇಸ್ವಾಮಿ ಮುಂತಾದವರೂ ಸೇರಿದ್ದಾರೆ.

ವುಂತಕಲ್ ಶ್ರೀನಿವಾಸ ರಾವ್ ಅವರು ತುಂಬ ಉತ್ತಮ ಗುಣಮಟ್ಟದ ಪದ್ಯಗಳನ್ನು ರಚಿಸಿದ್ದರು. ಅವರ ಒಂದು ಪದ್ಯ ಮಾತ್ರ ಪ್ರಕಟವಾಗಿತ್ತು. ಅವರು ಬೇರೆಯಾವುದನ್ನೂ ಮುಂದೆ ಪ್ರಕಟಿಸಲಾಗಲಿಲ್ಲ. ಜೋಯಿಸರ ಜೊತೆ ಅನೇಕ ವಿಷಯ ಕುರಿತು ಅವರು ತೀವ್ರ ಚರ್ಚೆ ಮಾಡುತ್ತಿದ್ದುದುಂಟು. ಲಾಳಸಿಂಗಿ ಸೋಮಣ್ಣನವರು ವಕೀಲರ ಬಳಿ ಗುಮಾಸ್ತರಾಗಿದ್ದವರು. ರುಕ್ಮಾಂಗದ ಚರಿತ್ರೆ, ಸ್ಮರವಿಜಯ, ಲಿಖಿತ ಲೀಲಾ, ಲಕ್ಷ್ಮೀ ಸ್ವಯಂವರ ಮುಂತಾದ ಯಕ್ಷಗಾನ ಬಯಲು ನಾಟಕಗಳನ್ನು ರಚಿಸಿದ್ದರು. ' ಹಗಲು

ಕಗ್ಗೊಲೆಯ ಪ್ರಾನ್ಯ ' ಎಂಬ ತಮ್ಮ (ಜೋಯಿಸರ) ಗದ್ಯ ಕಥೆಯನ್ನು ಒಂದೇ ದಿನದಲ್ಲಿಯೇ ಸಾಂಗತ್ಯ ರೂಪದಲ್ಲಿ ಬರೆದು ಕೊಟ್ಟರು ಎಂದು ಜೋಯಿಸರು ಮುಕ್ತಕಂಠದಿಂದ ಪ್ರಶಂಸಿದ್ದಾರೆ. ಇದಲ್ಲದೆ ಅವರಿಗೆ ಆಕರ್ಷಕವಾಗಿ ಹರಿಕಥೆ - ಶಿವಕಥೆ ಕಲಾ ನೈಪುಣ್ಯವೂ ಇತ್ತು ಎಂದು ಹೇಳುತ್ತಾರೆ. ಮುರುಗಪ್ಪ ಎಂಬುವರು ಚಿತ್ರದುರ್ಗ ತಾಲ್ಲೂಕು ಕಛೇರಿಯಲ್ಲಿ ಮುಖ್ಯ ಗುಮಾಸ್ತರಾಗಿದ್ದವರು ಚಿತ್ರದುರ್ಗದಿಂದ ಹೊರಡುತ್ತಿದ್ದ ' ವೃತ್ತಾಂತ ರತ್ನಾಕರ ' ಎಂಬ ವಾರ ಪತ್ರಿಕೆಯ ಉಪ ಸಂಪಾದಕರಾಗಿದ್ದ ಇವರು ಶ್ರೇಷ್ಠ ಕವಿಗಳಾಗಿದ್ದರೆಂದು ಇವರು ರಚಿಸಿದ ಗ್ರಂಥಗಳು ಉಪಲಬ್ದವಿಲ್ಲವೆಂದು ಜೋಯಿಸರೇ ಒಂದೆಡೆ ಬರೆದಿದ್ದಾರೆ.

ಒನಕೆಯಿಂದ ಹೈದರಾಲಿಯ ಸೈನಿಕರನ್ನು ಹೊಡೆದು ದುರ್ಗದ ಕೋಟೆಯನ್ನು ರಕ್ಷಿಸಿದುದಾಗಿ ಜನಪ್ರಚುರವಾಗಿರುವ ವೀರ ವನಿತೆ ಓಬವ್ವನ ವೃತ್ತಾಂತದ ಮೇಲೆ ಒಂದು ' ಜನಪದ ಗೀತೆ ' ಬರೆಯಲು ಸಿ. ರಂಗಯ್ಯ ಎಂಬ ಉಪಾಧ್ಯಾಯ ಮಿತ್ರರನ್ನು ಉತ್ತೇಜಿಸಿದವರು ಜೋಯಿಸರು. ರಂಗಯ್ಯನವರು ಭರಮಣ್ಣನಾಯಕನ ಬಗ್ಗೆ ಕೂಡ ಒಂದು ಪದ್ಯ ಬರೆಯಲು ಜೋಯಿಸರ ಕಾರಣರಾದರು. ಹಾಗೆಯೇ ಮಿತ್ರ ಲಾಳಸಿಂಗಿ ಸೋಮಣ್ಣನವರಿಂದ ಸಾಹಸಿ ಮತ್ತಿ ತಿಮ್ಮಣ್ಣನಾಯಕನ ಮೇಲೆ ಒಂದು ಸಾಂಗತ್ಯ ಕಾವ್ಯ ಬರೆಸಿದರು. ಮೇಲೆ ಹೇಳಿದ ಸೂರಪ್ಪ ಅವರು ಚಿತ್ರದುರ್ಗದ ಕೋರ್ಟಿನಲ್ಲಿ ಶೀಘ್ರಲಿಪಿಕಾರರಾಗಿದ್ದರು. ಅವರಿಗೆ ರಂಗ ಕಲೆಯಲ್ಲಿ ತೀವ್ರ ಆಸಕ್ತಿ ಇತ್ತು. ಜೋಯಿಸರ ಸ್ಫೂರ್ತಿಯಿಂದ ಅವರು ಕೆಲವು ನಾಟಕಗಳನ್ನು ಬರೆದಿದ್ದರಲ್ಲದೆ ತಮ್ಮ ' ರಣವೈದ್ಯ ' ಎಂಬ ನಾಟಕವನ್ನು ಅವರೇ ನಿರ್ದೇಶಿಸಿ ಪ್ರದರ್ಶಿಸಿದ್ದರು. ಅದಲ್ಲದೆ ಬೇರೆ ಕೆಲವು ನಾಟಕಗಳನ್ನು ಆಡಿಸುವಲ್ಲಿಯೂ ಅವರ ಪಾತ್ರವಿತ್ತು. ಆಗ ಅವರ ತಂಡದಲ್ಲಿ ಪಾತ್ರ ಮಾಡುತ್ತಿದ್ದವರಲ್ಲಿ ಇಂದು ಚಿತ್ರನಟರಾಗಿ ಹೆಸರಾದ ಎಚ್. ಜಿ. ಸೋಮಶೇಖರರಾವ್ (ಸೋಮಣ್ಣ) ಸಹ ಒಬ್ಬರು.

ಜೋಯಿಸರ ಸ್ನೇಹ ವಲಯದಲ್ಲಿದ್ದವರಲ್ಲಿ ಹಿರಿಯೂರು ತಾಲ್ಲೂಕು ಹರ್ತಿಕೋಟೆಯ ವೀರನಾಯಕರೂ ಒಬ್ಬರು. ಅವರು ಸರ್ಕಾರದ ಕಂದಾಯ ಇಲಾಖೆಯಲ್ಲಿ ಇದ್ದವರಾದರೂ ಚಿತ್ರದುರ್ಗದ ಪಾಳೆಯಗಾರರ ಇತಿಹಾಸದ ಬಗ್ಗೆ, ಇತಿಹಾಸದ ಬಗ್ಗೆ ಅತೀವ ಆಸಕ್ತಿಯನ್ನು ತಳೆದಿದ್ದವರು. ಕೆಲವು ಕೃತಿಗಳನ್ನೂ ರಚಿಸಿದ್ದವರು. ಜೋಯಿಸರು ಒಮ್ಮೆ ಹರ್ತಿಕೋಟೆಗೆ ಬಂದು ವೀರನಾಯಕರನ್ನು ಭೇಟಿಯಾದಾಗ ಅವರು ಹರ್ತಿಕೋಟೆ ಸ್ಥಳನಾಮದ ಬಗ್ಗೆ ಜೋಯಿಸರಿಗೆ ವಿವರಿಸಿದ ರೀತಿ ಮೆಚ್ಚುವಂತಹದಾಗಿತ್ತು ಎಂದು ಪಿ. ಆರ್. ತಿಪ್ಪೇಸ್ವಾಮಿಯವರು ಬರೆದಿದ್ದಾರೆ. ತಮ್ಮ ಬಳಿ ಇದ್ದ ಆರಕೆರೆ ತಾಮ್ರ ಶಾಸನವನ್ನು ವೀರನಾಯಕರು ಜೋಯಿಸರಿಗೆ

ಅಧ್ಯಯನಕ್ಕಾಗಿ ನೀಡಲು ೧೯೫೦ರಲ್ಲಿ ಚಿತ್ರದುರ್ಗಕ್ಕೆ ಬಂದಿದ್ದಾಗ ತಮ್ಮ ಕ್ಯಾಮರಾದಿಂದ ಅವರ ಛಾಯಾಚಿತ್ರ ತೆಗೆದು ತರುವಾಯದಲ್ಲಿ ವೀರನಾಯಕರಿಗೆ ತಮ್ಮ ಸಹಿಯೊಂದಿಗೆ ಕಳುಹಿಸಿಕೊಟ್ಟದ್ದು ಒಂದು ಅಪರೂಪದ ಘಟನೆಯೆಂದು ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ಒಂದೆಡೆ ಬಣ್ಣಿಸಿದ್ದಾರೆ.

ಪಿ. ಆರ್. ತಿಪ್ಪೇಸ್ವಾಮಿ ಅವರು ಸಹ ಅದೇ ಹರ್ತಿಕೋಟೆ ಗ್ರಾಮದವರು. ಖ್ಯಾತ ಚಿತ್ರಕಾರರು, ಜನಪದ ಸಾಹಿತ್ಯ ಸಂಗ್ರಾಹಕರು ಮತ್ತು ಲೇಖಕರು. ಅವರ ಚಿತ್ರಗಳಲ್ಲಿ ನಿಸರ್ಗ, ಪ್ರೇಕ್ಷಣೀಯ ಸ್ಥಳಗಳು, ಕೋಟೆ, ದೇವಾಲಯ ಇತ್ಯಾದಿಗಳು ಹೆಚ್ಚು ಪ್ರಾಧಾನ್ಯವನ್ನು ಪಡೆದಿವೆ. ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಹೊಂದಿರುವ ಇವರು ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಅಧ್ಯಕ್ಷರೂ ಆಗಿದ್ದರು. ಮೈಸೂರು ವಿಶ್ವವಿದ್ಯಾನಿಲಯದ ಜಾನಪದ ವಸ್ತು ಸಂಗ್ರಹಾಲಯದ ಸ್ಥಾಪಕರಲ್ಲಿ ಒಬ್ಬರು. ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಯವರು 'ಮಂಜೂಷ' ವಸ್ತುಸಂಗ್ರಹಾಲಯವನ್ನು ರೂಪಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದವರು. ಇದಲ್ಲದೆ ಚಿತ್ರದುರ್ಗ ಬೃಹನ್ಮಠ ಪ್ರಾರಂಭಿಸಬೇಕೆಂದಿದ್ದ ವಸ್ತುಸಂಗ್ರಹಾಲಯದ ವಿಷಯದಲ್ಲೂ ಸಹ ಇವರು ಸಹಕಾರ ಹಸ್ತ ನೀಡಿದ್ದರು. ಹೊಸದುರ್ಗದಲ್ಲಿ ನಡೆದ ಚಿತ್ರದುರ್ಗ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೂ ಆಗಿದ್ದರು. ತಮ್ಮನ್ನು ಪ್ರೋತ್ಸಾಹಿಸಿದವರಲ್ಲಿ ಜೋಯಿಸರೂ ಒಬ್ಬರು ಎಂದು ತಿಪ್ಪೇಸ್ವಾಮಿಯವರೇ ಒಂದೆಡೆ ಅಭಿಮಾನದಿಂದ ಹೇಳಿಕೊಂಡಿದ್ದಾರೆ.

'' ಕಲೆ ಪ್ರತಿಭೆ ಇದ್ದವರು ಯಾರೇ ಇರಲಿ ಅದನ್ನು ಗುರುತಿಸಿ ಯಾವುದೇ ಭೇದಭಾವನೆ ಇಲ್ಲದೆ ಅವರಿಗೆ ಜೋಯಿಸರು ಉತ್ತೇಜನ ಕೊಡುತ್ತಿದ್ದರು. ಅವರ ಸ್ವಭಾವವೇ ಹಾಗಿತ್ತು. ಬರೆಯುವ ಅಭಿರುಚಿ ಇದ್ದ ನನಗೂ ಅವರು ತುಂಬ ಪ್ರೋತ್ಸಾಹಿಸಿದರು. ಆದರೆ 'ಚಿತ್ರದುರ್ಗದ ಇತಿಹಾಸ' ಮತ್ತಿತರ ಕೆಲವು ಲೇಖನಗಳನ್ನೂ 'ಶಿವಮಾರ' ಮುಂತಾದ ಪದ್ಯಗಳನ್ನೂ ಬರೆದ ನಾನು ಆ ಮಾರ್ಗದಲ್ಲಿ ಮುಂದೆ ಹೋಗಲಾಗಲಿಲ್ಲ'' ಎಂದು ಜೋಯಿಸರ ಆಪ್ತ ಒಡನಾಡಿಗಳಲ್ಲಿ ಮತ್ತು ದುರ್ಗದ ಖ್ಯಾತ ವಕೀಲರಲ್ಲಿ ಒಬ್ಬರಾದ ಎಂ. ವೆಂಕೋಬರಾಯರು ಜೋಯಿಸರ ವಿಶಾಲ ಮನಸ್ಸನ್ನೂ ಪ್ರೋತ್ಸಾಹ ಗುಣವನ್ನೂ ನೆನೆಯುತ್ತಾರೆ. '' ಜೋಯಿಸರ ಬಹುಪಾಲು ಲೇಖನಗಳನ್ನು ಅವರು ಪ್ರಕಟಣೆಗೆ ಕಳುಹಿಸುವ ಮುಂಚೆಯೇ ನಾವೆಲ್ಲ ಓದಿರುತ್ತಿದ್ದೆವು '' ಎಂದೂ ಅವರು ನೆನಪಿಸಿಕೊಳ್ಳುತ್ತಾರೆ. '' ಪ್ರತಿಭಾವಂತರಲ್ಲಿ ಜೋಯಿಸರಿಗೆ ಪ್ರೀತಿ ಅಭಿಮಾನಗಳಿದ್ದಂತೆ ಪ್ರತಿಯಾಗಿ ಅವರಿಗೂ ಜೋಯಿಸರಲ್ಲಿ ಗೌರವ ವಿಶ್ವಾಸಗಳಿದ್ದುವು. ಜೋಯಿಸರ ಅನೇಕ ಲೇಖನಗಳನ್ನು ಪ್ರಕಟಿಸಿದ ಹೆಸರಾಂತ ವಿದ್ವಾಂಸರಾದ ಬಿ. ಶಿವಮೂರ್ತಿಶಾಸ್ತ್ರಿಗಳು ಮತ್ತು ಇನ್ನು ಹಲವರು ಜೋಯಿಸರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು'' ಎಂಬುದನ್ನು

ಅವರು ಹೇಳುತ್ತಾರೆ.

ಪ್ರಾಚ್ಯವಸ್ತು ಸಂಗ್ರಹಾಲಯದ ಸಹಾಯಕರಾಗಿ ಜೋಯಿಸರೊಂದಿಗೆ ಅನೇಕ ವರ್ಷ ಕೆಲಸ ಮಾಡಿದ ಕೆ.ವಿ. ಮಂಜುನಾಥ ರಾವ್ ' ಲಾವಣಿ ಮಂಜಣ್ಣ ' ಎಂದೇ ಸುಪರಿಚಿತರಾದವರು. ಅವರ ಬಗ್ಗೆ ಕೆಲವು ಮಾತುಗಳನ್ನು ಇಲ್ಲಿ ಹೇಳಲೇ ಬೇಕು. ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರದವರಾದ ಇವರು ಅಲ್ಲಿ ಜೀವನ ಸಾಗಿಸಲಾಗದೆ ಅನೇಕ ಕಡೆ ಅಲೆದಾಡಿ ತಮ್ಮ ಮಿತ್ರರಿದ್ದ ಚಿತ್ರದುರ್ಗಕ್ಕೆ ಬಂದರು. ಇವರಿಗೆ ಯಾವುದೇ ವಿಷಯದ ಮೇಲೆ ಲಾವಣಿಯನ್ನು ರಚಿಸಿ ಅದನ್ನು ಸೊಗಸಾಗಿ ಹಾಡುವ ಪ್ರತಿಭೆ ಇತ್ತು. ಯಾವುದಾದರೂ ಸಮಾರಂಭ ನಡೆದರೆ, ಅದರ ಪ್ರಾರಂಭದಿಂದ ಕಡೆಯವರೆಗೆ ನಡೆದ ಪ್ರಮುಖ ಚಟುವಟಿಕೆಗಳನ್ನೂ ಭಾಷಣದ ಮುಖ್ಯಾಂಶಗಳನ್ನೂ ಲಾವಣಿ ರೂಪದಲ್ಲಿ ರಚಿಸಿ ಸಮಾರಂಭದ ಕಡೆಯಲ್ಲಿ ಹಾಡಿ ಸಭೆಯನ್ನು ಮಂತ್ರ ಮುಗ್ಧ ಗೊಳಿಸುವ ಆಶುಕವಿತ್ವದ ಕಲೆ ಅವರಿಗೆ ಕರಗತವಾಗಿತ್ತು. ಅವರು ಕೋಟೇಶ್ವರದ ಬಗ್ಗೆ ಬರೆದ ಲಾವಣಿಯನ್ನು ಜೋಯಿಸರಿಗೆ ತೋರಿಸಿದಾಗ ಅವರು ಅದಕ್ಕೆ ತಲೆದೂಗಿ ಮುನ್ನುಡಿ ಬರೆದು, ಅದನ್ನು ಒಂದು ಕಿರುಹೊತ್ತಿಗೆಯ ರೂಪದಲ್ಲಿ ಪ್ರಕಟಿಸಿ ಪ್ರೋತ್ಸಾಹಿಸಿದರು. ಅಷ್ಟೇ ಅಲ್ಲ, ಇವರ ಪ್ರತಿಭೆಯಿಂದ ಆಕರ್ಷಿತರಾದ ಜೋಯಿಸರು, ತಾವು ಪ್ರಾರಂಭಿಸಿದ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ತನ್ನ ಸಹಾಯಕರಾಗಿ ಇವರನ್ನು ನೇಮಿಸಿಕೊಂಡು, ಸರ್ಕಾರಕ್ಕೆ ಪತ್ರ ಬರೆದು ಆ ಕೆಲಸವನ್ನು ಅವರಿಗೆ ಖಾಯಂ ಗೊಳಿಸಿದರು.

ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆಯ ಸದಸ್ಯರಾಗಿದ್ದ ಜೋಯಿಸರು ಮಂಜುನಾಥರನ್ನು ಅನೇಕ ಸಭೆಗಳಲ್ಲಿ ಕರೆದುಕೊಂಡು ಹೋಗಿ ಅಲ್ಲಿ ಅವರು ಲಾವಣಿ ರಚಿಸಿ ಹಾಡಿ ಜನರನ್ನು ರಂಜಿಸಿ, ಮೆಚ್ಚುಗೆ ಪಡೆಯಲು ಅವಕಾಶವನ್ನು ಕಲ್ಪಿಸಿಕೊಡುತ್ತಿದ್ದರು. ಹೀಗಾಗಿ ಸಾಮಾನ್ಯ ಜನರಷ್ಟೇ ಅಲ್ಲದೆ ಕವಿವರ್ಯ ದ.ರಾ. ಬೇಂದ್ರೆ, ಅವರು, ಆಗಿನ ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ಕೆಂಗಲ್ ಹನುಮಂತಯ್ಯನವರು ಇವರ ಆಶುಕವಿತ್ವ ಶಕ್ತಿಯನ್ನು ಮೆಚ್ಚಿಕೊಂಡದ್ದುಂಟು.

ಜೋಯಿಸರು ಹೇಳುತ್ತಿದ್ದ ಚಿತ್ರದುರ್ಗದ ಇತಿಹಾಸದ ಅನೇಕ ಸಂಗತಿಗಳನ್ನೂ ಇವರು ಲಾವಣಿ ರೂಪದಲ್ಲಿ ರಚಿಸಿ ಸಭೆ ಸಮಾರಂಭಗಳಲ್ಲಿ ಹಾಡುತ್ತಿದ್ದರು. ಚಿತ್ರದುರ್ಗದ ಬೆಟ್ಟ ಕೋಟೆಯನ್ನು ನೋಡಲು ಬಂದ ವಿದ್ಯಾರ್ಥಿಗಳಿಗೆ, ವಿದ್ವಾಂಸರಿಗೆ, ಗಣ್ಯರಿಗೆ, ಜೋಯಿಸರ ಪ್ರತಿನಿಧಿಯಾಗಿ ಚಾರಿತ್ರಿಕ ಸ್ಥಳಗಳನ್ನು ತೋರಿಸಿ, ಇತಿಹಾಸದ ಬಗ್ಗೆ ಅಭಿಮಾನ ಮೂಡುವಂತೆ, ಅವುಗಳ ಮಹತ್ವವನ್ನು ವಿವರಿಸುತ್ತಿದ್ದರು. ಪ್ರಾಚ್ಯವಸ್ತು ಸಂಗ್ರಹಾಲಯವನ್ನು ನೋಡಿಕೊಳ್ಳುವಲ್ಲಿ ಇವರು ಕೇವಲ ಸಹಾಯಕ

ರೆಂಬಂತಿರದೆ ಜೋಯಿಸರಿಗೆ ಪರಮಾಪ್ತ ಶಿಷ್ಯನಂತೆ ಕಾರ್ಯ ನಿರ್ವಹಿಸಿದ್ದನ್ನು ಬಲ್ಲವರು ಈಗಲೂ ನೆನೆಯುತ್ತಾರೆ.

ಚಲನಚಿತ್ರಕ್ಕಿಂತ ಕಂಪನಿ ನಾಟಕಗಳು ಜನರನ್ನು ಆಕರ್ಷಿಸಿದ್ದ ಕಾಲ ಅದು. ಚಿತ್ರದುರ್ಗದಲ್ಲಿ ಆಗಾಗ ಗುಬ್ಬಿ ಕಂಪನಿ, ಸುಬ್ಬಯ್ಯನಾಯ್ಡು ಕಂಪನಿ ಮುಂತಾದ ಅನೇಕ ನಾಟಕ ಕಂಪನಿಗಳು ಬಂದು ಬೀಡು ಬಿಟ್ಟು ತಿಂಗಳಾನುಗಟ್ಟಲೆ ಪ್ರದರ್ಶನ ನೀಡುತ್ತ ಜನರನ್ನು ರಂಜಿಸುತ್ತಿದ್ದವು. ಸಾಮಾಜಿಕ ಚಾರಿತ್ರಿಕ ನಾಟಕಗಳಿಗಿಂತ ಪೌರಾಣಿಕ ನಾಟಕಗಳು ಹೆಚ್ಚು ಓಡುತ್ತಿದ್ದ ಕಾಲ ಅದಾಗಿತ್ತು.

ಚಿತ್ರದುರ್ಗದ ದೊಡ್ಡ ಗರಡಿ ಪೈಲ್ವಾನರಾದ ಪರಿಷೈಗರ್, ನಂಜಪ್ಪ, ರಾಮಪ್ಪ, ಇವರಿಗೆಲ್ಲಾ ಹೇಗೆ ಪ್ರಸಿದ್ಧವೋ ಹಾಗೆ ಅದರ 'ನವಭಾರತ ತರುಣ ಕಲಾವಿದರ ಸಂಘ' ಕ್ಕೂ ಪ್ರಸಿದ್ಧವಾಗಿತ್ತು. ಈ ಸಂಘ ೧೯೪೪ರಲ್ಲಿ ಸ್ಥಾಪನೆಯಾದರೂ ಇದರ ಉದ್ಘಾಟನೆಯಾದದ್ದು ೧೯೪೫ರಲ್ಲಿ ಎಂದೂ ಆ ವರ್ಷದ ವಿಜಯ ದಶಮಿಯ ದಿನ ಅದನ್ನು ಉದ್ಘಾಟನೆ ಮಾಡಿದವರು ಆಕಾಲಕ್ಕೆ ಇತಿಹಾಸ ಸಂಶೋಧಕರೆಂದೂ ಚಿತ್ರದುರ್ಗದ ಸಾಂಸ್ಕೃತಿಕ ಲೋಕದ ಗಣ್ಯರೆಂದೂ ಹೆಸರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರು ಎಂದು ಹೇಳುತ್ತಾರೆ. ದೊಡ್ಡ ಗರಡಿಯ ಯುವಕ ಪೈಲ್ವಾನರುಗಳೆಲ್ಲ ಅದರಲ್ಲಿದ್ದ ಕಲಾವಿದರು. ಜೊತೆಗೆ ಕೆಲವು ಅಭಿಮಾನಿಗಳೂ ಸೇರಿದರು. ಅವರು ಆಡಿದ ನಾಟಕಗಳಲ್ಲೆಲ್ಲ ಹೆಚ್ಚು ಹೆಸರು ಮಾಡಿದ ನಾಟಕ ಎಂದರೆ ' ರಾಜಾ ವೀರ ಮದಕರಿ ನಾಯಕ '. ಈ ನಾಟಕ ರಾಜ್ಯಾದ್ಯಂತ ಅಷ್ಟೇ ಅಲ್ಲ, ರಾಜ್ಯದ ಹೊರಗೂ ಸೇರಿದಂತೆ ನೂರಾರು ಬಾರಿ ಪ್ರಯೋಗಗೊಂಡು ಜಯಭೇರಿ ಬಾರಿಸಿತು. ಇದನ್ನು ಬರೆದವರು ಅಪ್ಪಟ ಗ್ರಾಮೀಣ ಮೂಲದ ಪ್ರತಿಭೆಯಾಗಿದ್ದ ಮರಡಿಹಳ್ಳಿ ಪಿ. ಸೀತಾರಾಮ ರೆಡ್ಡಿಯವರು. ಈ ನಾಟಕ ಬರೆಯಲು ಚಿತ್ರದುರ್ಗ, ಚಿತ್ರದುರ್ಗದ ಪಾಳೆಯಗಾರರನ್ನು ಕುರಿತು ಆಗ ಬಂದಿದ್ದ ಪುಸ್ತಕ ಲೇಖನಗಳಷ್ಟೆ ಅಲ್ಲದೆ ಆ ಪಾಳೆಯಗಾರರ ವಂಶಸ್ಥರಲ್ಲೂ ಮತ್ತು ಸಂಶೋಧಕರಾಗಿದ್ದ ಹುಲ್ಲೂರು ಶ್ರೀನಿವಾಸ ಜೋಯಿಸರಲ್ಲೂ ಸಮಾಲೋಚಿಸಿ ಅವರ ಸಲಹೆ ಸಹಕಾರ ಪ್ರೋತ್ಸಾಹ ಪಡೆದಿರಬೇಕೆಂದು ಹೇಳುತ್ತಾರೆ.

ಈ ಕಲಾ ಸಂಘದವರು ಕೆಲವು ಸಲ ಸ್ತ್ರೀ ಪಾತ್ರಕ್ಕೆ ಬೇರೆ ಊರುಗಳಿಂದ ನಟಿಯರನ್ನು ಕರೆಸಿಕೊಳ್ಳುತ್ತಿದ್ದದುಂಟು. ಹಾಗೆಯೇ ಇವರು ಕರೆಸಿಕೊಂಡವರಲ್ಲಿ ಆಗಿನ್ನೂ ಉದಯೋನ್ಮುಖ ಕಲಾವಿದೆಯಾಗಿದ್ದ ಬಿ. ಸರೋಜಾದೇವಿ ಅವರೂ ಒಬ್ಬರು. ಈ ಸಂಘದ ' ಚಿತ್ರಾಂಗದೆ ' ಎಂಬ ನಾಟಕದಲ್ಲಿ ಅಭಿನಯಿಸಲು ಬಂದಿದ್ದ ಈ ನಟಿ ಮತ್ತು ಅವರ ಹಿರಿಯ ಸಹೋದರಿ ಸುಮಾರು ಆರು ತಿಂಗಳುಗಳ ಕಾಲ ದುರ್ಗದಲ್ಲೇ ನೆಲೆಸಿದ್ದರು ಎಂದು ಹೇಳುತ್ತಾರೆ. ಆಗ ನಾಟಕಗಳಲ್ಲಿ ಇವರ ಅಭಿನಯ ನೋಡಿದ ಖ್ಯಾತ ಚಿತ್ರನಟ,

ಗಾಯಕ ಹೊನ್ನಪ್ಪ ಭಾಗವತರ್ ' ಮಹಾಕವಿ ಕಾಳಿದಾಸ ' ಚಿತ್ರದ ಮುಖ್ಯ ಪಾತ್ರಕ್ಕೆ ಇವರನ್ನು ಆಯ್ಕೆ ಮಾಡಿಕೊಂಡರು. (ಅಲ್ಲಿಂದ ಮುಂದೆ ಬಿ. ಸರೋಜಾದೇವಿ ಚಿತ್ರರಂಗದಲ್ಲಿ ತಮ್ಮ ಅಸಾಧಾರಣ ಕಲಾ ಚಾತುರ್ಯದಿಂದ ಬಹು ಭಾಷಾ ತಾರೆಯಾಗಿ ಪ್ರಖ್ಯಾತರಾದರು). ಮೇಲೆ ಹೇಳಿದ ' ರಾಜಾ ವೀರ ಮದಕರಿ ನಾಯಕ ' ನಾಟಕದ ನೂರನೇ ಪ್ರದರ್ಶನ ಚಿತ್ರದುರ್ಗದಲ್ಲಿ ಏರ್ಪಟ್ಟಾಗ ಹೊನ್ನಪ್ಪ ಭಾಗವತರ್ ಮತ್ತು ಬಿ. ಸರೋಜಾದೇವಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಆಗ ಅವರು ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಭೇಟಿ ಮಾಡಿ ಕೆಲ ಕಾಲ ಅವರ ಪ್ರೀತಿ ಸೌಹಾರ್ದಗಳನ್ನು ಸವಿದರು.

■ ■

## ಪತ್ರಕರ್ತ, ಸಮಾಜ ಸೇವಕ

ಇತಿಹಾಸ ಸಂಶೋಧನೆಯಲ್ಲಿ ಆಸಕ್ತರಾಗಿ ವಕೀಲಿ ವೃತ್ತಿಯತ್ತ ಹೆಚ್ಚು ಗಮನ ಕೊಡದಿದ್ದ ಕಾರಣಕ್ಕೆ ಜೋಯಿಸರನ್ನು ಅವರ ಕೆಲವರು ವಕೀಲ ಮಿತ್ರರು ಹಾಸ್ಯಮಾಡುತ್ತಿದ್ದರಂತೆ. ಅದಾವುದನ್ನೂ ಅವರು ಮನಸ್ಸಿಗೆ ಹಚ್ಚಿಕೊಳ್ಳದೆ ತಮ್ಮ ಪಾಡಿಗೆ ತಾವು ತಮ್ಮ ಕಾರ್ಯದಲ್ಲಿ ತಲ್ಲೀನರಾಗುತ್ತಿದ್ದರು. ಅವರು ಒಬ್ಬ ಒಳ್ಳೆಯ ಪತ್ರಿಕೋದ್ಯೋಗಿಯೂ ಆಗಿದ್ದರು. ಆಗ ಹೆಸರಾಗಿದ್ದ 'ತಾಯಿನಾಡು' ಮತ್ತು 'ವಿಶ್ವಕರ್ನಾಟಕ' ದಂಥ ಪತ್ರಿಕೆಗಳಿಗೆ ಅವರು ಸುಮಾರು ಮೂವತ್ತು ವರ್ಷ ವರದಿಗಾರರಾಗಿ ಕೆಲಸ ಮಾಡಿದ್ದರು. (ಅವರು ಜೈಲಲ್ಲಿದ್ದಾಗ ಮತ್ತು ಅವರ ಮರಣಾನಂತರ ಅವರ ಹಿರಿಯ ಮಗ ಎಚ್. ಎಸ್. ಪಾಂಡುರಂಗ ಜೋಯಿಸರು ಆ ಪತ್ರಿಕೆಗಳಿಗಾಗಿ ಕೆಲಸ ಮಾಡಿದರು). ಅವರು ಕಳಿಸುತ್ತಿದ್ದ ಸುದ್ದಿಗಳಲ್ಲಿ ಇತಿಹಾಸ ಸಂಶೋಧನೆಯಂಥ ವಿಷಯಕ್ಕೆ ಹೆಚ್ಚು ಪ್ರಾಶಸ್ತ್ಯವಿರುತ್ತಿತ್ತೆಂದು ಹೇಳುತ್ತಾರೆ.

ಲೇಖಕ ಮ. ಶ್ರೀಧರಮೂರ್ತಿ ಅವರು ಧೈರ್ಯ ಮಾಡಿ ಸಾಕಷ್ಟು ಹಣ ಹೂಡಿ 'ನವೋದಯ' ಎಂಬ ವಾರಪತ್ರಿಕೆಯೊಂದನ್ನು ದುರ್ಗದಲ್ಲಿ ಪ್ರಾರಂಭಿಸಿದಾಗ, ಅದರಲ್ಲಿ ಲೇಖನ ಬರೆಯುತಿದ್ದವರಲ್ಲಿ ಜೋಯಿಸರೂ ಒಬ್ಬರು. ತರಾಸು ಸಹ ಅದರಲ್ಲಿ ಬರೆಯುತ್ತಿದ್ದ ಇನ್ನೊಬ್ಬ ಲೇಖಕರು. ದುರ್ಗದಲ್ಲಿ ಪ್ರಕಟವಾದ ಪ್ರಥಮ ಪತ್ರಿಕೆ ಬಹುಶಃ ಅದೇ ಎಂದು ಹೇಳುತ್ತಾರೆ. ಕೆಲ ಕಾಲ ಚೆನ್ನಾಗಿ ನಡೆದ ಆ ಪತ್ರಿಕೆ ಕೆಲವು ಅನಿವಾರ್ಯ ಕಾರಣಗಳಿಂದ ನಿಂತು ಹೋಯಿತು. ಹೀಗೆ ಜೋಯಿಸರು ಆ ಪತ್ರಿಕೆಯ ಲೇಖಕ ಬಳಗದ ಸದಸ್ಯರಾಗಿ, ಚಿತ್ರದುರ್ಗದ 'ವೃತ್ತಾಂತ ರತ್ನಾಕರ' ಪತ್ರಿಕೆಯ ಉಪಸಂಪಾದಕರಾಗಿ, ಚಿತ್ರದುರ್ಗ ಜಿಲ್ಲಾ ಪತ್ರಿಕೋದ್ಯಮಿಗಳ ಸಂಘದ ಪ್ರಥಮ ಅಧ್ಯಕ್ಷರಾಗಿ, ಮೈಸೂರು ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಂಘದ ಸ್ಥಾಯೀ ಸಮಿತಿಯ ಸದಸ್ಯರಾಗಿ ಸಹ ಕಾರ್ಯ ನಿರ್ವಹಿಸಿದ್ದರು.

ಸಾರ್ವಜನಿಕ ಸೇವಾಕ್ಷೇತ್ರದಲ್ಲಿ ಸಹ ಜೋಯಿಸರ ಪಾತ್ರ ಮಹತ್ತ್ವದ್ದು. ಅವರು ಕೊನೆಯವರೆಗೂ ಅಪ್ಪಟ ಕಾಂಗ್ರೆಸ್ ಸದಸ್ಯರಾಗಿದ್ದರಲ್ಲದೆ, ಒಮ್ಮೆ ಆ ಪಕ್ಷದ ಜಿಲ್ಲಾ

ಚುನಾವಣಾ ಅಧಿಕಾರಿಯಾಗಿ ಸಹ ಕೆಲಸ ನಿರ್ವಹಿಸಿದ್ದರು. ಆಗ ಅವರು ರಾಜಕೀಯ ಕ್ಷೇತ್ರದಲ್ಲಿ ಆಗಲೇ ಸಾಕಷ್ಟು ಪ್ರಮುಖರಾಗಿದ್ದವರೊಬ್ಬರು ಚುನಾವಣೆಗೆ ಅಭ್ಯರ್ಥಿಯಾಗಲು ಅರ್ಜಿ ಸಲ್ಲಿಸಿದಾಗ, ಅವರು ಖಾದಿ ಧರಿಸಿರಲಿಲ್ಲವೆಂಬ ಒಂದೇ ಕಾರಣಕ್ಕೆ ಅವರ ಬೇಡಿಕೆಯನ್ನು ಅನರ್ಹಗೊಳಿಸುವ ಮಟ್ಟದವರೆಗೂ ನಿಷ್ಠುರ ತತ್ತ್ವ ಪಾಲನೆಯನ್ನೂ ಧೈರ್ಯವನ್ನೂ ತೋರಿದ್ದರು.

ಅವರು ಚಿತ್ರದುರ್ಗ ಪುರಸಭೆಯ ಉಪಾಧ್ಯಕ್ಷರಾಗಿ, ಮೈಸೂರು ಪ್ರಜಾ ಪ್ರತಿನಿಧಿಸಭೆಯ ಚುನಾಯಿತ ಸದಸ್ಯರಾಗಿ ಕೆಲವು ವರ್ಷ ಕರ್ತವ್ಯ ನಿರ್ವಹಿಸಿದ್ದರು. ಜಯಚಾಮರಾಜೇಂದ್ರ ಒಡೆಯರ್ ರಚಿಸಿದ ಪ್ರಾದೇಶಿಕ ಐತಿಹಾಸಿಕ ಸಂಶೋಧನ ಮಂಡಳಿ ಮತ್ತು ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ಸರ್ಕಾರದ ವತಿಯಿಂದ ಸ್ಥಾಪಿಸಿದ ಮೈಸೂರು ಸಂಸ್ಥಾನದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಇವುಗಳಲ್ಲಿ ಸದಸ್ಯರಾಗಿ ನೇಮಕವಾಗಿದ್ದರು. ಭಾಷಾವಾರು ಪ್ರಾಂತ್ಯರಚನೆ ಅಥವಾ ರಾಜ್ಯ ಪುನರ್ವಿಂಗಡಣಾ ಸಮಿತಿಗೆ, ಕನ್ನಡ ಭಾಷೆಯನ್ನಾಡುವ ಪ್ರದೇಶಗಳ ಮಾಹಿತಿ ನೀಡುವಲ್ಲಿ ಸಹ ಅವರು ತುಂಬು ಸಹಕಾರ ನೀಡಿದ್ದರು. ಹಿಂದೊಮ್ಮೆ ಹೇಳಿದಂತೆ ಚಿತ್ರದುರ್ಗ ಜಿಲ್ಲೆ ಬರದ ದವಡೆಗೆ ಸಿಲುಕಿದ್ದಾಗ ತಾಲ್ಲೂಕು ಕ್ಷಾಮನಿವಾರಣಾ ಸಮಿತಿಯ ಅಧ್ಯಕ್ಷರಾಗಿ ಹಳ್ಳಿಹಳ್ಳಿಗಳಲ್ಲಿ ಬಡಬಗ್ಗರಿಗೆ ಗಂಜಿ ಶಿಬಿರಗಳನ್ನು ತೆರೆಯುವಲ್ಲಿ ಅವರು ಸಲ್ಲಿಸಿದ ಸೇವೆ ಶ್ಲಾಘನೀಯ. ಕೂಡಲಿ ಶೃಂಗೇರಿ ಮಠಾಧೀಶರು ಪ್ರಾಚೀನ ದಾಖಲೆಗಳನ್ನು ಸಂಪಾದಿಸಿ ಪ್ರಕಟಿಸಲು ಮಾಡಿದ್ದ ಒಂದು ಸಮಿತಿಯ ಸದಸ್ಯರಲ್ಲಿ ಜೋಯಿಸರೂ ಒಬ್ಬರಾಗಿದ್ದರು. ಆದರೆ ಕಾರಣಾಂತರದಿಂದ ಆ ಸಮಿತಿಗೆ ಅಗ ಅಷ್ಟಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗಲಿಲ್ಲ.

'' ಊರಿನಲ್ಲಿ ಯಾರಿಗಾದರೂ ಯಾವ ವಿಧದಲ್ಲಿಯಾದರೂ ಸ್ವಲ್ಪ ಅನ್ಯಾಯವಾಗಿದೆಯೆಂದು ತಿಳಿದರೆ ಸಾಕು ಜೋಯಿಸರು ತಮ್ಮ ಸ್ವಂತ ಕೆಲಸಕ್ಕಿಂತ ಹೆಚ್ಚು ಆಸಕ್ತಿಯಿಂದ ಅದರ ನಿವಾರಣೆಗೆ ಪ್ರಯತ್ನಿಸುತ್ತಿದ್ದರು. ಇದರಿಂದ ಅವರ ಬಗ್ಗೆ ಜನಗಳಿಗೆ ಒಂದು ವಿಧವಾದ ಪೂಜ್ಯ ಭಾವನೆ, ಗೌರವ ಬಂದುಹೋಗಿತ್ತು. ಅನ್ಯಾಯವನ್ನು ಸರಿಪಡಿಸುವವರೆಗೂ ಅವರು ಅದೇ ಯೋಚನೆಯಲ್ಲಿರುತ್ತಿದ್ದರು. ವಿಷಯ ಎಷ್ಟೇ ಚಿಕ್ಕದಾದರೂ ಅದನ್ನು ಉನ್ನತ ಅಧಿಕಾರಿಗಳ ಗಮನಕ್ಕೂ ಎಡೆಬಿಡದೆ ತಂದು ದೊಡ್ಡ ಸಮಸ್ಯೆಯನ್ನಾಗಿ ಮಾಡಿಬಿಡುತ್ತಿದ್ದರು. ೧೯೪೮-೫೦ರಲ್ಲಿ ಸರ್ಕಾರದ ಕೆಲವು ಶೀಘ್ರಲಿಪಿಗಾರರಿಗೆ ಅಕಾರಣವಾಗಿ ಆಗಿದ್ದ ಅನ್ಯಾಯವನ್ನು ಸರಿಪಡಿಸಲು ಅಂದಿನ ಮಂತ್ರಿಗಳಿಗೆ ಸುಮಾರು ಒಂದು ನೂರು ಕಾಗದಗಳನ್ನು ಬರೆದು, ಅಸೆಂಬ್ಲಿಯಲ್ಲಿ ವಿಷಯವನ್ನು ಪ್ರಸ್ತಾಪಿಸಿ, ಪತ್ರಿಕೆಗಳಲ್ಲೆಲ್ಲಾ ಬರೆದು ಕೊನೆಗೂ ಜಯಶೀಲರಾದರು. ''
ಹೀಗೆ ' ಕತೆಗಾರ ' ಪತ್ರಿಕೆ ಜೋಯಿಸರ ಜನಪರ ಕಾಳಜಿಯನ್ನು ದಾಖಲಿಸಿದೆ.

ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಉತ್ಸಾಹದಿಂದ ಕೆಲಸ ಮಾಡಿದ ಜೋಯಿಸರಿಗೆ ಸಂತಸವಲ್ಲದೆ ಸಂಕಟದ ಸಂದರ್ಭಗಳೂ ಬಂದುದುಂಟು. ಅವರು ಪುರಸಭೆಯ ಉಪಾಧ್ಯಕ್ಷರಾಗಿದ್ದಾಗ ಅವರ ಮೇಲೆ ಯಾವುದೋ ತಪ್ಪು ತಿಳಿವಳಿಕೆಯಿಂದ ದ್ವೇಷದ ಭಾವನೆ ತಾಳಿದ ಜಿಲ್ಲಾಧಿಕಾರಿಯೊಬ್ಬರು, ಜೋಯಿಸರ ಮೇಲೆ ಮತ್ತು ಪುರಸಭೆಯ ಇನ್ನೊಬ್ಬ ನೌಕರರ ಮೇಲೆ ಆರೋಪವೊಂದನ್ನು ಸೃಷ್ಟಿಸಿ, ವಿಚಾರಣಾ ಸಮಿತಿವೊಂದನ್ನು ರಚಿಸಿ, ಆ ಬಗ್ಗೆ ವಿಚಾರಣೆಯಾಗಬೇಕೆಂದು ಆಜ್ಞೆ ಹೊರಡಿಸಿದಾಗ, ಅವರು ಆ ಸ್ಥಾನಕ್ಕೆ ತತ್‌ಕ್ಷಣದಲ್ಲೇ ರಾಜೀನಾಮೆ ಕೊಟ್ಟು ಹೊರಬಂದರು. ಸ್ವಲ್ಪ ಕಾಲದಲ್ಲೇ ಜಿಲ್ಲಾಧಿಕಾರಿ ಆ ಕ್ರಮ ಕೈಕೊಂಡದ್ದು ಸೇಡಿನ ಭಾವನೆಯಿಂದ ಎಂಬ ಸತ್ಯ ಎಲ್ಲರಿಗೂ ತಿಳಿಯಿತು. ಜೋಯಿಸರ ಋಜುತ್ವ ತಂತಾನೆ ಸ್ಥಿರಪಟ್ಟಿತು.

■■

# ವಸ್ತುಸಂಗ್ರಹಾಲಯ ಸ್ಥಾಪನೆ

ಶ್ರೀನಿವಾಸ ಜೋಯಿಸರು ಮಾಡಿದ ಮತ್ತೊಂದು ಮಹತ್ಕಾರ್ಯವೆಂದರೆ ಚಿತ್ರದುರ್ಗದಲ್ಲಿ ಒಂದು ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ್ದು. ಚಿತ್ರದುರ್ಗ ಮತ್ತು ಚಂದ್ರವಳ್ಳಿಯ ಪರಿಸರದಲ್ಲಿ ಮತ್ತು ಜಿಲ್ಲೆಯ ಹಲವು ಗ್ರಾಮಗಳಲ್ಲಿ ಅವರು ಸಂಶೋಧನ ನಿರತರಾಗಿದ್ದಾಗ ಕಂಡ ಅನೇಕ ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿದ್ದರು. ಅವನ್ನು ಸಾರ್ವಜನಿಕರೆಲ್ಲರೂ ನೋಡಿ ಸಂತೋಷ ಪಡಲು ಅನುಕೂಲವಾಗುವಂತೆ ಮತ್ತು ಕುತೂಹಲಿಗಳೆಲ್ಲರೂ ಜಿಲ್ಲೆಯ ಪ್ರಾಚೀನ ಇತಿಹಾಸ ಸಂಸ್ಕೃತಿಗಳನ್ನು ಸುಲಭವಾಗಿ ಅರಿಯಲು ಸಾಧ್ಯವಾಗುವಂತೆ ಮಾಡುವ ಸೂಕ್ತ ವ್ಯವಸ್ಥೆ ಎಂದರೆ ವಸ್ತು ಸಂಗ್ರಹಾಲಯ ವೊಂದರ ಮೂಲಕ ಅವುಗಳ ಪ್ರದರ್ಶನಕ್ಕೆ ಅನುಕೂಲ ಕಲ್ಪಿಸುವುದು. ಅದೊಂದು ತೀವ್ರ ಅಗತ್ಯವೆಂದು ಅವರಿಗೆ ಅನ್ನಿಸಿತು. ಅದಕ್ಕಾಗಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆ ಬಗ್ಗೆ ಅವರು ಅನೇಕ ಜಿಲ್ಲಾ ಮುಖಂಡರುಗಳಲ್ಲಿ ಈ ವಿಚಾರವಾಗಿ ಮಾತನಾಡಿ, ಆಗಿನ ಮೈಸೂರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಆಗ ರಾಜ್ಯದ ವಿದ್ಯಾ ಮಂತ್ರಿಯಾಗಿದ್ದ ದಾವಣಗೆರೆಯ ಡಿ.ಎಚ್. ಚಂದ್ರ ಶೇಖರಯ್ಯನವರು ಸಹ ವಸ್ತುಸಂಗ್ರಹಾಲಯದ ಸ್ಥಾಪನೆಗೆ ಸಕ್ರಿಯ ಪ್ರೋತ್ಸಾಹವನ್ನು ನೀಡಿದರು. ಕಡೆಗೆ ೧೯೫೧ರಲ್ಲಿ ಅಂದಿನ ಮೈಸೂರು ಸರ್ಕಾರ ಚಿತ್ರದುರ್ಗದ ಕೋಟೆಯ ರಂಗಯ್ಯನ ಬಾಗಿಲಲ್ಲಿ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲು ಕ್ರಮ ಕೈಕೊಂಡಿತು. ೧೯೫೨ರಲ್ಲಿ ಈ ವಸ್ತು ಸಂಗ್ರಹಾಲಯದ ಸ್ಥಾಪನೆಯ ಬಗ್ಗೆ ಸರ್ಕಾರದ ಅಧಿಕೃತ ಆಜ್ಞೆ ಹೊರಡಿಸಲ್ಪಟ್ಟು, ಅದೇ ವರ್ಷ ಆಗಿನ ರಾಜಪ್ರಮುಖ (ರಾಜ್ಯಪಾಲ)ರಾಗಿದ್ದ ಜಯ ಚಾಮರಾಜ ಒಡೆಯರ್ ಅವರು ವಿಧ್ಯುಕ್ತವಾಗಿ ಈ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ಉದ್ಘಾಟಿಸಿದರು. ರಾಜ್ಯದಲ್ಲೆ ಇದು ಮೊದಲ ಪ್ರಾಚ್ಯ ವಸ್ತುಸಂಗ್ರಹಾಲಯ ಎಂಬ ಪ್ರಾಶಸ್ತ್ಯಕ್ಕೆ ಪಾತ್ರವಾಯಿತು. ಸರ್ಕಾರ ಅದಕ್ಕೆ ಗೌರವ ಕ್ಯುರೇಟರನ್ನಾಗಿ ಜೋಯಿಸರನ್ನೇ ನೇಮಿಸಿತು. ಅಲ್ಲಿಂದ ೧೯೫೮ರ ವರೆಗೆ (ಅವರು ಮರಣಿಸುವವರೆಗೂ) ಆರು ವರ್ಷಗಳ ಕಾಲ ಅದರ ಗೌರವ ಕ್ಯುರೇಟರ್ ಆಗಿ ಸೇವೆಸಲ್ಲಿಸಿದರು.

ಈ ವಸ್ತುಸಂಗ್ರಹಾಲಯದಲ್ಲಿ ಶಿಲಾಯುಗ ಮತ್ತು ಶಾತವಾಹನ ಕಾಲದಿಂದ ಹಿಡಿದು ಚಿತ್ರದುರ್ಗದ ಪಾಳೆಯಗಾರರ ಕಾಲದ ವರೆಗಿನ ಅನೇಕ ಪ್ರಾಚ್ಯವಸ್ತುಗಳ ಸಂಗ್ರಹವಿದೆ. ಅನೇಕ ಶಿಲಾಯುಧಗಳು, ವಿಗ್ರಹಗಳು, ಶಿಲಾ ಹಾಗೂ ತಾಮ್ರಶಾಸನಗಳು, ನಾಣ್ಯಗಳು, ಮಣಿಗಳು, ತಾಳೇಗರಿ ಹಾಗೂ ಕಾಗದದ ಹಸ್ತಪ್ರತಿಗಳು, ಶಿಲ್ಪಪಟ್ಟಿಕೆಗಳು, ಚಿತ್ರಗಳು, ಕತ್ತಿ ಕವಚ ಭರ್ಜಿ ಗುರಾಣಿ ಶಿರಸ್ತ್ರಾಣಗಳು, ಫಿರಂಗಿಗುಂಡುಗಳು, ಹೀಗೆ ಹಲವು ಬಗೆಯ ಪ್ರಾಚ್ಯವಸ್ತುಗಳ ಸಂಗ್ರಹವಿದ್ದು, ಅದನ್ನು ಈಗಲೂ ದೇಶ - ವಿದೇಶದ ಅನೇಕ ಸಂದರ್ಶಕರು ಬಂದು ವೀಕ್ಷಿಸುತ್ತಿದ್ದಾರೆ.

ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಿದ ಮೇಲೆ ಅದು ಇದ್ದ ಸ್ಥಳ ಪ್ರಾಚ್ಯವಸ್ತುಗಳನ್ನು ಪ್ರದರ್ಶನಕ್ಕಿರಿಸಲು ಪ್ರತಿಕೂಲ ಸ್ಥಿತಿಯಲ್ಲಿದ್ದುದನ್ನು ಮನಗಂಡ ಜೋಯಿಸರು ಅರ್ಧ ಶತಮಾನದ ಹಿಂದೆಯೇ (೧೯೫೫ರಲ್ಲಿ) ಅದಕ್ಕೊಂದು ಪ್ರತ್ಯೇಕ ಸೂಕ್ತ ಕಟ್ಟಡ ಬೇಕು ಎಂದು ಬರೆದಿರುವುದು ಪ್ರಾಚ್ಯವಸ್ತುಗಳ ರಕ್ಷಣೆಯ ಬಗೆಗೆ ಅವರ ಕಳಕಳಿಯನ್ನು ಎತ್ತಿತೋರಿಸುತ್ತದೆ: " ರಂಗಯ್ಯನ ಬಾಗಿಲು ವಾಹನಗಳ ಮತ್ತು ಇತರ ಪ್ರಯಾಣಕ್ಕೆ ಬಹಳ ಮುಖ್ಯವಾಗಿರುವುದರಿಂದ ವಸ್ತು ಸಂಗ್ರಹಣಾಲಯದಲ್ಲಿರುವ ವಸ್ತುಗಳು, ಚಿತ್ರಗಳು ಮತ್ತು ಇತರ ಪ್ರದರ್ಶನ ವಸ್ತುಗಳು ಧೂಳಿನಿಂದ ಕೆಟ್ಟು ಹೋಗುತ್ತಿವೆ. ಮಿಗಿಲಾಗಿ ಮಳೆ ನೀರು ಈ ಹಳೆಯ ದ್ವಾರದ ಛಾವಣಿಯಿಂದ ಜಿನುಗಿ ಅದರ ಗೋಡೆಗಳೆಲ್ಲಾ ತೇವವಾಗುತ್ತಿವೆ. ಈ ಪ್ರಮುಖ ಸಾಂಸ್ಕೃತಿಕ ಮತ್ತು ವಿದ್ಯಾ ಸಂಸ್ಥೆಗೆ ಒಂದು ಸೂಕ್ತ ಕಟ್ಟಡವನ್ನು ಒದಗಿಸಬೇಕಾದುದು ಅತ್ಯವಶ್ಯಕವಾಗಿದೆ. ಈ ಕಟ್ಟಡ ಕಾಲ ಕಾಲಕ್ಕೆ ದುರಸ್ತಿಗೊಳ್ಳುತ್ತ ಬಂದಿದ್ದರೂ, ಜೋಯಿಸರು ಬರೆದಿರುವಂತೆ ಇದಕ್ಕೆ ಶಾಶ್ವತ ಪರಿಹಾರ ಇನ್ನೂ ದೊರೆತಿರುವುದಿಲ್ಲ.

ಜೋಯಿಸರ ನಿಧನಾನಂತರ ಅದನ್ನು ನೋಡಿಕೊಳ್ಳಲು, ಅವರ ಹಿರಿಯ ಮಗ ಪಾಂಡುರಂಗ ಜೋಯಿಸರು ಗೌರವ ಕ್ಯುರೇಟರ್ ಆಗಿ ಅನೇಕ ವರ್ಷ ಸೇವೆ ಸಲ್ಲಿಸಿದರು. ಅವರು ತಮ್ಮ ಅವಧಿಯಲ್ಲಿ ಚಿತ್ರದುರ್ಗದ ಪ್ರೇಕ್ಷಣೀಯ ಸ್ಥಳಗಳ ನಕ್ಷೆ ಮತ್ತು ಚಿತ್ರದುರ್ಗದ ಏಳು ಸುತ್ತಿನ ಕೋಟೆಯ ಕಾಲ್ಪನಿಕ ಚಿತ್ರ ಇವನ್ನು ರಚಿಸಿ ಪ್ರಕಟಿಸಿರುತ್ತಾರೆ. ಇವುಗಳ ಜೊತೆಗೆ ಚಿತ್ರದುರ್ಗವನ್ನು ಪರಿಚಯಿಸುವ ' ಚಿತ್ರ ವಿಚಿತ್ರ ಚಿತ್ರದುರ್ಗ ' ಮುಂತಾದ ಕೆಲವು ಕಿರು ಹೊತ್ತಿಗೆಗಳನ್ನೂ, ಕೆಲವು ಲೇಖನಗಳನ್ನು ಬರೆದಿರುತ್ತಾರೆ. ತಂದೆಯ ಮೇಲಿನ ಗೌರವದಿಂದ ಪ್ರಾಚ್ಯವಸ್ತು ಸಂಗ್ರಹಾಲಯವನ್ನು ನೋಡಿಕೊಳ್ಳುತ್ತಾ ಕಡೆಯಲ್ಲಿ ಅತ್ಯಲ್ಪ ಗೌರವಸಂಭಾವನೆಯಲ್ಲಿಯೇ ತುಂಬಾ ಕಷ್ಟ ಸ್ಥಿತಿಯಲ್ಲಿದ್ದರೂ ತಂದೆಯಂತೆಯೇ ಸ್ವಾಭಿಮಾನಿಯಾಗಿ ಬಾಳಿದ ಪಾಂಡುರಂಗ ಜೋಯಿಸರ ಸೇವೆಯನ್ನು ಗುರುತಿಸಿದ ಕರ್ನಾಟಕ ಸರ್ಕಾರ ೫೦,೦೦೦ ರೂಪಾಯಿಗಳ ಮೊತ್ತವನ್ನು ಗೌರವ

ಸಂಭಾವನೆಯಾಗಿ ೧೯೬೭ ಫೆಬ್ರವರಿ ೨೮ರಂದು ನೀಡಿತೆಂಬುದನ್ನು ಇಲ್ಲಿ ಸ್ಮರಿಸಬಹುದು.

ಅವರ ತರುವಾಯದ ಕಾಲದಲ್ಲಿ ಕ್ಯುರೇಟರ್ ಆಗಿ ಬಂದವರಲ್ಲಿ ಒಬ್ಬರಾದ ಶಂಕರ ಎಸ್. ಅಥಣಿ ಅವರು ಹುಲ್ಲೂರು ಶ್ರೀನಿವಾಸ ಜೋಯಿಸರ ಬಗೆಗೆ ಅಪಾರ ಗೌರವವನ್ನು ಮತ್ತು ಪಾಂಡುರಂಗ ಜೋಯಿಸರೊಂದಿಗೆ ಅತ್ಯಂತ ಸೌಹಾರ್ದದ ಸಂಬಂಧವನ್ನು ಹೊಂದಿದವರಾಗಿದ್ದು, ಅವರೊಂದಿಗೆ ' ಚಿತ್ರದುರ್ಗದ ಏಳು ಸುತ್ತಿನ ಕೋಟೆ ' 'ಚಿತ್ರದುರ್ಗದ ದೇವ ಮಂದಿರಗಳು ' ಮುಂತಾದ ಪುಸ್ತಕಗಳನ್ನು ರಚಿಸಿ ದುದಲ್ಲದೆ ಹಲವು ಲೇಖನಗಳನ್ನೂ ಬರೆದಿರುತ್ತಾರೆ. ಇದಲ್ಲದೆ ಬಹು ಸಂಖ್ಯೆಯ ವೀರಗಲ್ಲು ಮಾಸ್ತಿಕಲ್ಲು ಬಿಡಿವಿಗ್ರಹಗಳು ಶಿಲಾಶಾಸನಗಳು ಮುಂತಾದ ಹಲವು ಪ್ರಾಚ್ಯವಸ್ತುಗಳನ್ನು ಸಂಗ್ರಹಿಸಿ, ಪ್ರಾಚ್ಯವಸ್ತು ಸಂಗ್ರಹಾಲಯದ ಹೊರಾವರಣದಲ್ಲಿರಿಸಿ, ಅದನ್ನು ಮತ್ತಷ್ಟು ಶ್ರೀಮಂತಗೊಳಿಸಿ, ಜೋಯಿಸರ ಪ್ರಾಚ್ಯವಸ್ತು ಪ್ರೇಮ ಪರಂಪರೆಯನ್ನು ಅರ್ಥಪೂರ್ಣವಾಗಿ ಮುಂದುವರಿಸಿರುತ್ತಾರೆ. ಇದರ ಜೊತೆಗೆ ರಾಜ್ಯ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯ ಮೂಲಕ ರಂಗಯ್ಯನ ಬಾಗಿಲ ಮುಂದೆ ಎರಡು ಬದಿಯಲ್ಲೂ ' ಶಿಲ್ಪಶ್ರೀ ' ಎಂಬ ಹೆಸರಿನ ಕಿರು ಉದ್ಯಾನವನವನ್ನೂ ನಿರ್ಮಿಸಿ ಇಲ್ಲಿಯ ಪರಿಸರವನ್ನು ಸುಂದರಗೊಳಿಸಿದ್ದಾರೆ.

■ ■

## ಭಾಷಣ, ಇತಿಹಾಸ ಪ್ರಚಾರ

ಜೋಯಿಸರು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನಮ್ಮ ನಾಡಿನ ಇತಿಹಾಸ ಸಾಹಿತ್ಯ ಸಂಸ್ಕೃತಿ ಪರಂಪರೆ ಕುರಿತು ಉದ್ಬೋಧಕವಾದ ಉಪನ್ಯಾಸವನ್ನು ನೀಡುತ್ತಿದ್ದರು. ಲೇಖನಗಳಲ್ಲಿ ಹೇಗೋ ಭಾಷಣಗಳಲ್ಲೂ ಅವರು ಜನರಲ್ಲಿ ಇತಿಹಾಸಾಭಿಮಾನವನ್ನು ಮೂಡಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಂಥ ಸಂಸ್ಥೆಯಲ್ಲಿ ಅಷ್ಟೇ ಅಲ್ಲದೆ, ಹಳ್ಳಿಹಳ್ಳಿಗಳಲ್ಲಿ ಶಾಲೆಗಳಲ್ಲಿ ಅವರು ಉಪನ್ಯಾಸಗಳನ್ನು ನೀಡುತ್ತಿದ್ದರು. ತಾವಷ್ಟೆ ಅಲ್ಲದೆ, ಇತರ ಸಾಹಿತಿಗಳು ಸಂಶೋಧಕರಿಂದಲೂ ಉಪನ್ಯಾಸಗಳನ್ನು ಮಾಡಿಸುತ್ತಿದ್ದರು. ಗಳಗನಾಥರ ಭಾಷಣವೊಂದನ್ನು ಇಲ್ಲಿಯ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದಾಗ ಅವರು " ಚಿತ್ರದುರ್ಗ ಹಂಪೆಗಿಂತ ಕಮ್ಮಿ ಏನಿಲ್ಲ " ಎಂದು ಮುಂತಾಗಿ ಹೇಳಿದ್ದು ಜೋಯಿಸರನ್ನು ಆನಂದ ತುಂದಿಲರನ್ನಾಗಿ ಮಾಡಿತ್ತು. ಹೀಗೇ ಡಾ. ಎಂ.ಎಚ್. ಕೃಷ್ಣ ಅವರು ಹಳೆಯ ಮಾಧ್ಯಮಿಕ ಶಾಲೆಯಲ್ಲಿ ಅಂಥದೇ ಒಂದು ಸ್ಫೂರ್ತಿಯುತವಾದ ಭಾಷಣವನ್ನು ಮಾಡಿದ್ದರು.

ಇದಲ್ಲದೆ ಜೋಯಿಸರು ಒಳ್ಳೆಯ ಹವ್ಯಾಸಿ ಛಾಯಾಚಿತ್ರಗ್ರಾಹಕರೂ ಆಗಿದ್ದರು. ಅವರು ತಮ್ಮಲ್ಲಿ ಒಂದು ಕ್ಯಾಮರಾವನ್ನು ಇಟ್ಟುಕೊಂಡಿದ್ದು, ತಮ್ಮ ಮನೆಗೆ, ವಸ್ತು ಸಂಗ್ರಹಾಲಯಕ್ಕೆ ಬರುವ ಕೆಲವರ ಛಾಯಾಚಿತ್ರಗಳನ್ನು ತೆಗೆದುಕೊಳ್ಳುತ್ತಿದ್ದರು. ಇದಕ್ಕೆ ಆಗಿನ ಕಾಲಕ್ಕೆ ತಿಂಗಳಿಗೆ ೧೫ ರಿಂದ ೨೦ ರೂಪಾಯಿ ಖರ್ಚಾಗುತ್ತಿದ್ದಿತಂತೆ. ಅವರು ಹೀಗೆ ಆರೇಳು ವರ್ಷಗಳ ಕಾಲ ಛಾಯಾಚಿತ್ರಗಳನ್ನು ತೆಗೆದುದಾಗಿ ತಿಳಿದುಬರುತ್ತದೆ. ಇದಲ್ಲದೆ ಅವರು ಚಿತ್ರದುರ್ಗ ಮತ್ತಿತರ ಪ್ರಾಚ್ಯ ಸ್ಥಳಗಳ ಛಾಯಾಚಿತ್ರಗಳನ್ನು ತೆಗೆದು, ಅವುಗಳನ್ನು ಕ್ರಮವಾಗಿ ರಟ್ಟಿನ ಮೇಲೆ ಅಂಟಿಸಿ, ಅವುಗಳನ್ನು ಪ್ರದರ್ಶಿಸಿ ಸ್ವಯಂ ತಾವೇ ನಿಂತು ಅವುಗಳ ವಿವರಣೆಯನ್ನು ನೀಡುತ್ತಿದ್ದರು. ಅವರು ತೆಗೆದ ಹಲವು ಛಾಯಾಚಿತ್ರಗಳು ಈಗಲೂ ಇವೆ. ಸಂಜೀವ ಮೂರ್ತಿ ಎಂಬ ಛಾಯಾಚಿತ್ರಗ್ರಾಹಕರೊಬ್ಬರು ಜೋಯಿಸರಿಗೆ ತುಂಬಾ ಅಚ್ಚುಮೆಚ್ಚಿನವರಾಗಿದ್ದರು. ಅವರೂ ಸಹ ಜೋಯಿಸರು ಇರುವ ಅನೇಕ ಛಾಯಾಚಿತ್ರಗಳನ್ನು ತೆಗೆದಿದ್ದರು.

ಜೋಯಿಸರು ಇತಿಹಾಸ ವಿಷಯ ಕುರಿತು ಉಪನ್ಯಾಸ ನೀಡಲು ಹೋಗುತ್ತಿದ್ದಾಗ

ಜೊತೆಯಲ್ಲಿ ತಮ್ಮ ಯಾರಾದರೊಬ್ಬರು ಗಂಡು ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದರು. ಆಗ ಜನರಿಗೆ ತೋರಿಸಲು ಕೆಲವು ಛಾಯಾಚಿತ್ರಗಳು, ಇತರ ಚಿತ್ರಗಳು, ತಾಮ್ರಶಾಸನ, ತಾಳೆಗರಿ ಕಟ್ಟು, ಪ್ರಾಚೀನ ನಾಣ್ಯಗಳನ್ನು ತೆಗೆದುಕೊಂಡು ಹೋಗುತ್ತಿದ್ದರು.

■ ■

# ಸರಳತೆ, ಸಜ್ಜನಿಕೆ

'' ಕಾಂಗ್ರೆಸ್ಸಿಗೆ ಸೇರಿ, ಪೂಜ್ಯ ಗಾಂಧೀಜಿಯವರ ಅನುಯಾಯಿಯಾಗಿದ್ದುದರಿಂದ, ಜೋಯಿಸರು ಸತ್ಯ, ಧರ್ಮ, ನ್ಯಾಯದಲ್ಲಿ ನಡೆಯುವುದೇ ತಮ್ಮ ಜಾತಿ, ಮತವೆಂದೂ, ಸೇರಿದ್ದ ಸಂಸ್ಥೆಗೆ ಕಾಯೇನ ವಾಚಾ ಮನಸಾ ದುಡಿಯುವುದೇ ಶ್ರೇಷ್ಠ ಧರ್ಮವೆಂದೂ, ಜನಸೇವೆಯೇ ದೇವರ ಪೂಜೆಯೆಂದೂ, ಕೇವಲ ಭಾವಿಸಿದ್ದುದು ಮಾತ್ರವಲ್ಲದೆ, ಪ್ರತಿ ನಿಮಿಷವೂ ಅವುಗಳನ್ನು ತಪ್ಪದೆ ಪಾಲಿಸುತ್ತಿದ್ದರು. ಈ ತತ್ತ್ವಗಳ ಪರಿಪಾಲನೆಯಲ್ಲಿ ಎಷ್ಟು ಕಷ್ಟಗಳು ಬಂದರೂ ಅವರು ಹಿಂದೆಗೆಯುತ್ತಿರಲಿಲ್ಲ ''... '' ಸ್ವಾರ್ಥ, ಅಸೂಯೆ, ಅನ್ಯಾಯ ಮುಂತಾದ ಈಗಿನ ಕಾಲಕ್ಕೆ ಅಗತ್ಯವಾದ ಗುಣಗಳ ಸುಳಿವೇ ಇರಲಿಲ್ಲ. ತಮ್ಮ ಜೀವಮಾನದಲ್ಲೆಂದೂ ಅವರ ಬಾಯಿಂದ ಅನೃತವು ಬಂದಿರಲಿಲ್ಲವೆಂಬುದೂ ಮತ್ತು ಎಂಥಾ ಕಷ್ಟ ಪರಿಸ್ಥಿತಿಯಲ್ಲೂ ತಮ್ಮ ತತ್ತ್ವಗಳನ್ನು ಬದಿಗೊತ್ತಿರಲಿಲ್ಲವೆಂಬುದೂ ಎಲ್ಲರಿಗೂ ಚೆನ್ನಾಗಿ ತಿಳಿದ ವಿಷಯ. '' ಹೀಗೆ ' ಕತೆಗಾರ ' ಪತ್ರಿಕೆಯಲ್ಲಿ ಅವರ ನಿರ್ಮಲ ವ್ಯಕ್ತಿತ್ವದ ಬಗ್ಗೆ ಹೇಳಿರುವುದು ಅತಿಶಯೋಕ್ತಿಯೇನಲ್ಲ. ಎಸ್. ನಿಜಲಿಂಗಪ್ಪನವರು ಹೇಳುವಂತೆ '' ಅವರು ಆರ್ಥಿಕ ದೃಷ್ಟಿಯಿಂದ ಸುಖವಾಗಿದ್ದರು ಎಂದು ಹೇಳಲಿಕ್ಕೆ ಆಗದಿದ್ದರೂ, ತುಂಬಾ ಸಾತ್ತ್ವಿಕರಾಗಿದ್ದರು. ತಮ್ಮ ಪ್ರಯೋಜನಕ್ಕಾಗಿ ಸಹ ಸುಳ್ಳು ಹೇಳುತ್ತಿರಲಿಲ್ಲ ''. ಅವರ ಆಪ್ತ ಒಡನಾಡಿಗಳನ್ನು ಮಾತನಾಡಿಸಿದಾಗ, ಅವರ ನೆನಪಿನ ಸುರುಳಿಯಿಂದ ಬಿಚ್ಚಿಕೊಳ್ಳುವ ಜೋಯಿಸರ ಉನ್ನತ ವ್ಯಕ್ತಿತ್ವ ಇದು.

ಸಮಾಜದಲ್ಲಿ ಅತ್ಯಂತ ಗೌರವಾನ್ವಿತರೆಂದೂ ಸಜ್ಜನರೆಂದೂ, ವಿನಯವಂತರೆಂದೂ, ಕರುಣಾಳುಗಳೆಂದೂ ಜೋಯಿಸರು ಹೆಸರಾಗಿದ್ದರು. ಸಾಮಾನ್ಯವಾಗಿ ಕೆಟ್ಟದ್ದು ಎನ್ನುವ ಯಾವ ಚಟವೂ ಅವರಲ್ಲಿರಲಿಲ್ಲ. ಅವರು ವಕೀಲರಾಗಿದ್ದ ಪ್ರಾರಂಭದ ಕೆಲವು ವರ್ಷ ಅವರಿಗೆ ಟೆನ್ನಿಸ್ ಪ್ರಿಯವಾದ ಕ್ರೀಡೆಯಾಗಿತ್ತು. ವಕೀಲರು ಹೆಚ್ಚಿನ ಸಂಖ್ಯೆಯಲ್ಲಿದ್ದ ಟೆನ್ನಿಸ್ ಕ್ರೀಡಾಪಟುಗಳ ಒಂದು ತಂಡವೇ ಆಗ ಇತ್ತು. ಅವರೊಂದಿಗೆ ಜಿಲ್ಲಾಧಿಕಾರಿಗಳಂತಹ ಉನ್ನತಾಧಿಕಾರಿಗಳು ಆಟದಲ್ಲಿ ಪಾಲ್ಗೊಳ್ಳುತ್ತಿದ್ದುದುಂಟು. ಆ ವಕೀಲರ ತಂಡದಲ್ಲಿ ಅಂದಿನ ಪ್ರಸಿದ್ಧ ವಕೀಲರಾದ ಎಸ್. ನರಸಿಂಹಮೂರ್ತಿ, ಎಂ. ಬಿ.

ಕೃಷ್ಣರಾವ್, ಎಸ್. ನಿಜಲಿಂಗಪ್ಪ ಮುಂತಾದವರಿದ್ದರು.

ದಿನಕಳೆದಂತೆ ಅವರಿಗೆ ಇಸ್ಪೀಟ್ ಆಟದ ಖಯಾಲಿಯೊಂದು ಮಾತ್ರ ಇತ್ತು. ಅದು ಅವರಿಗೆ ಅವರ ತಂದೆಯ ಬಳುವಳಿಯಾಗಿ ಬಂದದ್ದು. ಪುರೋಹಿತರಾಗಿದ್ದ ತಂದೆಗೆ ಬಿಡುವಿನ ದಿನ ಸಿಕ್ಕರೆ ಕಾಲವೆಲ್ಲ ಇಸ್ಪೀಟಾಟದಲ್ಲೇ ಕಳೆದುಹೋಗುತ್ತಿತ್ತು ಎಂದು ಹೇಳುತ್ತಾರೆ. ಮಗನೂ ಕೆಲಕಾಲ ಹಾಗೇ ಇದ್ದರು. ಜಿ. ವರದರಾಜರಾವ್ ಅವರು ಹೇಳುವಂತೆ ಅವರು ದುರ್ಗದ ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜಿಗೆ ಕನ್ನಡ ಉಪನ್ಯಾಸಕರಾಗಿ ಬಂದ ಮೇಲೆ ಅವರೊಂದಿಗೆ ಜೋಯಿಸರಿಗೆ ಗಾಢ ಸಂಪರ್ಕ ಬೆಳೆದ ನಂತರ ಇಸ್ಪೀಟ್ ಆಟದ ಆ 'ಹುಚ್ಚು' ಬಿಟ್ಟು ಹೋಯಿತು ಎಂದು ಅವರು ಒಂದೆಡೆ ಹೇಳಿದ್ದಾರೆ.

ಜೋಯಿಸರು ಸಿನಿಮಾಕ್ಕೆ ತಾವು ಇಷ್ಟಪಟ್ಟು ಹೋಗುವುದಿರಲಿ, ಗೆಳೆಯರು ಒತ್ತಾಯಿಸಿದರೂ ಸಾಮಾನ್ಯವಾಗಿ ನೋಡುತ್ತಿರಲಿಲ್ಲ. ಆದರೆ ಕೆಲವೊಮ್ಮೆ ಗೆಳೆಯರು '' ಆ ಸಿನಿಮಾದಲ್ಲಿ ಒಂದು ಒಳ್ಳೆಯ ಕೋಟೆ ಬರುತ್ತದೆಯಂತೆ, ಚಾರಿತ್ರಿಕ ಕಾಲದ್ದು '' ಎಂದರಾಯಿತು, ಆಗ ಜೋಯಿಸರ ಆಸಕ್ತಿ ಕೆರಳುತ್ತಿತ್ತು. ಹೀಗೆ ಏನಾದರೂ ತಂತ್ರ ಹೂಡಿದಾಗ ಮಾತ್ರ ಗೆಳೆಯರು ಅವರನ್ನು ಸಿನಿಮಾಕ್ಕೆ ಕರೆದೊಯ್ಯುವಲ್ಲಿ ಯಶಸ್ವಿಯಾಗುತ್ತಿದ್ದರು. ಎಂದಾದರೊಮ್ಮೆ ಹೋಟೆಲಲ್ಲಿ ಕಾಫಿ ಕುಡಿಯಲೂ ಆತ್ಮೀಯರ ಒತ್ತಾಯವೇ ಕಾರಣವಾಗುತ್ತಿತ್ತು. ಅವರು ಎಷ್ಟು ಗಂಭೀರವಾಗಿರುತ್ತಿದ್ದರೋ ಅಷ್ಟೇ ಸರಸವಾಗಿಯೂ ಇರುತ್ತಿದ್ದರು.

ಉಡುಗೆ ತೊಡುಗೆಯ ವಿಚಾರದಲ್ಲೂ ಜೋಯಿಸರು ಸರಳತೆಯನ್ನು ಪಾಲಿಸಿದ್ದರು. ಅವರು ಸದಾ ಖಾದಿಧಾರಿಗಳಾಗಿರುತ್ತಿದ್ದರೆಂದು ಹಿಂದೆಯೇ ಹೇಳಿದೆ. ಬಿಳಿಯ ಖಾದಿಯ ಷರಟು, ಪಂಚೆ, ಮುಚ್ಚು ಕಾಲರ್‌ನ ಉದ್ದವಾದ ಕರಿಯ ಇಲ್ಲವೆ ಬಿಳಿಯ ಕೋಟು, ಬಿಳಿಯ ಖಾದಿ ಟೋಪಿ, ಕಾಲಲ್ಲಿ ಚಪ್ಪಲಿ, ಕೈಯಲ್ಲಿ ಬಾಗಿದ ಹಿಡಿಕೆಯ ವಾಕಿಂಗ್ ಸ್ಟಿಕ್ - ಇದು ಅವರ ಸಾಮಾನ್ಯ ಉಡುಗೆಯಾಗಿತ್ತು. ಅವರು ಹಾಗೇ ಮಿತಭಾಷಿ ಮತ್ತು ಮೃದುಭಾಷಿ ಕೂಡಾ. ಸಣ್ಣ ಮಕ್ಕಳ ಜತೆಗಂತೂ ತುಂಬ ವಿನೋದ, ವಾತ್ಸಲ್ಯ.

ಜೋಯಿಸರು ಜಾತ್ಯತೀತವಾದ ವಿಶಾಲ ನಿರ್ಮಲ ಮನಸ್ಕತೆಯನ್ನು ಹೊಂದಿದ್ದರು. ಅವರು ಬ್ರಾಹ್ಮಣರಾಗಿದ್ದರೂ ವೀರಶೈವ ಜಗದ್ಗುರುಗಳ ಬಗೆಗೆ ಹೇಳಿರುವ ಮಾತು ಇದಕ್ಕೆ ಸಾಕ್ಷಿಯಾಗಿದೆ. ಚಿತ್ರದುರ್ಗದ ಜಯದೇವ ಮುರುಘ ರಾಜೇಂದ್ರ ಮಹಾ ಸ್ವಾಮಿಗಳವರ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಜೋಯಿಸರು ಬರೆದಿರುವ ಮಾತುಗಳು ಹೀಗಿವೆ: '' ಶ್ರೀ ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳು ಬೃಹನ್ಮಠದ ಪೀಠಾಧಿಕಾರವನ್ನು ವಹಿಸಿಕೊಂಡ

ಮೇಲೆ ತಮ್ಮ ಶಿಷ್ಯರ ಏಳಿಗೆಗಾಗಿ ಹಗಲಿರುಳೂ ಏಕಪ್ರಕಾರವಾಗಿ ದುಡಿಯುತ್ತಿರುವರು. ಕನ್ನಡ ನಾಡಿನಾದ್ಯಂತ ಸಂಚಾರ ಮಾಡಿ, ಶಿಷ್ಯವರ್ಗದವರಲ್ಲಿ ಮೂಡಿದ್ದ ಅವಿದ್ಯೆಯನ್ನು ನಿರ್ಮೂಲಮಾಡುತ್ತಾ, ಜ್ಞಾನೋಪದೇಶ ಮಾಡುತ್ತಾ, ವಿದ್ಯಾರ್ಥಿ ನಿಲಯಗಳನ್ನು ಅನೇಕ ಕಡೆಗಳಲ್ಲಿ ಸ್ಥಾಪಿಸಿ ಕೀರ್ತಿಯನ್ನು ಪಡೆದಿರುವರು. ಪರಮತ ಸಹಿಷ್ಣುತೆಯು ಶ್ರೀಗಳವರ ಹುಟ್ಟುಗುಣವಾಗಿದೆ. ವಿದ್ಯಾದಾನಕ್ಕಾಗಿಯೂ ರೋಗನಿವಾರಣೆಗಾಗಿಯೂ ವಿಪುಲವಾಗಿ ಧನದಾನವನ್ನು ಮಾಡಿರುವರು.'' ಈ ಮಾತುಗಳ ಜೊತೆಗೆ ಜೋಯಿಸರು ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರು, ಸ್ವಾಮಿಗಳನ್ನು ಅರಮನೆಗೆ ಬರಮಾಡಿಕೊಂಡು ಭಕ್ತಿ ಗೌರವಗಳನ್ನು ತೋರಿದ್ದನ್ನು ಸಹ ನೆನೆದಿರುತ್ತಾರೆ.

ಜೋಯಿಸರ ಮತ್ತೊಂದು ಗುಣವನ್ನು ಮುಕ್ತಕಂಠದಿಂದ ಪ್ರಶಂಸಿಸದಿರುವವರೇ ಇಲ್ಲ. ಅದು ಅವರ ನಿಸ್ಪೃಹತೆ. ವಕೀಲಿ '' ವೃತ್ತಿಯಲ್ಲಿ ಹೇಳಿಕೊಳ್ಳುವಷ್ಟು ಸಂಪಾದನೆ ಇರದಿದ್ದರೂ ಅವರೆಂದೂ ಕೊರಗಿರಲಿಲ್ಲ ಮತ್ತು ಇತರ ವಿಧಗಳಲ್ಲಿ ಸಂಪಾದಿಕೊಳ್ಳುವ ಮನಸ್ಸೂ ಇರಲಿಲ್ಲ. '' ಏಕೆಂದರೆ ಅವರು ಯಾವತ್ತೂ ಹಣಕ್ಕೆ ಆಸೆಪಡುತ್ತಿರಲಿಲ್ಲ; ಆಸೆಪಟ್ಟವರೂ ಅಲ್ಲ; ಬಂಧುಗಳಿರಲಿ ಮಿತ್ರರಿರಲಿ ಯಾರನ್ನೂ ಏನನ್ನು ಕೇಳಿದವರೂ ಅಲ್ಲ; ಕೊನೆಗೆ ಸಾಲ ಕೇಳಿದವರಲ್ಲ. ಅವರ ತಮ್ಮ ಸುಬ್ಬಾಜೋಯಿಸರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ರಸಾಯನಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಜೋಯಿಸರಿಗಿಂತ ಉತ್ತಮ ಆರ್ಥಿಕಸ್ಥಿಯಲ್ಲಿದ್ದರು. ಜೋಯಿಸರು ತಮ್ಮ ಕಡುಕಷ್ಟಕಾಲದಲ್ಲಿ ಅವರ ಸಹಾಯ ಕೂಡಾ ಕೇಳಲಿಲ್ಲ ಎಂದು ಹೇಳುತ್ತಾರೆ. ಜೋಯಿಸರ ಅಕ್ಕ ಒಬ್ಬರಿಗೆ ದುರ್ಗದ ಜಾಮೀ ಮಸೀದಿ ಬಳಿ ಸಾಕಷ್ಟು ದೊಡ್ಡದಾದ ಒಂದು ಮನೆಯಿತ್ತು. ಅವರು ಅದನ್ನು ಜೋಯಿಸರಿಗೆ ವಿಲ್ ಮಾಡಿದ್ದರು. ಜೋಯಿಸರಿಗೆ ಆ ಮನೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ. ಆದರೆ ಇನ್ನೊಬ್ಬರ ವಸ್ತುವಿನ ಬಗ್ಗೆ ಎಂದೂ ಆಸೆಮಾಡದ ಸ್ವಭಾವ ಅವರದಾದ್ದರಿಂದ ಆಮನೆಯನ್ನು ಅವರು ತಮ್ಮ ವಶಕ್ಕೆ ತೆಗೆದುಕೊಳ್ಳಲೇ ಇಲ್ಲ. ಅದರೊಳಗೆ ವಾಸವಾಗಿದ್ದ ಅವರ ಬಂಧುಗಳಿಗೇ ಆ ಮನೆಯನ್ನು ಬಿಟ್ಟು ಬಿಟ್ಟರು.

ಜೋಯಿಸರು ತಮ್ಮ ಆಪ್ತಮಿತ್ರರೇ ( ಎಸ್. ನಿಜಲಿಂಗಪ್ಪನವರು) ಮೈಸೂರಿನ ಮುಖ್ಯಮಂತ್ರಿಯಾಗಿದ್ದರೂ ಸಹ ತಮ್ಮ ಆರ್ಥಿಕ ಸುಧಾರಣೆಗಾಗಿ ಅವರನ್ನು ಬಳಸಿಕೊಳ್ಳಲಿಲ್ಲ. ಜೋಯಿಸರ ಬಗ್ಗೆ ಗೌರವವಿಟ್ಟುಕೊಂಡಿದ್ದ ಅಂದಿನ ರಾಜಪ್ರಮುಖರಾದ ಜಯಚಾಮರಾಜ ಒಡೆಯರ್ ಅವರು '' ಜೋಯಿಸರೇ, ನಿಮಗೆ ನಮ್ಮಿಂದ ಏನು ಕೆಲಸವಾಗಬೇಕು? '' ಎಂದು ಕೇಳಿದಾಗ ಜೋಯಿಸರು '' ಮಹಾಸ್ವಾಮಿ, ಚಿತ್ರದುರ್ಗಕ್ಕೆ ಒಂದು ಪ್ರಾಚ್ಯವಸ್ತು ಸಂಗ್ರಹಾಲಯ ಬೇಕು. ಅಷ್ಟಾದರೆ ಸಾಕು '' ಎಂದರೇ

ಹೊರತು ತಮಗಾಗಿ ಏನನ್ನೂ ಕೋರಲಿಲ್ಲ. ಬಡತನದ ಬವಣೆಯಲ್ಲೂ ಸ್ವಾಭಿಮಾನದ ಬದುಕನ್ನು ಸಾಗಿಸಿದರು.

ಇಂತಹ ನಿಸ್ಪೃಹ ಸ್ವಭಾವದವರಾಗಿದ್ದ ಜೋಯಿಸರಿಗೆ ಎಷ್ಟೋ ವೇಳೆ ಅನ್ಯಾಯ ವಾಗಿರುವುದೂ ಉಂಟು. ಆದರೆ ಅವರು ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡು ಕೊರಗು ತ್ತಿರಲಿಲ್ಲ, ಯಾರನ್ನೂ ದೂರುತ್ತಲೂ ಇರಲಿಲ್ಲ. 'ತಾಯಿನಾಡು' ಪತ್ರಿಕೆಯ ವರದಿ ಗಾರರಾಗಿದ್ದ ಅವರಿಗೆ ಆಗಿನ ಪದ್ಧತಿಯಂತೆ ಪತ್ರಿಕೆಯವರು ಏಜೆಂಟರ ಮೂಲಕ ಸಂಭಾವನೆಯನ್ನು ಪಾವತಿಮಾಡುತ್ತಿದ್ದರು. ಏಜೆಂಟರೊಬ್ಬರು ಕಡೆ ಕಡೆಯಲ್ಲಿ ಜೋಯಿಸರಿಗೆ ಕೊಡಬೇಕಾಗಿದ್ದ ಎಷ್ಟೋ ಸಂಭಾವನೆಯನ್ನು, (ಪತ್ರಿಕೆಯವರು ಆ ಏಜೆಂಟರ ಕಡೆ ಕೊಟ್ಟಿದ್ದರೂ ಕೂಡಾ) ಅವರಿಗೆ ಪಾವತಿ ಮಾಡಲೇ ಇಲ್ಲ. ಆರ್ಥಿಕ ಸಂಕಷ್ಟದಲ್ಲಿದ್ದರೂ ಜೋಯಿಸರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ಪ್ರಕಾಶಕ ರೊಬ್ಬರು ಜೋಯಿಸರ ಒಂದು ಪುಸ್ತಕವನ್ನು ಅವರ ಅನುಮತಿಯನ್ನೇ ಕೇಳದೆ ಪ್ರಕಟ ಮಾಡಿದರು; ಸಂಭಾವನೆಯನ್ನು ಸಹ ನೀಡಲಿಲ್ಲ. ಅದಕ್ಕೂ ಜೋಯಿಸರು ಬೇಸರಪಟ್ಟುಕೊಳ್ಳಲಿಲ್ಲ. ಗೆಳೆಯರು ಈ ಬಗ್ಗೆ ಬೇಸರ ವ್ಯಕ್ತಪಡಿಸಿದಾಗ ಜೋಯಿಸರು '' ಹೋಗಲಿ ಬಿಡಿ. ಹೇಗೋ ಅಂತೂ ಚಿತ್ರದುರ್ಗದ ಚರಿತ್ರೆಯ ಒಂದು ಪುಸ್ತಕ ಬಂತಲ್ಲ!'' ಎಂದು ಸಮಾಧಾನ ಹೇಳುತ್ತಿದ್ದರು. ಇದಲ್ಲದೆ, ಜೋಯಿಸರಿಂದ ಕೆಲವರು ತಮ್ಮ ಸಂಶೋಧನೆಗೆ ಬರವಣಿಗೆಗೆ ಮಾಹಿತಿ ನೆರವು ಸಹಕಾರ ಪಡೆದಿದ್ದರೂ, ಅಂಥವರು ತಮ್ಮ ಬರಹಗಳಲ್ಲಿ ಜೋಯಿಸರ ನೆರವನ್ನು ಕೃತಜ್ಞತೆಯಿಂದ ನೆನೆಯದೆ ಹೋಗಿರುವುದೂ ಉಂಟು. ಜೋಯಿಸರು ಅದನ್ನೂ ಮನಸ್ಸಿಗೆ ತೆಗೆದುಕೊಳ್ಳದೆ, ಉದಾರಭಾವನೆಯಿಂದ ಇರುತ್ತಿದ್ದರು.

ಜೋಯಿಸರ ಉದಾತ್ತ ಗುಣವನ್ನು ಪ್ರತ್ಯಕ್ಷವಾಗಿ ಕಂಡ ಡಾ. ಜಿ. ವರದ ರಾಜರಾವ್ ಅವರು ಹೃತ್ಪೂರ್ವಕವಾಗಿ ಹೀಗೆ ಹೇಳಿದ್ದಾರೆ: '' ಜೋಯಿಸರ ಮನಸ್ಸು ಬಹಳ ನಿರ್ಮಲವಾದದ್ದು. ಮುಚ್ಚುಮರೆ ಸ್ವಲ್ಪವೂ ಇರಲಿಲ್ಲ ಅವರಲ್ಲಿ. ಅವರ ವ್ಯಕ್ತಿತ್ವದಲ್ಲಿ ನನಗೆ ಕಾಣುತ್ತಿದ್ದುದು - ಅವರು ಆರ್ಥಿಕವಾಗಿ ಕಷ್ಟಸ್ಥಿತಿಯಲ್ಲಿ ಇದ್ದರೂ ಕೂಡಾ ಅವರ ಮನಸ್ಸು ಬಹಳ ಉದಾರವಾಗಿದ್ದಿತು. ಅಗತ್ಯಬಿದ್ದಾಗ ತಮ್ಮಲ್ಲಿ ಏನಿದ್ದಿತೋ ಅದನ್ನೇ ಇನ್ನೊಬ್ಬರಿಗೆ ಕೊಟ್ಟುಬಿಡುತ್ತಿದ್ದರು. ತಮಗೆ ಬೇಕಿದ್ದರೂ ಕೂಡಾ ಇನ್ನೊಬ್ಬರು ತಮಗಿಂತ ತುಂಬಾ ದೀನಾವಸ್ಥೆಯಲ್ಲಿದ್ದಾರೆಂಬುದನ್ನು ಕಂಡಾಗ ತಮ್ಮಲ್ಲಿದ್ದುದನ್ನೆ ಕೊಟ್ಟುಬಿಡುತ್ತಿದ್ದರು... ಆ ಔದಾರ್ಯ ಬಹಳ ಮೆಚ್ಚಬೇಕಾದದ್ದು. ''

ಇದಲ್ಲದೆ ಜೋಯಿಸರು ತಾವು ಪಾಲ್ಗೊಂಡ ಸ್ವಾತಂತ್ರ್ಯ ಹೋರಾಟ ಮತ್ತು ಮೈಸೂರು ಚಲೋ ಚಳುವಳಿ, ಇವುಗಳ ಬಗ್ಗೆ ಮತ್ತು ಅವುಗಳಲ್ಲಿ ತಾವು ಪಾಲ್ಗೊಂಡ

ಪ್ರಸಂಗಗಳ ಬಗ್ಗೆ ಸ್ವಾರಸ್ಯಕರವಾಗಿ ಬಣ್ಣಿಸುತ್ತಿದ್ದರು. ಅದನ್ನು ಅವರು ಬಣ್ಣಿಸುತ್ತಿದ್ದುದು ಸ್ವಪ್ರಶಂಸೆಯ ಭಾವನೆಯಿಂದಲಾಗಲಿ ಅಥವಾ ಅದನ್ನು ಕೇಳಿದವರಿಗೆ ತಮ್ಮ ಬಗ್ಗೆ ಗೌರವ ಹೆಚ್ಚಬೇಕೆಂದಾಗಲಿ ಅಲ್ಲ. ಬದಲಿಗೆ ಅಂಥ ಚಳುವಳಿಗಳೊಳಗೆ ತಾವು ಪಾಲ್ಗೊಂಡುದರ ಆನಂದವನ್ನು ಮೆಲುಕುಹಾಕಬೇಕೆನಿಸಿ ಹಾಗೆ ಹೇಳುತ್ತಿದ್ದರು. '' ನಮ್ಮ ರಾಜಕೀಯ ಧುರೀಣರಲ್ಲಿ ನಾವು ಕಾಣಬಹುದಾದಂಥ ಸ್ವಾರ್ಥ ಅನ್ನುವುದು ಅವರಲ್ಲಿ ಸ್ವಲ್ಪವೂ ಇರಲಿಲ್ಲ''.

ಚಿತ್ರದುರ್ಗದ ಜನರಿಗೆ ಮತ್ತು ಇತರೆಡೆಯ ವಿದ್ವಜ್ಜನರಿಗಷ್ಟೆ ಅಲ್ಲದೆ ಜೋಯಿಸರು ಹಳ್ಳಿಯ ಜನರಿಗೂ ತುಂಬ ಪ್ರೀತಿಪಾತ್ರರಾಗಿದ್ದರು. ಸಂಶೋಧನೆಗಾಗಿಯೋ, ಉಪನ್ಯಾಸಕ್ಕಾಗಿಯೋ, ಹಸ್ತಪ್ರತಿ ದಾಖಲೆ ಸಂಗ್ರಹಕ್ಕಾಗಿಯೋ, ಅವರು ತಮ್ಮಲ್ಲಿಗೆ ಅಥವಾ ತಮ್ಮ ಹಳ್ಳಿಗೆ ಬಂದಿದ್ದರೆಂಬುದನ್ನು ಇಂದಿಗೂ ಅನೇಕ ಹಳ್ಳಿಗಳ ಹಳೆಯ ತಲೆಮಾರಿನ ಜನ ನೆನೆಯುತ್ತಾರೆ. ತಮ್ಮ ಪೂರ್ವಿಕರ ಊರಾದ ಹುಲ್ಲೂರಿನ ಜನರೊಂದಿಗೆ ಅವರು ವಿಶೇಷವಾದ ನಂಟನ್ನು ಹೊಂದಿದ್ದರು. ತಮ್ಮ ಕೈಲಾದ ಮಟ್ಟಿಗೆ ಆದರ ಅಭಿವೃದ್ಧಿಗೂ ಶ್ರಮಿಸಿದ್ದರು. ಹಿಂದೆ ಸ್ವದೇಶೀ ಚಳುವಳಿಯ ಮೂಲಕ ಗೃಹ ಕೈಗಾರಿಕೆಗಳಿಗೆ, ಗಾಂಧೀವಿಚಾರಧಾರೆಯಿಂದ ಹರಿಜನೋದ್ಧಾರಕ್ಕೆ ಸಹ ಅವರು ಕೆಲಸಮಾಡಿದ್ದರು. ಜೋಯಿಸರ ಮೇಲಿನ ಪ್ರೀತಿ ಅಭಿಮಾನಗಳಿಗಾಗಿ ಹುಲ್ಲೂರು ಗ್ರಾಮದ ಹರಿಜನರು ತಮ್ಮ ಹೊಸ ವಸತಿ ವಿಭಾಗಕ್ಕೆ '' ಶ್ರೀನಿವಾಸಪುರ '' ಎಂಬ ಹೆಸರನ್ನು ಕರೆದರು.

■ ■

# ಕನ್ನಡ ಪ್ರೇಮ, ಕಡೆಯ ದಿನಗಳು

ಈ ಸಂದರ್ಭದಲ್ಲಿ ಜೋಯಿಸರ ವ್ಯಕ್ತಿತ್ವದ ಮತ್ತೊಂದು ಮುಖವಾದ ಕನ್ನಡ ಪ್ರೇಮವನ್ನೂ ಕುರಿತು ಹೇಳಲೇಬೇಕು. '' ಅವರಿಗೆ ಕನ್ನಡದ ಮೇಲೆ, ಕನ್ನಡ ನಾಡಿನ ಮೇಲೆ, ಕನ್ನಡ ಜನರ ಮೇಲೆ ತುಂಬಾ ಅಭಿಮಾನ. ಈ ವಿಷಯದಲ್ಲಿ ಮಾತ್ರ ಅರು ಯಾವತ್ತು ಹಿಂದೆಬಿದ್ದವರಲ್ಲ. ಅವರು ತಮ್ಮ ಅನೇಕ ಪತ್ರಗಳಲ್ಲಿ ಕನ್ನಡದ ಮಾತುಗಳನ್ನೇ ಬಳಸುತ್ತಾ ಇದ್ದರು. ವಕೀಲಿ ವೃತ್ತಿಯಲ್ಲಿ ಕೂಡಾ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿದ್ದರು ಅಂತ ನಾನು ಕೇಳಿದ್ದೇನೆ'' ಎಂದು ಡಾ. ಜಿ. ವರದರಾಜರಾಯರು ಹೇಳಿದ್ದಾರೆ. ಇದಲ್ಲದೆ '' ಅವರು ಯಾವಾಗಲು ಕನ್ನಡದಲ್ಲೇ ರುಜು ಮಾಡುತ್ತಿದ್ದರು'' ಎಂಬುದನ್ನು ' ಕತೆಗಾರ ' ಪತ್ರಿಕೆ ಸಹ ಎತ್ತಿ ಹೇಳಿದೆ.

ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಮ್ಮ ನಾಡಿನಲ್ಲಿ ನಡೆದ ಮತ್ತೊಂದು ಪ್ರಮುಖ ಚಳುವಳಿ ಎಂದರೆ ' ಕರ್ನಾಟಕ ಏಕೀಕರಣ ಚಳುವಳಿ ' ಯಷ್ಟೇ? ಅದರಲ್ಲೂ ಸಹ ಅವರು ಕ್ರಿಯಾಶೀಲರಾಗಿ ಭಾಗವಹಿಸಿದ್ದರು. ಭಾಷಾವಾರು ಪ್ರಾಂತ್ಯಗಳ ರಚನೆಗೆ ಕೇಂದ್ರ ಸರ್ಕಾರ ಒಪ್ಪಿ, ಬೇರೆ ಬೇರೆಯ ಪ್ರಾಂತ್ಯಗಳಲ್ಲಿ ಹರಿದುಹಂಚಿಹೋಗಿದ್ದ ಕನ್ನಡದ ನೆಲವೆಲ್ಲ ಒಂದುಗೂಡಿ ೧೯೫೬ರ ನವೆಂಬರ್ ೧ರಂದು ' ವಿಶಾಲ ಮೈಸೂರು ' ರಾಜ್ಯ ಜನ್ಮ ತಾಳಿತು. ಆ ಹೊತ್ತಿಗೆ ಮೊದಲೇ ಜೋಯಿಸರು ಅನಾರೋಗ್ಯಕ್ಕೆ ತುತ್ತಾಗಿದ್ದರು. ಅವರನ್ನು ನೋಡಿಕೊಳ್ಳುತ್ತಿದ್ದ (ಅಪ್ಪಾಜಿ ರಾವ್ ಎಂಬ ಹೆಸರಿನ) ವೈದ್ಯರು '' ಇನ್ನು ಮೇಲೆ ನೀವು ವಕಾಲತ್ತು, ಹೆಚ್ಚಿನ ಓಡಾಟ, ಭಾಷಣ ಬಿಟ್ಟು ಬಿಡಿ; ಬೆಟ್ಟ ಹತ್ತಲೇ ಬೇಡಿ, ಮೆಟ್ಟಿಲುಗಳನ್ನೇರಬೇಡಿ'' ಎಂದು ಸಲಹೆ ಮಾಡಿದ್ದರು. ಆದರೆ ಜೋಯಿಸರು ಅವರ ಸಲಹೆಗೆ ಗಮನ ಕೊಡಲಿಲ್ಲ. ಆ ಹೊತ್ತಿಗೆ ತಮ್ಮ ನೆಚ್ಚಿನ ಕಾಂಗ್ರೆಸ್ ಪಕ್ಷ ಮೊದಲಿನ ಒಗ್ಗಟ್ಟು ಕಳೆದುಕೊಂಡು ಗುಂಪುಗಳಾಗಿ ಒಡೆದಿತ್ತು. ಇದು ಅವರಿಗೆ ವೈಯಕ್ತಿಕವಾಗಿ ತುಂಬ ಬೇಸರವನ್ನು ಉಂಟು ಮಾಡಿತ್ತು. ಮೊದಲಿಗೆ ಸಹಜ ಸಾಧಾರಣವಾಗಿ ಇದ್ದ ಜೋಯಿಸರ ಶರೀರ ನಿಧಾನವಾಗಿ ಸ್ಥೂಲವಾಗುತ್ತಾ ಬಂದಿತ್ತು.

ಕ್ರಮೇಣ ಹೆಚ್ಚಾದ ಅನಾರೋಗ್ಯದಿಂದ ಜೋಯಿಸರು ಹಾಸುಗೆ ಹಿಡಿದರು.

ಆದವಾನಿ, ಆಲೂರು, ಮಡಕಶಿರಾ, ಅನಂತಪುರ ಮುಂತಾದ ಸುತ್ತಿನ ಪ್ರದೇಶಗಳೆಲ್ಲ ಕನ್ನಡ ಮಾತನಾಡುವ ಪ್ರದೇಶಗಳಾದ್ದರಿಂದ ಅವೆಲ್ಲ ಕರ್ನಾಟಕಕ್ಕೆ ಸೇರಲೇಬೇಕೆಂಬುದು ಜೋಯಿಸರ ಆಶಯ. ಕಣ್ಣು ಮುಚ್ಚುವುದರೊಳಗೆ ಕರ್ನಾಟಕ ಏಕೀಕರಣವನ್ನು ನೋಡಬೇಕು ಎಂಬುದು ಅವರ ತೀವ್ರ ಹಂಬಲ. ಅಂತೂ 'ವಿಶಾಲ ಮೈಸೂರು' ಪ್ರಾಂತ ರಚನೆಯಾದಾಗ ಅಷ್ಟು ಹೊತ್ತಿಗೆ ಹೃದಯ ಊತವಾಗಿ ಹಾಸಿಗೆ ಹಿಡಿದು ಮಲಗಿ ಅರ್ಧಂಬರ್ಧ ಜ್ಞಾನದಲ್ಲಿದ್ದ ಜೋಯಿಸರು ಅವರನ್ನು ನೋಡಲೆಂದು ಬಂದಿದ್ದ ಪ್ರಿಯ ಮಿತ್ರರೂ ಮುಖ್ಯ ಮಂತ್ರಿಗಳೂ ಆಗಿದ್ದ ಎಸ್. ನಿಜಲಿಂಗಪ್ಪನವರಿಂದ ಆ ಸುದ್ದಿ ತಿಳಿದು ತುಂಬ ಸಂತೋಷಪಟ್ಟರು. ಅವರಿಗೆ ಅಷ್ಟೇ ಸಾಕೆನಿಸಿತೆಂಬಂತೆ ಅದೇ ೧೯೫೬ರ ನವೆಂಬರ್ ೮ರಂದು ಗುರುವಾರ ತಮ್ಮ ೬೫ನೆಯ ವಯಸ್ಸಿನಲ್ಲಿ ನಿಧನರಾದರು. ಇಲ್ಲಿ ಒಂದು ಮಾತನ್ನು ಸೇರಿಸಿದರೆ ಅಪ್ರಸ್ತುತವಾಗಲಾರದೆನಿಸುತ್ತದೆ: ಜೋಯಿಸರು ಆಗಾಗ ಹೀಗೆ ಹೇಳುತ್ತಿದ್ದರಂತೆ - " ನನಗೆ ೬೪ - ೬೫ ವರ್ಷಕ್ಕೆ ಒಂದು ಗಂಡಾಂತರ ಇದೆ. ಅದರಿಂದ ಪಾರಾದರೆ ನಾನು ನೂರು ವರ್ಷ ಮೀರಿ ಬದುಕಿರುತ್ತೇನೆ. ... ದೈವೇಚ್ಛೆ ಏನಿದೆಯೋ ಅದರಂತಾಗುತ್ತೆ ". ಜೋಯಿಸರು ಹೀಗೇಕೆ ಹೇಳುತ್ತಿದ್ದರೋ, ಏನು ಕಾಕತಾಳೀಯವೋ ಅವರು ತಮ್ಮ ೬೫ರ ವಯಸ್ಸಿನಲ್ಲೇ ನಿಧನರಾದರು. ಆದರೆ ಅವರ ಕೃತಿಗಳು ಅವರನ್ನು ಚಿರಕಾಲಿಕರನ್ನಾಗಿ ಮಾಡಿವೆ.

ಜೋಯಿಸರು ನಿಧನರಾದದ್ದನ್ನು ತಿಳಿದು ಚಿತ್ರದುರ್ಗದ ಜನರಷ್ಟೇ ಅಲ್ಲ ನಾಡಿನ, ದೇಶದ ಮೂಲೆ ಮೂಲೆಯಲ್ಲಿದ್ದ ಅವರ ಪರಿಚಿತರು, ಅಭಿಮಾನಿಗಳು, ಸಾಮಾನ್ಯರು, ಗಣ್ಯರು, ಪತ್ರಿಕೆಗಳು, ಎಲ್ಲರೂ ತೀವ್ರ ಶೋಕವನ್ನು ವ್ಯಕ್ತಪಡಿಸಿ ಅವರ ಗುಣಗಳನ್ನು ಸ್ಮರಿಸಿಕೊಂಡರು. ಇತಿಹಾಸವನ್ನೇ ತನ್ನ ಉಸಿರಾಗಿಸಿಕೊಂಡು ಬಾಳಿದ ಒಂದು ಹಿರಿಯ ಚೇತನ ತಾನೇ ಒಂದು ಇತಿಹಾಸವಾಗಿ ಕಣ್ಮರೆಯಾಯಿತು. " ಚಿತ್ರದುರ್ಗದ ವೆಂಕಟೇಶಪುರದಲ್ಲಿ ' ವಿಶ್ವಾಮಿತ್ರಾಶ್ರಮ ' ಎಂದು ಹೆಸರು ಪಡೆದ ಒಂದು ಸಣ್ಣ ಮನೆಯಲ್ಲಿದ್ದ, ಇತಿಹಾಸ ಸಂಶೋಧನೆಯ ಮತ್ತು ಸತ್ಯ, ಧರ್ಮ, ನ್ಯಾಯ ವ್ರತಗಳನ್ನು ಈ ಕಾಲದಲ್ಲಿಯೂ ಶುದ್ಧ ಮನಸ್ಸಿನಿಂದ ಪಾಲಿಸಿಕೊಂಡು ಬರುತ್ತಿದ್ದ, ಆ ಋಷಿಯು ಈಗಿಲ್ಲದೇ ಇರುವುದು ಚಿತ್ರದುರ್ಗದವರಿಗೆ ಮಾತ್ರವೇ ಅಲ್ಲದೆ ಇಡೀ ದೇಶಕ್ಕೆ ಒಂದು ತುಂಬಲಾರದ ನಷ್ಟವಾಗಿದೆ... ಜೋಯಿಸರ ಪಾರ್ಥಿವ ಶರೀರ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿದರೂ ಅವರ ಗುಣ, ಕೆಲಸ ಮತ್ತು ಸಂಶೋಧನೆಗಳ ಫಲ, ಆಚಂದ್ರಾರ್ಕವಾಗಿ ನಿಲ್ಲುವುದರಲ್ಲಿ ಅನುಮಾನವಿಲ್ಲ. " ಎಂದು ಆಗಿನ ' ಕತೆಗಾರ ' ಪತ್ರಿಕೆಯಲ್ಲಿ ಬರೆದಿರುವುದು ಜೋಯಿಸರ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತದೆ. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಆಗ ಬರೆದ ಈ ಕೆಳಗಿನ ಮಾತು ಜೋಯಿಸರಿಗೆ ಸೂಕ್ತ ಶ್ರದ್ಧಾಂಜಲಿಯಾಗಿದೆ: " ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ನಿಷ್ಠಾವಂತ

ಕಾಂಗ್ರೆಸ್ ಭಕ್ತರು, ಕರ್ನಾಟಕ ಏಕೀಕರಣದ ಉಜ್ಜ್ವಲಾಭಿಮಾನಿಗಳು, ನುರಿತ ಪತ್ರಿಕೋದ್ಯೋಗಿಗಳು, ಅತ್ಯಂತ ಸತ್ಯಸಂಧರು, ಸ್ನೇಹಪರರು ಎನಿಸಿಕೊಂಡಿದ್ದರು. ಇತಿಹಾಸ ಸಂಶೋಧನೆಯಲ್ಲಿ ಅವರಿಗೆ ತೀವ್ರವಾದ ಆಸಕ್ತಿ ಇತ್ತು... ಅವರಂತಹ ನಿಃಸ್ವಾರ್ಥ ದೇಶಸೇವಕರನ್ನು ಕಾಣುವುದು ಅಪರೂಪ.''

೧೯೯೪ರ ನವೆಂಬರ್ ೧೩ರ ಭಾನುವಾರದಂದು, ಚಿತ್ರದುರ್ಗದಲ್ಲಿ ' ಶ್ರೀ ಜೋಯಿಸರ ಜನ್ಮ ಶತಾಬ್ದಿ ಸಂಸ್ಮರಣೆ ' ಕಾರ್ಯಕ್ರಮವೊಂದು ಅತ್ಯಂತ ಹೃತ್‌ಸ್ಪರ್ಶಿಯಾಗಿ ನಡೆಯಿತು. ಚಿತ್ರದುರ್ಗ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಚಿತ್ರದುರ್ಗದ ಸರ್ಕಾರಿ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಬೆಂಗಳೂರಿನ ' ವಾರಪತ್ರಿಕೆ ' ಬಳಗದವರು, ಚಿತ್ರದುರ್ಗದ ಎಸ್. ಜೆ. ಎಂ. ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘ (ರಿ) ಮತ್ತು ಹೋಟೆಲ್ ಮಾಲೀಕರ ಸಂಘದವರ ಸಹಕಾರದೊಂದಿಗೆ ಆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕನ್ನಡ ನಾಡು ನುಡಿಗಳಿಗಾಗಿ ಅಪಾರವಾಗಿ ಶ್ರಮಿಸಿದವರಾದರೂ ಅವರ ಸಂಸ್ಮರಣೆಯ ಕಾರ್ಯಕ್ರಮಬೇರೆಡೆ ಆಗಿಯೇ ಇಲ್ಲ ಎಂಬುದನ್ನು ವಿಷಾದದಿಂದ ಹೇಳಬೇಕಾಗಿದೆ. ಹಾಸನದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ' ಮರೆಯಲಾಗದ ಮಹನೀಯರು ' ಎಂಬ ಶೀರ್ಷಿಕೆಯ ಕೆಲವು ಮಹನೀಯರುಗಳ ಕುರಿತು ಕಾರ್ಯಕ್ರಮಗಳು ಈಚೆಗೆ ಜರುಗಿದೆ. ಆದರೆ ಜೋಯಿಸರ ಬಗ್ಗೆ ಅಂಥ ಒಂದು ಕಾರ್ಯಕ್ರಮವೂ ಇನ್ನೂ ಜರುಗಿಲ್ಲ ಎಂಬುದನ್ನು ಸಹ ಹೇಳಬೇಕಾಗಿದೆ.

ಈಚೆಗೆ ೨೦೦೨ರಲ್ಲಿ ಚಿತ್ರದುರ್ಗದ ನಗರಸಭೆ ವೆಂಕಟೇಶಪುರ ಬಡಾವಣೆಯಲ್ಲಿ ಅರಣ್ಯ ಇಲಾಖೆ ಕಛೇರಿಯಿಂದ ತುರುವನೂರು ರಸ್ತೆಯನ್ನು ಕೂಡುವ ರಸ್ತೆಗೆ ' ಹುಲ್ಲೂರು ಶ್ರೀನಿವಾಸ ಜೋಯಿಸರ ರಸ್ತೆ ' ಎಂದು ನಾಮಕರಣ ಮಾಡಿರುವುದು ಸಂತಸದ ಸಂಗತಿಯಾಗಿದೆ.

# ಜೋಯಿಸರ ಮತ್ತು ಅವರ ಸಂಶೋಧನೆಯ ಬಗೆಗೆ ಗಣ್ಯರ ಅಭಿಪ್ರಾಯಗಳು

ಚಿತ್ರದುರ್ಗವಷ್ಟೇ ಅಲ್ಲದೆ, ಕರ್ನಾಟಕವನ್ನು ಆಳಿದ ಅನೇಕ ಪ್ರಮುಖ ರಾಜವಂಶಗಳ ಮತ್ತು ಪ್ರಾದೇಶಿಕ ಅರಸುಮನೆತನಗಳ ಇತಿಹಾಸದ ಬಗ್ಗೆ ಸಹ ಅವರು ಸಾಕಷ್ಟು ಕೆಲಸ ಮಾಡಿದ್ದಾರೆ. ಹಾಗೆಂದೇ ಅವರ ಬಗ್ಗೆ '' ಕದಂಬ, ಚಾಲುಕ್ಯ, ಪಲ್ಲವ, ಹೊಯಿಸಳ, ಗಂಗ, ಪುಪ್ಪಲ, ವಿಜಯನಗರ ಮುಂತಾದ ಕನ್ನಡ ನಾಡಿನೊಡೆಯರು ಜೋಯಿಸರಿಗೆ ತಮ್ಮ ನೆಂಟರಿಗಿಂತಾ ಹೆಚ್ಚು ಪರಿಚಯವಾಗಿದ್ದರು '' ಎಂದು ವಿದ್ವಾಂಸರೊಬ್ಬರು ಹೇಳಿರುವುದು ಸಮಂಜಸವಾಗಿದೆ.

ಅವರಿಗೆ ಎಲ್ಲ ಮತಧರ್ಮಗಳ ಬಗೆಗೆ ಗೌರವಭಾವನೆ ಇತ್ತು. ಚಿತ್ರದುರ್ಗದ ಇತಿಹಾಸ ಪ್ರಸಿದ್ಧವಾದ ಶ್ರೀ ಮುರುಘರಾಜೇಂದ್ರ ಬೃಹನ್ಮಠದ ಜಗದ್ಗುರುಗಳಾಗಿದ್ದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಹೀಗೆ ಹೇಳುತ್ತಿದ್ದುದುಂಟು: '' ಬೃಹನ್ಮಠದ ಇತಿಹಾಸವನ್ನು ಬರೆಯಲು ಮೊತ್ತಮೊದಲು ಲೇಖನಿ ಎತ್ತಿಕೊಂಡವರು ಹುಲ್ಲೂರು ಶ್ರೀನಿವಾಸ ಜೋಯಿಸರು. ಅವರು ಬ್ರಾಹ್ಮಣರಾದರೂ, ಬ್ರಾಹ್ಮಣ ಲಿಂಗಾಯತ ಎನ್ನುವ ಭೇದಭಾವ ಮಾಡದ ನಿರ್ಮಲ ಮನಸ್ಸಿನ ಸಂಶೋಧಕರಾಗಿದ್ದರು'' . ಈ ಪ್ರಶಂಸೆಯ ಮಾತು ಶ್ರೀ ಜೋಯಿಸರ ಪ್ರಾಂಜಲ ಮನಸ್ಕತೆಯನ್ನು ಎತ್ತಿ ಹೇಳುತ್ತದೆ. ಆದರಿಂದಲೇ ಅವರು ಬೌದ್ಧ, ಜೈನ, ಶೈವ, ವೀರಶೈವ, ಮಾಧ್ವ ಈ ಧರ್ಮಗಳಿಗೆ ಸಂಬಂಧಿಸಿದ ಪರಂಪರೆ ಇತಿಹಾಸ ಕುರಿತ ಅನೇಕ ಲೇಖನಗಳನ್ನು ಪ್ರಾಂಜಲ ಮನಸ್ಸಿನಿಂದ ಬರೆಯುವುದು ಸಾಧ್ಯವಾಯಿತು. ಇದಲ್ಲದೆ ಅವರು ಕೆಲವು ಶಿಲಾ ಹಾಗೂ ಲೋಹ ಶಾಸನಗಳನ್ನು ಬೆಳಕಿಗೆ ತಂದು ಅವುಗಳ ವಿವೇಚನೆ ಸಹ ಮಾಡಿದ್ದಾರೆ. ಸ್ಥಳನಾಮ ಅಧ್ಯಯನ ಈಚಿನ ಕಾಲದಲ್ಲಿ ಒಂದು ಪ್ರಮುಖ ಅಧ್ಯಯನ ಶಾಖೆಯಾಗಿ ಬೆಳೆದಿದೆಯಾದರೂ, ಹಿಂದೆ ಆ ಬಗ್ಗೆ ಏನೂ ಇಲ್ಲದಿದ್ದ ಕಾಲದಲ್ಲಿ ಅವರು ಅನೇಕ ಊರುಗಳ ಹೆಸರುಗಳನ್ನು ಕುರಿತು (' ಊರ ಹೆಸರಿನಲ್ಲೇನಿದೆ? ') ಲೇಖನಗಳನ್ನು ಬರೆದಿರುವುದು ಸ್ಥಳನಾಮಶಾಸ್ತ್ರ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆಯಾಗಿದೆ.

ಹೀಗೆ ಹತ್ತು ಹಲವು ರೀತಿಯ ಬರಹಗಳಿಂದ ಶ್ರೀನಿವಾಸ ಜೋಯಿಸರು ಚಿತ್ರದುರ್ಗ ಮತ್ತಿತರ ಪ್ರಾದೇಶಿಕ ಇತಿಹಾಸ ಹಾಗೂ ಕರ್ನಾಟಕ ಇತಿಹಾಸ, ಇವುಗಳ ಜ್ಞಾನದ ಕ್ಷಿತಿಜವನ್ನು ವಿಸ್ತರಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಕನ್ನಡ ನಾಡಿನ ಜನಸಾಮಾನ್ಯರಲ್ಲಿ ಇತಿಹಾಸವನ್ನು ಜನಪ್ರಿಯಗೊಳಿಸುವ ಮಹತ್ತರವಾದ ಕೆಲಸವನ್ನು ಅವರು ಮಾಡಿದರು. ಜೋಯಿಸರ ಇತಿಹಾಸ ಕ್ಷೇತ್ರದ ಮಹತ್ಸಾಧನೆಗೆ ಮೆಚ್ಚಿಕೊಂಡ ಸಿರಿಗೆರೆಯ ತರಳಬಾಳು ಜಗದ್ಗುರುಗಳು೧೯೪೪ರಲ್ಲಿ '' ಐತಿಹ್ಯ ವಿಮರ್ಶನ ವಿಚಕ್ಷಣ '' ಎಂಬ ಬಿರುದನ್ನು ನೀಡಿ ಸನ್ಮಾನಿಸಿದರು. ತರುವಾಯ ಕೂಡಲಿ - ಶೃಂಗೇರಿ ಜಗದ್ಗುರುಗಳು '' ಇತಿಹಾಸ ಸಂಶೋಧನ ಪ್ರಸಕ್ತ '' ಎಂಬ ಬಿರುದನ್ನು ಕೊಟ್ಟು ಸತ್ಕರಿಸಿದರು. ವಿದ್ವಜ್ಜನರಲ್ಲಿ ಹೇಗೋ ಜನಸಾಮಾನ್ಯರಲ್ಲೂ ಅವರು ಅಭಿಮಾನಕ್ಕೆ ಪಾತ್ರರಾದರು.

ಅಪಾರ ಇತಿಹಾಸ ಪಾಂಡಿತ್ಯವಿದ್ದ ಜೋಯಿಸರು ತುಂಬಿದ ಕೊಡದಂತೆ ಇದ್ದರು. ಅವರ ವಿನಯಶೀಲತೆ ಅನುಕರಣೀಯವಾದದ್ದು. '' ನಾನು ಸಾಹಿತಿಯಲ್ಲ, ಇತಿಹಾಸ ವಿದ್ವಾಂಸನೂ ಅಲ್ಲ, ಸಂಶೋಧನಾ ಕಾರ್ಯ ನನ್ನ ಕಾರ್ಯರಂಗವೂ ಅಲ್ಲ '' ಎಂದು ಅವರು ಒಂದೆಡೆ ಹೇಳಿರುವುದು ಅವರ ವಿನಮ್ರತೆಯನ್ನು ಎತ್ತಿತೋರಿಸುತ್ತದೆ. '' ಅವರ ಪಾಂಡಿತ್ಯದ ಬಗೆಗೆ ಹೇಳುವುದಾದರೆ, ನಿಜವಾಗಿಯೂ ತಾವು ಸ್ವತಃ ಸಂಪಾದನೆ ಮಾಡಿದಂಥ ಜ್ಞಾನ ಅದು. ಅವರ ಕ್ಷೇತ್ರ ವಕೀಲಿವೃತ್ತಿ. ' ಕಾಲೇಜಿನ ಮೆಟ್ಟಿಲನ್ನೇ ನಾನು ತುಳಿದಿಲ್ಲ ' ಅಂತ ತಮಾಷೆ ಮಾಡುತ್ತಿದ್ದರು. ಆದರೆ ಕಾಲೇಜು ಮೆಟ್ಟಿಲು ತುಳಿದವರಿಗಿಂತ ಹೆಚ್ಚಾಗಿ ಅವರು ವಿಷಯಗಳನ್ನೆಲ್ಲಾ ಸಂಗ್ರಹಿಸಿಕೊಂಡಿದ್ದರು. ಹಗಲೂ ಇರುಳೂ ಕಷ್ಟಪಟ್ಟು ಎಲ್ಲವನ್ನೂ ಕ್ರಮವಾಗಿ ಅಧ್ಯಯನ ಮಾಡುತ್ತಿದ್ದರು '' - ಜೋಯಿಸರ ಆಪ್ತ ಮಿತ್ರರಲ್ಲಿ ಒಬ್ಬರಾಗಿದ್ದ ಡಾ. ಜಿ. ವರದರಾಜರಾವ್ ಅವರ ಈ ಮಾತು, ವಕೀಲರಾಗಿದ್ದ ಜೋಯಿಸರು ಸಂಶೋಧಕರಾಗಿ ಬೆಳೆದುದರ ಹೊಳಹನ್ನು ಮನಸ್ಸಿಗೆ ತರುತ್ತದೆ. ತೀವ್ರ ಆಸಕ್ತಿ, ಆ ಆಸಕ್ತಿಗೆ ತಕ್ಕ ಕಠಿಣ ಪರಿಶ್ರಮ ಎರಡೂ ಜೋಯಿಸರಲ್ಲಿ ಮೈಗೂಡಿದ್ದುವು. ಹಾಗಾಗಿಯೇ ಅವರು ಒಬ್ಬ ಉತ್ತಮ ಸಂಶೋಧಕರಾಗಿ ಬೆಳೆಯಲು ಸಾಧ್ಯವಾಯಿತು.

'' ಆ ಕಾಲದಲ್ಲಿ ಸ್ಥಳೀಯ ಇತಿಹಾಸ (Local History) ದ ಬಗೆಗೆ ಸಂಶೋಧನೆ ನಡೆಸುವವರು ಅಷ್ಟಾಗಿ ಇರಲಿಲ್ಲ. ಇತಿಹಾಸವೆಂದರೆ ದೊಡ್ಡ ದೊಡ್ಡ ಸಾಮ್ರಾಜ್ಯಗಳ ಏಳು ಬೀಳುಗಳ ಅಧ್ಯಯನ ಎಂದು ತಿಳಿದುಕೊಂಡಿದ್ದ ಕಾಲ ಅದು. ಪಾಳೇಪಟ್ಟುಗಳ ಇತಿಹಾಸ ಕರ್ನಾಟಕ ಇತಿಹಾಸ ರಚನೆಗೆ ಅಗತ್ಯ ಎನ್ನುವುದನ್ನು ನಮ್ಮ ಇತಿಹಾಸಕಾರರು ಆಗ ಅಷ್ಟಾಗಿ ಮನಗಂಡಿರಲಿಲ್ಲ... ಅಂತಹ ಸನ್ನಿವೇಶದಲ್ಲಿ ಶ್ರೀನಿವಾಸ ಜೋಯಿಸರು ಚಿತ್ರದುರ್ಗ ಇತಿಹಾಸ ಸಂಶೋಧನೆಗೆ ತಮ್ಮನ್ನು ಪೂರ್ಣವಾಗಿ ಸಮರ್ಪಿಸಿಕೊಂಡದ್ದು ಗಮನಾರ್ಹ '' ಎಂದು ಪತ್ರಕರ್ತ ಬಿ.ವಿ. ವೈಕುಂಠರಾಜು, ಚಿತ್ರದುರ್ಗದ ಪ್ರಾದೇಶಿಕ

ಇತಿಹಾಸ ಕುರಿತ ಜೋಯಿಸರ ಸಂಶೋಧನೆಯನ್ನೂ ಸಾಧನೆಯನ್ನೂ ಪ್ರಶಂಸಿಸಿದ್ದಾರೆ. '' ಚಿತ್ರದುರ್ಗವೆಂದರೆ ಜೋಯಿಸರಿಗೆ ಹೆಚ್ಚು ಅಭಿಮಾನ. ನಮ್ಮ ಊರಿನ ಬೆಟ್ಟದ ಹಳ್ಳಕೊಳ್ಳದ ಕಲ್ಲುಮಣ್ಣನ್ನೂ ಮನೆಯ ತಳಪಾಯವನ್ನು ಶೋಧಿಸುವ ಕೆಲಸಗಾರನಂತೆ ಶೋಧಿಸಿದ್ದಾರೆ. ಅವರೊಡನೆ ಮಾತನಾಡದ ಕಲ್ಲಿಲ್ಲ; ಅವರ ಕಣ್ಣನ್ನು ಸೆಳೆಯದ ಕಲ್ಗೊಂಬೆಯಿಲ್ಲ; ಅವರು ಕೇಳದ ದಂತ ಕಥೆಯಿಲ್ಲ; ಅವರಿಗೆ ತಿಳಿಯದ ಕೋಲುಪದ, ಲಾವಣಿ(ಮದಕರಿ ನಾಯಕನದು) ಇಲ್ಲ - ನಮ್ಮ ಊರಿನಲ್ಲಿ '' ಎಂದು ಸಿದ್ದವ್ವನಹಳ್ಳಿ ಕೃಷ್ಣ ಶರ್ಮರು ಜೋಯಿಸರ ಬಗ್ಗೆ ಅಭಿಮಾನದಿಂದ ಹೇಳಿದರೆ, ಕನ್ನಡದ ಖ್ಯಾತ ಕಾದಂಬರಿಕಾರ ತರಾಸು ಅವರು '' ಚಿತ್ರದುರ್ಗದ ಮಟ್ಟಿಗೆ ಹೇಳುವುದಾದರೆ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು ಜೀವಂತ ವಸ್ತು ಕೋಶ. ಇಲ್ಲಿ ಅವರು ನೋಡದ ವಸ್ತುವಿಲ್ಲ, ಕೇಳದ ಕತೆಯಿಲ್ಲ, ಕಾಣದ ಕಲ್ಲೊಂದೂ ಇಲ್ಲ. ಕೋಟೆಯ ಒಂದೊಂದು ಕಲ್ಲು ಅವರಿಗೆ ಚಿರಪರಿಚಿತ ಆಪ್ತಮಿತ್ರ '' ಎಂದು ಅಷ್ಟೇ ಅಭಿಮಾನದಿಂದ ನುಡಿದಿದ್ದಾರೆ. ದುರ್ಗದ ಬಗೆಗಿನ ಜೋಯಿಸರ ತಿಳಿವಳಿಕೆ ಎಂಥವರನ್ನೂ ಅಚ್ಚರಿಗೊಳಿಸುವಂತಿತ್ತು.

ಈ ಮೇಲಿನ ಮಾತುಗಳು ಜೋಯಿಸರ ಸಾಧನೆಯ ಬಗ್ಗೆ ಬಂದ ತುಂಬು ಅಭಿಮಾನದ ಪ್ರಶಂಸೆಯ ಮಾತುಗಳಾದರೆ, ಈಚಿನ ಕಾಲದಲ್ಲಿ ಅವರ ಸಂಶೋಧನ ಲೇಖನಗಳ ಕೆಲವು ಕೊರತೆಗಳ ಬಗ್ಗೆ ಅಥವಾ ಮಿತಿಗಳ ಬಗ್ಗೆ ಬಂದಿರುವ ಅಭಿಪ್ರಾಯಗಳನ್ನೂ ಇಲ್ಲಿ ಗಮನಿಸಬೇಕು.

''ಚಿತ್ರದುರ್ಗ ಇತಿಹಾಸಕ್ಕೆ ಅವರು ಅತ್ಯಮೂಲ್ಯ ಸೇವೆಯನ್ನು ಸಲ್ಲಿಸಿದವರಾಗಿದ್ದರೂ ಕರ್ನಾಟಕ ಇತಿಹಾಸದ ಇತರ ಪ್ರಸಿದ್ಧ ರಾಜವಂಶಗಳ ಬಗ್ಗೆ ಹೆಚ್ಚು ಬರೆಯಲಿಲ್ಲ'' ಎಂಬುದು ಅಂಥ ಒಂದು ಅಭಿಪ್ರಾಯ. ಹೀಗೆ ಅಭಿಪ್ರಾಯ ಪಟ್ಟವರೇ (ಲಕ್ಷ್ಮಣ್ ತೆಲಗಾವಿ ಮತ್ತು ಡಾ. ಎಂ.ವಿ. ಶ್ರೀನಿವಾಸ್) ಅದಕ್ಕೆ ಹೀಗೆ ಸಮಾಧಾನವನ್ನೂ ಹೇಳಿದ್ದಾರೆ: '' ಏಕೆಂದರೆ ಆ ವಿಷಯಗಳನ್ನು ಬರೆಯಲು ಜೋಯಿಸರಿಗೆ ಸರಿಯಾದ ಸೌಲಭ್ಯಗಳಿರಲಿಲ್ಲ. ಸುಸಜ್ಜಿತವಾದ ಗ್ರಂಥಾಲಯ, ಕನ್ನಡವಲ್ಲದ ಇತರ ಭಾಷೆಗಳ ಜ್ಞಾನ, ಇತಿಹಾಸದಲ್ಲಿ ವ್ಯವಸ್ಥಿತ ಶಿಕ್ಷಣ ದೊರೆಯದೆ ಇದ್ದುದು - ಇವುಗಳಿಲ್ಲದೆ ಕರ್ನಾಟಕ ಇತಿಹಾಸದ ಮೇಲೆ ಹೆಚ್ಚು ಪರಿಣಾಮಕಾರಿಯಾದ ಸಂಶೋಧನೆ ನಡೆಸಲು ಅವರಿಗೆ ಸಾಧ್ಯವಾಗಲಿಲ್ಲ. ಮೂಲ ಆಧಾರಗಳನ್ನು ನೋಡಲು ಅವರಿಗೆ ಅಷ್ಟು ಅವಕಾಶವಿರಲಿಲ್ಲ. ಶಾಸನಶಾಸ್ತ್ರದ ಅಜ್ಞಾನ ಅವರ ಸಂಶೋಧನೆಗೆ ಮತ್ತೊಂದು ಕೊರತೆ. ಈ ಇತಿಮಿತಿಯಲ್ಲಿ ಶ್ರೀನಿವಾಸ ಜೋಯಿಸರ ಲೇಖನಗಳನ್ನು ಪರಿಶೀಲಿಸಬೇಕಾಗುತ್ತದೆ. ಇತಿಹಾಸ, ಪ್ರಾಚ್ಯವಸ್ತು ಸಂಶೋಧನೆ ಇವುಗಳನ್ನು ಕುರಿತು ಹಲವಾರು ಪ್ರಬಂಧಗಳನ್ನೂ ಅವರು ನೋಡಲಾಗದಿದ್ದುದರಿಂದ ಇತಿಹಾಸಕ್ಷೇತ್ರದಲ್ಲಿ ನಡೆದಿದ್ದ ಆಧುನಿಕ ಬೆಳವಣಿಗೆ

ಯನ್ನೂ, ಸಂಶೋಧನಾಕ್ರಮವನ್ನು ಅವರು ಅಷ್ಟಾಗಿ ಅರಿತುಕೊಳ್ಳಲಿಲ್ಲ. ಪರಿಣಾಮವಾಗಿ ಕೆಲವುವೇಳೆ ಅವರ ಲೇಖನಗಳಲ್ಲಿ ಹಲವಾರು ದೋಷಗಳೂ ಸಂಭವಿಸುತ್ತಿದ್ದುವು. ಆದರೆ ಶ್ರೀನಿವಾಸ ಜೋಯಿಸರು ಬರೆದದ್ದು ಜನಪ್ರಿಯ ವಾರಪತ್ರಿಕೆ ಮತ್ತು ಮಾಸ ಪತ್ರಿಕೆಗಳಲ್ಲಿ. ಸಾಮಾನ್ಯ ಜನರಿಗೆಂದೇ ಲೇಖನ ಬರೆದರು. ಜನರಿಗೆ ಇತಿಹಾಸದಲ್ಲಿ ಆಸಕ್ತಿಯನ್ನು ಮೂಡಿಸುವುದು ಅವರಿಗೆ ಮುಖ್ಯವಾಗಿತ್ತೆ ವಿನಾ ಶಾಸ್ತ್ರೀಯ ಶೈಲಿಯ ಗ್ರಂಥರಚನೆ ಅವರಿಗೆ ಮುಖ್ಯವೆನಿಸಲಿಲ್ಲ.''

ಇಂಥ ಅಭಿಪ್ರಾಯವನ್ನು ಒಂದು ಕಾಲಕ್ಕೆ ಇತ್ತವರೇ ಕೆಲವು ವರ್ಷ ಕಳೆದ ಮೇಲೆ (ಒಂದು ರೀತಿ ಅದನ್ನು ಪುನರ್ವಿಮರ್ಶಿಸಿಕೊಂಡಂತೆ) ಹೀಗೆ ಹೇಳಿದ್ದಾರೆ: ''ಯಾವುದೇ ಐತಿಹಾಸಿಕ ವಿಷಯದಲ್ಲಿ ನಿರ್ಣಯಕ್ಕೆ ಸಂಬಂಧಿಸಿದ ಸಮಸ್ಯೆಯೊಂದನ್ನು ಹೊರತು, ಜೋಯಿಸರು ನಿರೂಪಿಸಿದ ಯಾವುದೇ ಘಟನೆಯ ಯಾವುದೇ ಸಂದರ್ಭವೂ ಶಾಸ್ತ್ರೀಯ ಇತಿಹಾಸ ಶೋಧನ ತತ್ತ್ವಗಳನ್ನು ಮೀರಿಲ್ಲವೆಂತಲೂ ಇವರ ಬರವಣಿಗೆ ಕೇವಲ ವರದಿಯಾಗದೆ ಆಧುನಿಕ ಸಂಶೋಧಕರ ನಿಲುವುಗಳಿಗೂ ಸರಿಹೊಂದುವಂಥ ಪ್ರೌಢ ಶೋಧನ ಸಾಮರ್ಥ್ಯದ ನಿದರ್ಶನಗಳಾಗಿವೆಯೆಂತಲೂ ಹೇಳಬಹುದು. ಕರ್ನಾಟಕಇತಿಹಾಸ ರಚನೆಗೆ ತಳಹದಿ ಹಾಕಿದ ಹಲವಾರು ವಿದ್ವಾಂಸರ ಸಾಲಿಗೆ ಜೋಯಿಸರೂ ಸೇರುತ್ತಾರೆ''. ''ಶ್ರೀನಿವಾಸ ಜೋಯಿಸರು ಬರೆದ ಕಾಲ ಮತ್ತು ಅಂದಿನ ಪರಿಸ್ಥಿತಿ ವಿಮರ್ಶಾತ್ಮಕ ಹಾಗೂ ಸಂಶೋಧನಾ ಲೇಖನಗಳ ಬರವಣಿಗೆಗೆ ಅಷ್ಟು ಅನುಕೂಲಕರವಾಗಿರಲಿಲ್ಲ. ಕನ್ನಡ ಸಾಹಿತ್ಯದ ನವೋದಯದ ಬರವಣಿಗೆಗಳು ಜನರಲ್ಲಿ ಮನರಂಜನೆಯನ್ನೂ ದೇಶಾಭಿಮಾನವನ್ನೂ ಪ್ರಚೋದಿಸುವ ಕೆಲಸವನ್ನು ಮಾಡುತ್ತಾ ಬಂದಿದ್ದುವು. ಅದರಂತೆ ಜೋಯಿಸರು ಸಹಾ ಕರ್ನಾಟಕದ ಜನತೆ, ಅದರಲ್ಲೂ ಚಿತ್ರದುರ್ಗದ ಜನತೆ ತಮ್ಮ ಐತಿಹಾಸಿಕ ಪರಂಪರೆಯ ಅರಿವನ್ನುಂಟುಮಾಡಿ ಅವರಲ್ಲಿ ಅಭಿಮಾನವನ್ನೂ ದೇಶಪ್ರೇಮವನ್ನೂ ಮೂಡಿಸಲು ಮುಂದಾದರು... ಮೇಲುನೋಟಕ್ಕೆ ಶ್ರೀನಿವಾಸ ಜೋಯಿಸರ ಬರವಣಿಗೆಯಲ್ಲಿ ಅತಿ ಸರಳೀಕರಣ, ಉತ್ಪ್ರೇಕ್ಷೆ, ಅನಗತ್ಯ ವಿವರಣೆ ಕಂಡುಬಂದಂತೆ ತೋರಿದರೂ ಅವರ ಲೇಖನಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿದಾಗ, ಕರ್ನಾಟಕದ ಇತಿಹಾಸಕ್ಕೆ ಅವರು ಮಹತ್ತ್ವಪೂರ್ಣ ಕೊಡುಗೆಯನ್ನು ನೀಡಿದ್ದಾರೆಂಬುದು ವೇದ್ಯವಾಗುತ್ತದೆ... ಅವರ ಲೇಖನಗಳನ್ನು ಆಸಕ್ತಿಯಿಂದ ಅಭ್ಯಾಸ ಮಾಡುತ್ತಾ ಹೋದಾಗ ಅವರ ನಾಡು - ನುಡಿಗಳ ಮೇಲಿನ ಆಸಕ್ತಿ - ಅಭಿಮಾನಗಳಿಗಾಗಿ ಗೌರವ ಮೂಡುವಂತೆಯೇ ಅವರ ಸಂಶೋಧನಾ ಸಾಮರ್ಥ್ಯವನ್ನು ಕಂಡು ದಿಗ್ಭ್ರಮೆಯಾಗುತ್ತದೆ''.

ಜೋಯಿಸರ ಹಲವು ಲೇಖನಗಳು ಕಥನ ಶೈಲಿಯ (ಲ್ಲಿರುವುದರ) ಬಗ್ಗೆ ಟೀಕೆಯ

ಧ್ವನಿಗಳು ಬಂದಂತೆ ಪ್ರಶಂಸೆಯ ನುಡಿಗಳೂ ಅವುಗಳೊಟ್ಟಿಗೆ ಬಂದಿರುವುದುಂಟು. ಕೆಲವು ಚಾರಿತ್ರಿಕ ವ್ಯಕ್ತಿಗಳನ್ನು ಕುರಿತ ಜೋಯಿಸರ ನಿರೂಪಣೆ ಅತಿರಂಜಿತವೆಂಬಂತೆ ಕೆಲವರಿಗೆ ಕಂಡರೆ, ಮತ್ತೆ ಕೆಲವರಿಗೆ '' ಸ್ವಾತಂತ್ರ್ಯ ಪೂರ್ವದಲ್ಲಿ ಈ ವೈಭವೀಕರಣ ಅಂದಿನ ಅಗತ್ಯವಾಗಿತ್ತು. '' ಎನ್ನಿಸಿದೆ. ಇದಲ್ಲದೆ ಜೋಯಿಸರು '' ತಮ್ಮ ಅಧ್ಯಯನದಲ್ಲಿ ಒಂದೊಂದು ಸಾರಿ ಪೂರ್ವಭಾವಿಯಾಗಿ ಏನೋ ಒಂದನ್ನು ತೀರ್ಮಾನ ಮಾಡಿಕೊಂಡು ಆ ತೀರ್ಮಾನಕ್ಕೆ ಅನುಗುಣವಾಗಿ ವಿಷಯಗಳನ್ನೆಲ್ಲಾ ಸಂಗ್ರಹಿಸುತ್ತಿದ್ದುದುಂಟು. ಆದರೆ ಅವರ ವಿಷಯ ಸಂಗ್ರಹಣೆ ಮಾತ್ರ ನಾವು ಮೆಚ್ಚಬೇಕಾದದ್ದೆ. ಉತ್ಸಾಹದಿಂದ ಒಂದೊಂದು ಸಾರಿ ಅವರ ತೀರ್ಮಾನಗಳಲ್ಲಿ ಸ್ವಲ್ಪ ಹೆಚ್ಚು ಕಡಮೆ ಆಗಬಹುದಿತ್ತು. ಅದೇನೂ ಅಷ್ಟು ಗಮನಾರ್ಹವಾದುದಲ್ಲ. ಆದರೆ ಅವರ ಸಂಶೋಧನ ಪ್ರವೃತ್ತಿಯನ್ನು ಮಾತ್ರ ಯಾರೂ ಪ್ರಶ್ನೆ ಮಾಡುವ ಹಾಗಿರಲಿಲ್ಲ''.

ಹೀಗೆ ಜೋಯಿಸರ ಬರವಣಿಗೆಯನ್ನು ಕುರಿತು ನಾನಾ ಬಗೆಯ ಅಭಿಪ್ರಾಯಗಳು ಬಂದಿವೆ. ಕಾಲಕ್ರಮೇಣ ಇತಿಹಾಸ ಸಂಶೋಧನ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆಯಾಗಿದ್ದು, ಅವರ ಲೇಖನಗಳಲ್ಲಿ ನಿರ್ಣಯಗಳಲ್ಲಿ ನಿರೂಪಣ ಶೈಲಿಯಲ್ಲಿ ಈ ಕಾಲದವರಿಗೆ ಖಂಡಿತವಾಗಿ ಕೊರತೆಗಳು ಮತ್ತು ದೋಷಗಳು ಕಾಣುವುದು ಸಹಜ. ಆದರೆ, ಆ ಕಾಲಕ್ಕೆ ಅವರು ಮಾಡಿದ ಕೆಲಸ ಮಹತ್ತರವಾದುದೆಂಬುದರಲ್ಲಿ ಎರಡು ಮಾತಿಲ್ಲ. ಸಂಶೋಧನ ಕ್ಷೇತ್ರದಲ್ಲಿ ಕೆಲಸಮಾಡುವವರು, ಅದರಲ್ಲೂ ಚಿತ್ರದುರ್ಗ ಕುರಿತು ಸಂಶೋಧನೆ ನಡೆಸುವವರು, ಅವರ ಸಂಶೋಧನೆಯನ್ನೂ ಅಭಿಪ್ರಾಯಗಳನ್ನೂ ಗಮನಿಸದೆ ಮುಂದೆ ಹೋಗುವಂತೆಯೇ ಇಲ್ಲ. ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸ ಕುರಿತಂತೆ ಅವರು ಒಟ್ಟಾರೆ ನಡೆಸಿರುವ ಸಂಶೋಧನೆ ಎಷ್ಟು ವೈವಿಧ್ಯಮಯವಾದದ್ದು ಮತ್ತು ವ್ಯಾಪಕವಾದದ್ದು ಎಂಬುದನ್ನು ಮತ್ತೆ ವಿವರಿಸಬೇಕಾದ ಅಗತ್ಯ ಕಾಣುವುದಿಲ್ಲ.

■ ■

# ಅನುಬಂಧ

## ಜೋಯಿಸರು ಬರೆದ ಲೇಖನಗಳ ಸೂಚಿ

### ಕನ್ನಡದಲ್ಲಿ ಬರೆದ ಲೇಖನಗಳು

| ಲೇಖನ ಶೀರ್ಷಿಕೆ | ಪತ್ರಿಕೆ/ಸಂಚಿಕೆ | ಪ್ರಕಟಣೆಯ ವರ್ಷ |
|---|---|---|
| • ಅನಂತಪುರ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಅರಕಲಗೂಡು ( ,, ) | ಹಾಸನದ ೪೦ನೆಯ ದನಗಳ ಪ್ರದರ್ಶನದ ಕೈಪಿಡಿ | ೧೯೫೩. |
| • ಅರಕೆರೆ ತಾಮ್ರ ಶಾಸನ | ಶರಣ ಸಾಹಿತ್ಯ | ೧೯೫೨ |
| • ಅರವತ್ತು ಮೂರು ಪುರಾತನರು (ಈ ಲೇಖನಕ್ಕೆ ಟಿಪ್ಪಣಿ: ಹು. ಶ್ರೀ ಪಾಂಡುರಂಗ ಜೋಯಿಸ್) | ಸತ್ಯಶುದ್ಧ ಕಾಯಕ ೩:೩-೪ | ಮಾರ್ಚ್ - ಆಗಸ್ಟ್ ೧೯೬೩. |
| • ಅಶ್ವಪಥದ ಸಂಶಯ ನಿವಾರಣೆ | ಜಯಕರ್ನಾಟಕ | ಮೇ ೧೯೫೧ |
| • ಅಸಗೋಡು (ಊರ ಹೆಸರಿನಲ್ಲೇನಿದೆ?) | ಕನ್ನಡ ನುಡಿ | ೧೯-೯-೧೯೪೨ |
| • ಆಂಗಡಿ (ಕನ್ನಡ ನಾಡಿನ ಊರುಗಳು) | ಹಾಸನದ ೪೦ನೆಯ ದನಗಳ ಪ್ರದರ್ಶನದ ಕೈಪಿಡಿ | ೧೯೫೩. |
| • ಆದವಾನಿ ಆಲೂರುಗಳು | ಶರಣ ಸಾಹಿತ್ಯ | ಅಕ್ಟೋ - ನವೆಂ. ೧೯೫೪ |
| • ಆರ್ಕಾಟು (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಇತಿಹಾಸದ ಇಣುಕುನೋಟ | ಜೀವನ | ಮಾ. ೧೯೫೧ - ಏ. ೧೯೫೩ |
| • ಇಂಗಳದ ಹಾಳು (ಊರ ಹೆಸರಿನಲ್ಲೇನಿದೆ?) | ಕನ್ನಡ ನುಡಿ | ೪-೭-೧೯೪೨ |
| • ಉಚ್ಚಂಗಿ ಗಿರಿನಾಥ | ಜಯಕರ್ನಾಟಕ | ಏಪ್ರಿಲ್ ೧೯೬೪ |
| • ಉಚ್ಚಂಗಿದುರ್ಗದ ಎರಡು ಗಂಟೆ | | |

| | | |
|---|---|---|
| ಶಾಸನಗಳು | ಸತ್ಯಶುದ್ಧ ಕಾಯಕ | ಸೆಪ್ಟೆಂ. ೧೯೯೩. |
| (ಇದಕ್ಕೆ ಟಿಪ್ಪಣಿ:ಬಿ. ರಾಜಶೇಖರಪ್ಪ) | ೪:೧-೪ | ಆಗಸ್ಟ್ ೧೯೯೪ |
| ● ಉಜ್ಜಯಿನಿ | ಸುಬೋಧ | ಮೇ೧೯೫೨ |
| ● ಉತ್ಸವಾಂಬಾ ದೇವಾಲಯ | ನವೋದಯ | ೧೦-೪-೧೯೫೧ |
| ● ಉಪ್ಪಾರ ತಿಮ್ಮಣ್ಣ | ಸುಬೋಧ | ಫೆಬ್ರ. ೧೯೪೧ |
| ● ಎಮ್ಮೆ ಬಸವನ ಕಾಲಜ್ಞಾನ | ಶರಣ ಸಾಹಿತ್ಯ | ೧೯೪೮ |
| ● ಎರಡಾಣೆ | ? | ? |
| ● ಎ.ಪಿ.ಸಿ.ಸಿ. ನಡೆವ ರಮ್ಯ ಸ್ಥಳ | | |
| ವಾಣೀವಿಲಾಸ ಸಾಗರ (ಪರಿಚಯ) | ಚೇತನಾ | ೧೯-೪-೧೯೫೧ |
| ● ಏಳುಸುತ್ತಿನ ಕೋಟೆ | ಜಯಂತಿ | ಮಾರ್ಚ್ ೧೯೪೦ |
| ● ಐತಿಹಾಸಿಕ ಪತ್ರ ವ್ಯವಹಾರಗಳು | ಕನ್ನಡ ನುಡಿ | ಜೂನ್,ಸೆಪ್ಟೆ ೧೯೫೧ |
| ● ಕದಂಬ ಮಯೂರಶರ್ಮನು | | |
| ಚಂದ್ರಹಾಸನೇ? | ಜಯಕರ್ನಾಟಕ | ಮಾರ್ಚ್ ೧೯೩೪ |
| ● ಕದಂಬರಾಜ್ಯ ವಿಸ್ತಾರ | ಕರ್ಮವೀರ | ೧೯೫೬ |
| ● '' | ಶರಣಸಾಹಿತ್ಯ | ೧೯೫೬ |
| ● ಕನ್ನಡ ನಾಡಿನ ಗುರುಕುಲಗಳು | ಕೊಡಗು ಏಕೀಕರಣ ಸಂಚಿಕೆ | ೨-೧೧-೧೯೫೬ |
| ● ಕನ್ನಡ ನಾಡಿನ ಜೋಹರು | ಸರಸ್ವತಿ | ? |
| ● ಕವಿ ಕೋನಪ್ಪ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ಮಾರ್ಚ್ ೧೯೪೫ |
| ● ಕವಿಜಾಣ ಗಂಗಯ್ಯ | ವಾಗ್ಭೂಷಣ | ? |
| ● ಕರ್ನಾಟಕ ಸಾಮ್ರಾಜ್ಯ | ಸುಬೋಧ | ಜನವರಿ ೧೯೬೫ |
| ● ಕಲಿಯುಗ ಇತಿಹಾಸ ಸಂಪುಟ | ಶರಣ ಸಾಹಿತ್ಯ | ೧೯೫೧-೫೨ |
| ● ಕಾದಂಬರಿಯ ಶ್ರೀಕವಿನಾಗವರ್ಮ | ಕನ್ನಡ ನುಡಿ | ನವೆಂ. ೧೯೫೧ |
| ● ಕಾಮದೇವನ ಈ ಜಗತ್ತು | ಚಿತ್ರಗುಪ್ತ | ೧೯೫೩ |
| ● ಕಾರಿಕಾಲಮ್ಮೆ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ಜೂನ್೧೯೪೬ |
| ● ಕಾಲಕಾಚಾರ್ಯ ಕಥೆ | ಸುಬೋಧ | ಅಕ್ಟೋ.. ೧೯೫೨ |
| ● ಕಾಶಿಯಲ್ಲಿ ಕರ್ಣಾಟಕ ಧರ್ಮಗಳು | ಶರಣ ಸಾಹಿತ್ಯ | ನವೆಂ. ೧೯೫೨ |
| ● ಕುಮಾರರಾಮನ ಕಥೆ | ಸುಬೋಧ | ಅಕ್ಟೋ. ೧೯೪೦ |
| ● ಕುಮಾರರಾಮನ ಸಾಹಸಗಳು | ಜಯಕರ್ನಾಟಕ | ಫೆಬ್ರವರಿ ೧೯೪೫? |
| ● ಕುಮಾರರಾಮನ ಸಾಂಗತ್ಯ | ಶರಣಸಾಹಿತ್ಯ | ಜನವರಿ ೧೯೪೫ |
| ● ಕುಮಾರರಾಮನ ಸಾಂಗತ್ಯಗಳು | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ಜೂನ್ ೧೯೪೧ |
| ● ಕುಂತಲ ನಾಡು | | |
| (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| ● ಕೋರ್ಟಿನಲ್ಲಿ ಪ್ರಶ್ನೋತ್ತರಗಳು | | |
| (ಹಾಸ್ಯ ಲೇಖನ) | ? | ? |
| ● ಗಂಡುಗಲಿ ಕುಮಾರ ರಾಮ | ಕರ್ಮವೀರ | ೨೩-೨-೧೯೪೨ |

| | | |
|---|---|---|
| ● ಗಾಯತ್ರಿ ಜಲಾಶಯದ ಪೂರ್ವೇತಿಹಾಸ | ನವೋದಯ | ೨೪-೭-೧೯೪೯ |
| ● ಗಿಳಿರಾಮ | ಸುಭೋಧ | ? |
| ● ಗುತ್ತಲ ಅರಸರು | ಶರಣ ಸಾಹಿತ್ಯ | ? |
| ● ಗುದಗುತ್ತಿಯ ಪೌರುಷ | ಬೆಳಕು | ೨೫-೫-೧೯೪೭ |
| ● ಗುಂಟನೂರು (ಊರ ಹೆಸರಿನಲ್ಲೇನಿದೆ) | ಕನ್ನಡ ನುಡಿ | ೧೯೪೮ |
| ● ಗೊಮ್ಮಟೇಶ್ವರ ಪ್ರತಿಷ್ಠಾಪನೆಯ ಕಾಲ | ಚಿತ್ರಗುಪ್ತ | ೮-೩-೧೯೫೩ |
| ● ಘಟೋತ್ಕಚ | ಸುಬೋಧ | ಏಪ್ರಿಲ್ ೧೯೬೭ |
| ● ಚೆನ್ನಬಸವೇಶ್ವರನ ಕಾಲಜ್ಞಾನ | ಶರಣ ಸಾಹಿತ್ಯ | ೧೯೪೭ |
| ● ಚೆನ್ನರಾಯಪಟ್ಟಣ (ಕನ್ನಡ ನಾಡಿನ ಊರುಗಳು) | ಹಾಸನದ ೪೦ನೆಯ ದಿನಗಳ ಪ್ರದರ್ಶನದ ಕೈಪಿಡಿ | ೧೯೫೩ |
| ● ಚರಿತ್ರಪುರ ಚಿತ್ರದುರ್ಗ | ಕನ್ನಡ ಗುಡಿ (ಮಾಸಿಕ) | ಡಿಸೆಂಬರ್ ೧೯೫೪ |
| ● ಚಂದ್ರಭೀಮ ಕವಿ | ವಾಗ್ಭೂಷಣ | ಜುಲೈ ೧೯೪೭ |
| ● ಚಂದ್ರವಳ್ಳಿ ನಾಣ್ಯಗಳು | ಚಿತ್ರಗುಪ್ತ | ೨೭-೫-೧೯೫೭ |
| ● ಚಾಣಕ್ಯ ಋಷಿ | ಸುಬೋಧ | ಫೆಬ್ರ. ೧೯೪೯ |
| ● ಚಾಲುಕ್ಯ ಅಭಿನವಾದಿತ್ಯನ ನಲ್ಕುಂದ ಗ್ರಾಮದಾನ ಶಾಸನ | ಶರಣ ಸಾಹಿತ್ಯ | ? |
| ● ಚಿತ್ರದುರ್ಗ | ಅನೇ ಮೈಸೂರು ಸ್ಕೌಟ್ ರ‍್ಯಾಲಿಯ ಸಂಚಿಕೆ | ೧೯೬೮ |
| ● ಚಿತ್ರದುರ್ಗ | ತಾಯಿನಾಡು | ? |
| ● ಚಿತ್ರದುರ್ಗ (ಊರ ಹೆಸರಿನಲ್ಲೇನಿದೆ?) | ಕನ್ನಡ ನುಡಿ | ೧೯೪೬ |
| ● ಚಿತ್ರದುರ್ಗ ಜಿಲ್ಲೆಯಲ್ಲಿ ಬೌದ್ಧ ಧರ್ಮದ ಕುರುಹುಗಳು | ಶರಣ ಸಾಹಿತ್ಯ | ? |
| ● ಚಿತ್ರದುರ್ಗದ ಇತಿಹಾಸ | ಜಯಕರ್ನಾಟಕ | ಆಗಸ್ಟ್, ಅಕ್ಟೋ.. ೧೯೨೮ |
| ● ಚಿತ್ರದುರ್ಗದ ಏಳುಸುತ್ತಿನ ಕೋಟೆ | ಪ್ರಜಾಮತ | ೧೯೫೪ |
| ● ಚಿತ್ರದುರ್ಗದ ಚಿತ್ರಗಳು | ? | ? |
| ● ಚಿತ್ರದುರ್ಗದ ಮಾತನಾಡುವ ಕಲ್ಲುಗಳು | ವಿಚಾರ ವಾಹಿನಿ | ಜೂನ್ ೧೯೪೦ |
| ● ಚಿತ್ರದುರ್ಗದ ಮಾತನಾಡುವ ಕಲ್ಲುಗಳು | ಸುಬೋಧ | ಡಿಸೆಂ. ೧೯೪೦<br>ಸೆಪ್ಟೆಂಬರ್ ೧೯೪೩ |
| ● ಚಿತ್ರದುರ್ಗದ ಪತನ | ಶರಣ ಸಾಹಿತ್ಯ, ೧೬:೬ | ಜೂನ್ ೧೯೫೩ |
| ● ಚಿತ್ರದುರ್ಗದ ಪತನಾನಂತರ | ಶರಣ ಸಾಹಿತ್ಯ | ? |
| ● ಚಿತ್ರದುರ್ಗದ ಸಂಕ್ಷಿಪ್ತ ಇತಿಹಾಸ | ಸತ್ಯವಾಣಿ | ಸೆಪ್ಟೆಂಬರ್ ೨೧, ಡಿಸೆಂ. ೨೧, ೧೯೬೭; ಜನವರಿ ೪, ೧೯೬೭ |

| | | |
|---|---|---|
| • ಚಿತ್ರದುರ್ಗವೇ ಚಂದ್ರಹಾಸನ ಊರು | ಜಯಕರ್ನಾಟಕ | ೧೬-೫-೧೯೩೬ |
| • ಚಿನ್ಮೂಲಾದ್ರಿಯ ಅರಮನೆ ಗುರುಮನೆ | ಸ್ವತಂತ್ರಕರ್ಣಾಟಕ | ೧೬-೨-೧೯೪೯ |
| • '' | ಶರಣ ಸಾಹಿತ್ಯ | ೧೯೫೧-೫೨ |
| • ಚಿನ್ಮೂಲಾದ್ರಿಯ ದೇವಮಂದಿರಗಳು | ಜೀವನ | ಮೇ ೧೯೪೫ |
| • ಚಿನ್ಮೂಲಾದ್ರಿಯಲ್ಲಿ ವೀರಶೈವ ಧರ್ಮ ಕ್ರಾಂತಿ ಪುರುಷರು | ಜಯಕರ್ನಾಟಕ | ಜೂನ್ ೧೯೭೮ |
| • ಚಿನ್ಮೂಲಾದ್ರಿಯ ವೀರಶೈವ ಕವಿಗಳು | ಶರಣ ಸಾಹಿತ್ಯ | ೧೯೫೧-೫೨ |
| • ಜಕಣಾಚಾರಿ | ಸುಬೋಧ | ಏಪ್ರಿಲ್ ೧೯೫೧ |
| • ಜನ್ನಕವಿಯ ಯಶೋಧರ ಚರಿತ್ರೆ | ಪ್ರಜಾಮತ | ೧೯೫೧ |
| • ಜೈಮಿನಿ ಭಾರತದಲ್ಲಿ ಚಾರಿತ್ರಿಕ ಕಾಲದ ವಿಷಯಗಳು | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ೧೯೩೮ |
| • ತಲೆಬಾಳು | ಶರಣ ಸಾಹಿತ್ಯ, ೪:೩-೪ | ? |
| • ತಾಳಗುಂದ ವಿಶ್ವವಿದ್ಯಾನಿಲಯ | ಶರಣ ಸಾಹಿತ್ಯ | ಮೇ ೧೯೪೨ |
| • ದಿದ್ದಿಗೆ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೭ |
| • ದೀಪಾವಳಿಯು ರಾಷ್ಟ್ರೀಯ ಹಬ್ಬ | ಚಿತ್ರಗುಪ್ತ | ೧೯೫೩ |
| • ದುಗ್ಗಾಣಿ ಕಥೆ | ನವೋದಯ | ? |
| • ದೊರವಡಿ | ಪ್ರಬುದ್ಧ ಕರ್ಣಾಟಕ, ೨೫: | ೧೯೪೩ |
| • ಧ್ರುವ ದೇವಿ | ಛಾಯಾ | ? |
| • ನಗರ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ನಮ್ಮ ನಾಡ ದುರ್ಗಗಳು | 'Welcome to Bellary' Souvenir | ೧೯೫೨ |
| • ನಮ್ಮ ಪ್ರೌಢಶಾಲೆ (ಮುನ್ನುಡಿ) | Govt. High School for Boys, Chitaldrug, Calendar, 1954-55 | ೧೧-೯-೧೯೫೪ |
| • ನವಮಣಿಗಳು | ಸುಬೋಧ | ಸೆಪ್ಟೆಂ. ೧೯೫೩ |
| • ನಾಗಾರ್ಜುನ | ರಾಮರಾಜ್ಯ | ೧೯೫೫ |
| • ನಾಲಂದಾ | ಚಿತ್ರಗುಪ್ತ | ೧೯೫೪ (ದೀಪಾವಳಿ ಸಂಚಿಕೆ) |
| • ನೀಲಮ್ಮನ ಕಾಲಜ್ಞಾನ | ಶರಣ ಸಾಹಿತ್ಯ | ೧೯೪೮ |
| • ಪಾಳೆಯಗಾರರ ಕೋಲುಪದಗಳು | ಸುಬೋಧ | ಸೆಪ್ಟೆಂಬರ್ ೧೯೪೪ |
| • ಪಾಳೆಯಗಾರರ ಜನಪದಗೀತೆಗಳು | ಶರಣ ಸಾಹಿತ್ಯ | ಅಕ್ಟೋಬರ್ ೧೯೫೨ |
| • ಪಾಂಡ್ಯಾನ್ವಯ ಪ್ರತಾಪ | ವಿಶ್ವಕರ್ಣಾಟಕ | ೧೯೪೫ |
| • '' | ಶರಣ ಸಾಹಿತ್ಯ | ೧೯೪೯ |
| • ಪುವ್ವಲ ಅರಸರು | ಶರಣ ಸಾಹಿತ್ಯ, ೮:೪ | ಜೂನ್ ೧೯೪೫ |
| • ಪೂಜಾರಿಯ ಗುಡ್ಡೆ | ಸುಬೋಧ | ? |

| | | |
|---|---|---|
| • ಪೆದ್ದಕೋನೇಟಿ ನಾಯಕ | ಸುಬೋಧ | ಮೇ ೧೯೪೫ |
| • ಪ್ರಭುರಾಮಮಂಗಲದ ತಾಮ್ರಶಾಸನ | ಪ್ರಬುದ್ಧ ಕರ್ಣಾಟಕ | ೧೯೫೨ |
| • ಪ್ರಾಚೀನ ಕನ್ನಡ ನಾಡಿನ ಘನತೆ | ಪುಢಾರಿ (ಸ್ಪೆಷಲ್) | ಜನವರಿ ೨೬, ? |
| • ಪ್ರಾಚೀನ ಶಿಲ್ಪದ ಶೋಧನೆ | ಶರಣ ಸಾಹಿತ್ಯ | ೧೯೫೦ |
| • ಪ್ರಾಚೀನ ಸಂಸ್ಕೃತಿಯ ಮಹಾಪರ್ವ ದೀಪಾವಳಿ ಉಗಮ | ? | ? |
| • ಬಸವನ ತೂಕ್ಕ ಪೀಠ | ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆಯ ಸಾಹಿತ್ಯ ಸಮಿತಿ ಪತ್ರಿಕೆ, ೪:೨ | ೧೯೪೪ |
| • ಬಳ್ಳಾರಿ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಬಳ್ಳಾರಿ ದೇವಿಗೆ ಸ್ವಾಗತ | ತಾಯಿನಾಡು(?) | ? |
| • ಬಳ್ಳಾರಿಯ ಐತಿಹಾಸಿಕ ಪ್ರಾಮುಖ್ಯತೆ | ಗ್ರಾಮಾಭ್ಯುದಯ ಮತ್ತು ಸಹಕಾರ | ೧೯೫೩ |
| • ” | ಚಿತ್ರಗುಪ್ತ | ೧೯೫೩ |
| • ಬಾಣಾವರ (ಕನ್ನಡ ನಾಡಿನ ಊರುಗಳು) | ಹಾಸನದ ಶಿಂನೆಯ ದನಗಳ ಪ್ರದರ್ಶನದ ಕೈಪಿಡಿ | ೧೯೫೩ |
| • ಬಾದುರಖಾನ | ಜಯಕರ್ನಾಟಕ | ಏಪ್ರಿಲ್ ೧೯೪೦ |
| • ಬಾಲಕುಮಾರರಾಮನ ಸಾಂಗತ್ಯ | ಶರಣ ಸಾಹಿತ್ಯ, ೬:೨ | ಏಪ್ರಿಲ್ ೧೯೪೪ |
| • ಬಿಜ್ಜಗ ಶಿರಚ್ಛೇದಕ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ಜೂನ್ ೧೯೫೦ |
| • ಬೃಹತ್ಕಥ | ಜನಮತ | ೨೬-೨-೧೯೪೯ |
| • ” | ಕನ್ನಡ ನುಡಿ | ೨೨-೪-೧೯೪೯ |
| • ಬೃಹನ್ಮಠ | ಶರಣ ಸಾಹಿತ್ಯ | ೧೯೫೦ |
| • ಭರಮಣ್ಣ | ಕಥಾಚಂದ್ರಿಕೆ | ? |
| • ಭರಮಣ್ಣ | ನವೋದಯ | ? |
| • ಭರಮಣ್ಣ | ಸತ್ಯವಾಣಿ | ೩೦-೧೧-೧೯೩೬ |
| • ಭರಮಣ್ಣ (ಗೋವಿನ ಹಾಡಿನ ಧಾಟಿಯಲ್ಲಿ ರಂಗಯ್ಯನವರಿಂದ ಬರೆಸಿದ ಪದ್ಯಕ್ಕೆ ಮುನ್ನುಡಿ) | ನಮ್ಮ ಪುಸ್ತಕ | ಮಾರ್ಚ್ ೧೯೩೮ |
| • ಭರಮಣ್ಣ ನಾಯಕನ ಸಮರ ವಿಜಯ | ಶರಣ ಸಾಹಿತ್ಯ | ೧೯೪೫ |
| • ಭಾಸ: ಒಂದು ಒಗಟು | ಪ್ರಬುದ್ಧ ಕರ್ಣಾಟಕ, ೩೩:೧ | ೧೯೫೧ |
| • ಭೇಟಿ ಉತ್ಸವ | ನವೋದಯ | ? |
| • ಭೈರಾದೇವಿ | ಸುಬೋಧ | ಮೇ ೧೯೫೧ |
| • ಮತ್ತೋಡು (ಊರ ಹೆಸರಿನಲ್ಲೇನಿದೆ?) | ನವೋದಯ | ೧೪-೧೦-೧೯೪೯ |
| • ಮದಕರಿ ರಾಜೇಂದ್ರ ದಂಡಕ | ಶರಣ ಸಾಹಿತ್ಯ | ಸೆಪ್ಟೆಂ - ಅಕ್ಟೋ. ೧೯೪೨ |
| • ಮದಕರಿ ರಾಜೇಂದ್ರ ದಂಡಕ | ನಲ್ನುಡಿ (ಚಿತ್ರದುರ್ಗದ | |

| | | |
|---|---|---|
| (ಕವಿಕಾವ್ಯ ಪರಿಚಯ) | ಕರ್ಣಾಟಕ ಸಂಘದ ಕೈ ಬರಹದ ತ್ರೈಮಾಸಿಕ | ೧೩-೩-೧೯೪೨ |
| ● ಮಧುರಾಪುರಿ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ಜೂನ್. ಡಿಸೆಂ. ೧೯೫೩ |
| ● ಮನೆಯೋ! ಮಠವೋ! | ಚಿತ್ರಗುಪ್ತ | ? |
| ● ಮಯೂರ | ಕೀರ್ತಿಕಿರಣ | ? |
| ● ಮಯೂರ ಶರ್ಮ | ಸುಬೋಧ | ? |
| ● ಮರುಳಸಿದ್ಧಕಾವ್ಯ ವಿಮರ್ಶೆ | ಶಿವಾನುಭವ, ೧೯:೧೨ | ಸೆಪ್ಟೆಂ. ೧೯೪೫ |
| ● ,, (ಮರುಮುದ್ರಣ) | ತರಳಬಾಳು ರಜತೋತ್ಸವ ಸಂಚಿಕೆ | ೧೯೬೬ |
| ● ಮಹದೇವ ಕವಿ | ಶರಣ ಸಾಹಿತ್ಯ | ೧೯೫೧-೫೨ |
| ● ಮಹಾಪುರುಷ ಮರುಳಸಿದ್ಧರ ದಿವ್ಯ ಜೀವನ | ತರಳಬಾಳು ಹುಣ್ಣಿಮೆ ವಿಶೇಷಾಂಕ | ? |
| ● ,, | ತಾಯಿನಾಡು | ? |
| ● ಮಹಾಲಿಂಗೇಂದ್ರ ವಿಜಯ | ಶರಣಸಾಹಿತ್ಯ | ಏಪ್ರಿಲ್ ೧೯೫೧-೫೨ |
| ● ಮಹಾಸತಿ | ಶರಣ ಸಾಹಿತ್ಯ | ೧೯೪೬ |
| ● ಮಹಾಸತಿ ವೀರಮಲ್ಲಮ್ಮ | ಸುಬೋಧ | ಏಪ್ರಿಲ್ ೧೯೫೨ |
| ● ಮಹಾಸತಿ ವೀರಮಲ್ಲಿ | ಸುಬೋಧ | ಮೇ ೧೯೫೩ |
| ● ಮಂತ್ರಾಲಯ - ಐತಿಹಾಸಿಕ ವಿವೇಚನೆ | ವಿಜಯ | ೧೯೫೫ |
| ● ಮಾಯಕೊಂಡ (ಊರ ಹೆಸರಿನಲ್ಲೇನಿದೆ?) | ಕನ್ನಡ ನುಡಿ | ೧೩-೨-೧೯೪೭ |
| ● ಮಾಯಕೊಂಡದ ಮುತ್ತಿಗೆ | ಜಯಂತಿ | ೧೯೪೦ |
| ● ಮಾಯಿಕೊಂಡದ ಲಡಾಯಿ (ಜನಪದ ಗೀತೆ) | ಶರಣ ಸಾಹಿತ್ಯ | ೧೯೫೫-೫೬ |
| ● ಮಾಸೂರು ಮದಗದ ಮಡುವು | ಸದ್ಧರ್ಮ ದೀಪಿಕೆ | ೧೯೫೦ |
| ● ಮುಮ್ಮಡಿ ವೀರಬಲ್ಲಾಳ ದೇವರಾಯ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ೬೦:೧ | ಜೂನ್ ೧೯೭೫ |
| ● ಮೈಸೂರು ರಾಜ್ಯದಲ್ಲಿ ಚಾರಿತ್ರಿಕ ಸ್ಮಾರಕಗಳು ಮತ್ತು ಸಂಶೋಧನೆ | ಶರಣ ಸಾಹಿತ್ಯ | ೧೯೫೫ |
| ● ರಣಮೂರ್ಕ್ಸ್ರ ಕುಲ | ಸುಬೋಧ | ಫೆಬ್ರ. ೧೯೪೬ |
| ● ರತ್ನ ಸಿಂಹಾಸನ | ಸುಬೋಧ | ? |
| ● ರಸಾಸಿದ್ಧರು | ಶರಣ ಸಾಹಿತ್ಯ | ೧೯೫೪ |
| ● ರಾಮಗಿರ್ಯಾಶ್ರಮ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ೧೯೫೬ |
| ● ಲಕ್ಕಾಂಬೆಯ ವಿವಾಹ | ಕೀರ್ತಿಕಿರಣ | ? |
| ● ವಜ್ರಪಾಣಿ ವ್ರತೀಶ | ಪ್ರಜಾಮತ | ೧೯೫೨ |

| | | |
|---|---|---|
| • ವಿಕ್ರಮಾದಿತ್ಯ | ಸುಬೋಧ | ಮಾರ್ಚ್ ೧೯೫೨ |
| • ವಿಕ್ರಮಾದಿತ್ಯರು | ಸುಬೋಧ | ನವೆಂ. ೧೯೫೩ |
| • ವಿಕ್ರಮೋರ್ವಶೀಯ | ಜಯಕರ್ನಾಟಕ | ? |
| • ವಿಜಯಗಿರಿ | ಕನ್ನಡ ನುಡಿ | ೧೯೪೮ |
| • ವಿನಯಾದಿತ್ಯ ಹೊಯ್ಸಳ | ಹಾಸನದ ದನಗಳ ಮತ್ತು ವಸ್ತು ಪ್ರದರ್ಶನ ಕೈಪಿಡಿ | ೧೯೫೫ |
| • ವೀರ ಕನ್ನಡಗಿತ್ತಿ ಓಬವ್ವ | ಸರಸ್ವತಿ | ಮೇ ೧೯೫೨ |
| • ವೀರ ಮದಕರಿ ರಾಜೇಂದ್ರ ಚರಿತೆ | ಶರಣ ಸಾಹಿತ್ಯ | ? |
| • ವೀರಮಾತೆಯ ವೀರವಾಣಿ | ಕತೆಗಾರ | ? |
| • ವೀರರಮಣಿ ಓಬವ್ವ | ಸುಬೋಧ? | ನವೆಂ. ೧೯೫೩? |
| • ವೀರರಮಣಿ ಓಬವ್ವ (ಸಿ. ರಂಗಯ್ಯನವರಿಂದ ಬರೆಸಿದ 'ಜನಪದ ಗೀತೆ 'ಗೆ ಬರೆದ ಪೀಠಿಕೆ) | ಶರಣ ಸಾಹಿತ್ಯ ೧೩:೭ | ನವೆಂಬರ್ ೧೯೫೩ |
| • ಶಕಸ್ಥಾಪಕ ಶಾಲಿವಾಹನ | ಕತೆಗಾರ | ಡಿಸೆಂ. ೧೯೪೬ |
| • ಶಕಾರಿ ವಿಕ್ರಮಾದಿತ್ಯ | ಸುಬೋಧ | ಸೆಪ್ಟೆಂ. ನವೆಂ. ೧೯೫೪-೫೫ |
| • ಶತಾಯು ಕನ್ನಡಿಗರು | ಪ್ರತಿಭಾ | ಡಿಸೆಂ. ೧೯೫೬ |
| • ಶರಣ ಸಾಹಿತ್ಯದಲ್ಲಿ ನಡೆದಿರುವ ಇತಿಹಾಸ ಸಂಶೋಧನೆ | ಶರಣ ಸಾಹಿತ್ಯ ೧೩:೪ | ೧೯೫೦ |
| • ಶಾತವಾಹನರು | ರಾಮರಾಜ್ಯ | ೧-೧೨-೧೯೫೫ |
| • ಶಿವಪ್ಪನಾಯಕನ ಶಿಸ್ತು | ಪ್ರಜಾವಾಣಿ | ೬-೪-೧೯೫೪ |
| • ಶೂಲದ ಹಬ್ಬ | ಸದ್ಧರ್ಮ ದೀಪಿಕೆ | ೧೯೫೬ |
| • ಶೆಟ್ಟಿಯ ಕೆರೆ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯-೩-೧೯೪೮ |
| • ಶ್ರವಣ ಬೆಳಗೊಳಕ್ಕೆ ಬಂದ ಚಂದ್ರಗುಪ್ತನು ಯಾರು? | ಸಂಯುಕ್ತ ಕರ್ನಾಟಕ | ? |
| • ಶ್ರೀ ಉತ್ಸವಾಂಬಾ | ಪ್ರಬುದ್ಧ ಕರ್ಣಾಟಕ, ೩೭:೧ | ೧೯೫೬ |
| • ಶ್ರೀ ಉತ್ಸವಾಂಬೆಯ ಪ್ರಾರ್ಥನಾ ಪದ್ಯಗಳು | ಪ್ರಬುದ್ಧ ಕರ್ಣಾಟಕ ೩೫:೨ | ೧೯೫೬-೫೭ |
| • ಶ್ರೀ ಬೃಹನ್ಮಠ ಚಿತ್ರದುರ್ಗ | ಶರಣ ಸಾಹಿತ್ಯ | ೧೯೪೦ |
| • ಶ್ರೀ ರೇವಣಸಿದ್ಧೇಶ್ವರರೂ ಅವರ ಸಮಕಾಲೀನರೂ | ಶರಣ ಸಾಹಿತ್ಯ ೭:೧೧-೧೨ | ೧೯೪೯-೫೦ |
| • ಶ್ರೀ ಶಂಕರಾಚಾರ್ಯರ ಕಾಲ ನಿರ್ಣಯ | ಸಂಜಯ | ? |
| • ಶ್ರೀ ಶಾಸನ ಮಂಜರಿ | ಶರಣ ಸಾಹಿತ್ಯ ೧೫:೧೦ | ೧೯೫೬ |

| | | |
|---|---|---|
| • ಶ್ರೀ ಶಾಸನ ಮಂಜರಿ | ಶರಣ ಸಾಹಿತ್ಯ | ೧೯೫೬ |
| • ಶ್ರೀಪಾದ ಸ್ತೋತ್ರ (ಸಂಪಾದನೆ) | ಶರಣ ಸಾಹಿತ್ಯ, ೮:೯ | ನವೆಂಬರ್ ೧೯೪೫ |
| • ಷಹಜಿ ರಾಜನ ಸಮಾಧಿ | ಶರಣ ಸಾಹಿತ್ಯ | ೧೯೫೧-೫೨ |
| • ಷಾಜಿ ರಾಜನ ಸಮಾಧಿ | ಬೆಳಕು | ೩೧-೧೦-೧೯೫೩ |
| • ಸತ್ಯಸಂಕಲ್ಪ (ಕಥೆ) | ಕತೆಗಾರ | ಸೆಪ್ಟೆಂಬರ್ ೧೯೪೪ |
| • ಸತ್ಯಾಗ್ರಹಿ (ಕಥೆ) | ಕತೆಗಾರ | ? |
| • ಸವಣೂರು | ಕನ್ನಡ ನುಡಿ | ೧೯೪೮ |
| • ಸಳ | ಶ್ರದ್ಧಾಂಜಲಿ (ಗ್ರಂಥ) | ೧೯೫೬ |
| • ಸಂತೇಬೆನ್ನೂರು (ಕನ್ನಡ ನಾಡಿನ ಊರುಗಳು) | ಬೆಳಕು | ೧೯೪೬ |
| • ಸಿದ್ಧರಸ | ಸುಬೋಧ | ಫೆಬ್ರ೧೯೪೨ |
| • ಸಿರುಮನ ಚರಿತೆ | ಶರಣ ಸಾಹಿತ್ಯ | ೧೯೪೭ |
| • ಹಗಲು ಕಗ್ಗೊಲೆಯ ಮಾನ್ಯ | ವಿಶ್ವಕರ್ಣಾಟಕ | ೯-೪-೧೯೩೩ |
| • ಹಗಲು ಕಗ್ಗೊಲೆಯ ಮಾನ್ಯ (ಲಾಳಸಿಂಗಿ ಸೋಮಣ್ಣನವರಿಂದ ಬರೆಸಿದ ಸಾಂಗತ್ಯಕ್ಕೆ ಮುನ್ನುಡಿ) | ಸುಬೋಧ | ? |
| • ಹರಪನಹಳ್ಳಿ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಹಂಪೆಯ ದೇವರಾಜ | ಜೀವನ | ೪-೯-೧೯೪೧ |
| • ಹಾರುವ ಲಾರಿ - ಮಗ್ಗ (ಉಪನ್ಯಾಸ) | ಅರ್ಥಸಾಧಕ | ? |
| • ಹಿಡಿಂಬ ಹಿಡಿಂಬೆಯರು | ಸುಬೋಧ | ಆಗಸ್ಟ್ ೧೯೩೫ |
| • ಹಿರೇ ಮದಕರಿನಾಯಕನ ತಾರಾವಳಿ | ಶರಣ ಸಾಹಿತ್ಯ | ಮಾರ್ಚ್ ೧೯೪೬ |
| • ಹುಲಿ ಇರಿದ ವೀರ | ಪ್ರಜಾವಾಣಿ | ? |
| • ಹುಳಿಯಾರು (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಹುಳಿಯಾರು ವಿಜಯ | ವಿಚಾರ ವಾಹಿನಿ | ಸೆಪ್ಟೆಂ. ೧೯೪೦ |
| • ಹುಂಬಚ (ಕನ್ನಡ ನಾಡಿನ ಊರುಗಳು) | ಕನ್ನಡ ನುಡಿ | ೧೯೪೮ |
| • ಹೇಮಕೂಟ | ಜ್ಯೋತಿ | ಡಿಸೆಂ. ೧೯೫೨ |
| • ಹೊನ್ನ ಮಳೆ | ಕನ್ನಡ ನುಡಿ | ೧೭-೧೨-೧೯೪೮ |
| • ಹೊನ್ನಿಯ ಸಿಡಿತಲೆ ಕಲ್ಲು | ಕನ್ನಡ ನುಡಿ | ೧೨-೩-೧೯೪೮ |
| • " | ಪ್ರಜಾವಾಣಿ | ೧೮-೯-೧೯೫೫ |
| • ಹೊಯ್ಸಳಾನ್ವಯ ಪ್ರತಾಪ | ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ | ೧೯೫೭? |
| • " | ಜ್ಯೋತಿ | ೧೯೫೭? |

## ಇಂಗ್ಲಿಷಿನಲ್ಲಿ ಬರೆದ ಲೇಖನಗಳು

| | | |
|---|---|---|
| • Baicheya Dannayaka (Notes) | Quarterly Journal of the Mythic Society | 1942 |
| • Hero-stone at Lokadolalu (") | " | 1942-43 |
| • Hero-stone at Matigatta (") | " | " |
| • Kodagi Inseription of Harati (Hr. 18) | " | " |
| • Kodagi Inscription of Yeraballi (Hr. 16) | " | " |
| • Kumara Rama | " | 1942 |
| • Sirumana Charite | " | Jan. Apr. 1948 |
| • Stone Inscription of Shanteshvara Basti at Holalkere (Notes) | " | 1942-43 |

## ಅನುವಾದಿಸಿದ ಲೇಖನ

| | | |
|---|---|---|
| • ನಾಗಾರ್ಜುನ : ಸಮಸ್ಯೆ (ಮೂಲ: ಡಾ|| ವಿ.ಡಬ್ಲ್ಯು. ಕರಂಬೇಲ್ಕರ್) | ಶರಣ ಸಾಹಿತ್ಯ | ೧೯೫೫-೫೬ |

## ಅನುವಾದಗೊಂಡ ಲೇಖನಗಳು

| | | |
|---|---|---|
| • ಕರ್ನಾಟಕ ವೀರವನಿತ ಓಬವ್ವ (ತೆಲುಗು) (ಅನು: ಡಿ.ಎನ್. ರಾಮರೆಡ್ಡಿ) | ತೆಲುಗು ತಲ್ಲಿ | ಮಾರ್ಚ್ ೧೯೬೮ |
| • ದು ಅನ್ನಿ (ಹಿಂದಿ) (ಅನು: ಹಿರಣ್ಮಯ) | ಹಿಂದೀಪ್ರಚಾರ್ ಸಮಾಚಾರ್ | ಫೆಬ್ರವರಿ ೧೯೭೧ |

## ಪುಸ್ತಕಗಳು

| | | |
|---|---|---|
| • ಕನ್ನಡ ಕಲಿ ಸಿರುಮನ ಚರಿತೆ | ಶರಣಸಾಹಿತ್ಯ ಕಾರ್ಯಾಲಯ ಬೆಂಗಳೂರು | ೧೯೫೧ |
| • ಇದೇ ಕೃತಿ 'ಸಿರುಮನೃಪಾಲ' ಎಂಬ ಹೆಸರಿನಿಂದ | ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ ಚಿತ್ರದುರ್ಗ | ೧೯೭೭ |
| • ಕರಿಭಂಟ | ಅಪ್ರಕಟಿತ | |

| | | |
|---|---|---|
| ● ಕಪೋತ ವಾಕ್ಯ | ವಯಸ್ಕರ ಶಿಕ್ಷಣ ಸಮಿತಿ ಮೈಸೂರು | ? |
| ● ಗಂಡುಗಲಿ ಕುಮಾರರಾಮ | ಮಿಂಚಿನಬಳ್ಳಿ ಪ್ರಕಾಶನ ಧಾರವಾಡ | ೧೯೪೧ |
| ● ಗಂಡುಗಲಿ ಕುಮಾರರಾಮ | ರಸಿಕರಂಜನಿ ಪ್ರಕಾಶನ ಅರಸೀಕೆರೆ | ೧೯೫೫ |
| ● ಚಿತ್ರದುರ್ಗದ ಚಿತ್ರಗಳು | ಮಯೂರ ಸಾಹಿತ್ಯ | ? |
| ● ಚಿತ್ರದುರ್ಗದ ಬಖೈರು (ಸಂಪಾದನೆ) | ತ.ವೆಂ. ಸ್ಮಾರಕ ಗ್ರಂಥ ಮಾಲೆ, ಮೈಸೂರು | ೧೯೬೮ |
| ● ನಾಡಕತೆಗಳು | ವಯಸ್ಕರ ಶಿಕ್ಷಣ ಸಮಿತಿ ಮೈಸೂರು | ? |
| ● ಮಯೂರ ಶರ್ಮ ಮತ್ತು ಇತರ ಕತೆಗಳು | ಮಯೂರ ಸಾಹಿತ್ಯ | ೧೯೪೪ |
| ● ಮರುಳಸಿದ್ಧ ಚರಿತ್ರೆ | ಅಪ್ರಕಟಿತ | |
| ● ಸಳ | ವಯಸ್ಕರ ಶಿಕ್ಷಣ ಸಮಿತಿ ಮೈಸೂರು | ? |
| ● ಹರಿಹರ ಕ್ಷೇತ್ರ | ಅಪ್ರಕಟಿತ | |
| ● ಹುಳಿಯಾರು ಮಾರಭೂಪಾಲ | ವಯಸ್ಕರ ಶಿಕ್ಷಣ ಸಮಿತಿ ಮೈಸೂರು | ? |
| ● ಐತಿಹಾಸಿಕ ಲೇಖನಗಳು (ಸಂ: ಲಕ್ಷ್ಮಣ್ ತೆಲಗಾವಿ ಮತ್ತು ಡಾ.ಎಂ.ವಿ. ಶ್ರೀನಿವಾಸ್) | ಹು.ಶ್ರೀ.ಜೋ. ಗ್ರಂಥ ಪ್ರಕಟಣ ಸಮಿತಿ ಚಿತ್ರದುರ್ಗ | ೧೯೭೭ |
| ● ಸಂಶೋಧನ ಲೇಖನಗಳು (ಸಂ: ಲಕ್ಷ್ಮಣ್ ತೆಲಗಾವಿ ಮತ್ತು ಮತ್ತು ಡಾ. ಎಂ.ವಿ. ಶ್ರೀನಿವಾಸ್) | " | ೧೯೯೫ |

# ಪರಾಮರ್ಶನ ಬರಹ

| | | |
|---|---|---|
| ● ಇತಿಹಾಸಕಾರ ಎಚ್.ವಿ. ವೀರನಾಯಕ ' ಹರತಿ ' | ಪ್ರೊ. ಲಕ್ಷ್ಮಣ್ ತೆಲಗಾವಿ | ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ ೨೦೦೪ |
| ● ಇತಿಹಾಸಕಾರ ಹುಲ್ಲೂರು ಶ್ರೀನಿವಾಸ | | 'ಸುದ್ದಿಗಿಡುಗ' |
| ● ಐತಿಹಾಸಿಕ ಲೇಖನಗಳು (ವಿಮರ್ಶೆ) | ಹರಿತಸ್ | ಕನ್ನಡ ಪ್ರಭ ೧೭-೧-೧೯೭೭ |
| ● ಐತಿಹಾಸಿಕ ಶೋಧ ಸಾಹಿತ್ಯ (ಹು.ಶ್ರೀ.ಜೋ.ಐ.ಲೇ. ಕುರಿತ ವಿಮರ್ಶೆ) | ಡಾ. ಎಚ್.ವಿ. ಶ್ರೀನಿವಾಸ ಮೂರ್ತಿ | ಸುಧಾ ೧೦-೭-೧೯೭೭ |
| ● ಜೋಯಿಸರು | ಕ.ಮು. ರವಿಶಂಕರ | ವಿಶೇಷಾಂಕ ಚಿತ್ರದುರ್ಗ ೧೯೯೪ |
| ● ಇತಿಹಾಸ ಸಂಶೋಧಕ ಕನ್ನಡದ ಉಜ್ವಲಾಭಿಮಾನಿ ಹುಲ್ಲೂರು ಶ್ರೀನಿವಾಸ ಜೋಯಿಸರು | ಲಕ್ಷ್ಮಣ್ ತೆಲಗಾವಿ | ' ಚಿತ್ರಕಲ್ಲು 'ಸ್ಮರಣ ಸಂಚಿಕೆ (ಚಿತ್ರದುರ್ಗ ೧೯೭೪ |
| ● ' ಇತಿಹಾಸ ಸಂಶೋಧನ ಪ್ರಸಕ್ತ ' ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರು | ಲಕ್ಷ್ಮಣ್ ತೆಲಗಾವಿ | 'ಚಿನ್ಮೂಲಾದ್ರಿ' ವಾರ್ಷಿಕ ಸಂಚಿಕೆ ೧೯೭೨ |
| ● ಕಣ್ಮರೆಯಾದ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು | ಎಂ.ಎಸ್.ಭಾರದ್ವಾಜ್ | ಚಿತ್ರಗುಪ್ತ ೧೫-೧೧-೧೯೫೬ |
| ● ಕಣ್ಮರೆಯಾದ ಹುಲ್ಲೂರು ಶ್ರೀನಿವಾಸ ಜೋಯಿಸರು | ? | ಕಸಾಪಪ ೪೧:೧-೨, ಜೂನ್-ಡಿ. ೧೯೫೬ |
| ● ಕನ್ನಡದ ಇತಿಹಾಸ ಸಂಶೋಧಕ ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸ್ | ತಾ.ಶ್ರೀ. ನಾಗರಾಜರಾಯ | ಕನ್ನಡದ ಧ್ರುವತಾರೆಗಳು (ಪುಸ್ತಕ) ೧೯೭೨ |
| ● ಕರ್ನಾಟಕದ ಇತಿಹಾಸಕಾರ ಹುಲ್ಲೂರು ಶ್ರೀನಿವಾಸ ಜೋಯಿಸರು | ? | ತಾಯಿನಾಡು ೮-೧೧-೧೯೬೬ |
| ● ಕುಮಾರ ರಾಮನ ಸಾಂಗತ್ಯಗಳು (ಮುನ್ನುಡಿ) | ಡಾ. ಜಿ. ವರದರಾಜರಾವ್ | ಮೈ ವಿ ವಿ ೧೯೬೬ |
| ● ಚಿತ್ರದುರ್ಗದ ಸಂಗ್ರಹಾಲಯ ಅಭಿವೃದ್ಧಿಯ ಹಾದಿಯಲ್ಲಿ | ಮಂಜುನಾಥ್ ಕರುವಿನಕಟ್ಟೆ | ಪ್ರಜಾವಾಣಿ ೧-೧-೧೯೯೪ |
| ● ಚಿತ್ರದುರ್ಗ ಹುಲ್ಲೂರು ಶ್ರೀನಿವಾಸ ಜೋಯಿಸರ ಜೀವನ ದರ್ಶನ | ಎಚ್. ಗೋವಿಂದರಾಜು ಕೆಳಗಳಹಟ್ಟಿ | ಕುಸುಮ ಪ್ರಕಾಶನ ಕೆಳಗಳಹಟ್ಟಿ, ೧೯೯೪ |

| | | |
|---|---|---|
| • ಚಿತ್ರದುರ್ಗದಷ್ಟೇ ಶಾಶ್ವತ ಹೆಸರು ಗಳಿಸಿದ ದಿ. ಹುಲ್ಲೂರು ಶ್ರೀನಿವಾಸ ಜೋಯಿಸರು | ? | ? |
| • ಚಿರಸ್ಮರಣೀಯ ಸಂಶೋಧಕ ಜೋಯಿಸರು | ಶಂಕರ, ಎಸ್. ಅಥಣಿ | ಸಂಯುಕ್ತ ಕರ್ನಾಟಕ ೫-೪-೧೯೯೦ |
| • ಜನಪ್ರಿಯ ಆಶುಕವಿ ಲಾವಣಿ ಮಂಜಣ್ಣ | ಹು.ಶ್ರೀ. ಪಾಂಡುರಂಗ ಜೋಯಿಸ್ | 'ಪ್ರಿಯ' ದೀಪಾವಳಿ ವಿಶೇಷಾಂಕ೧೯೮೮ |
| • ತರಾಸು ಕಂಡ ಹಿರಿಯರು, ಗೆಳೆಯರು | ನಾ. ಪ್ರಭಾಕರ್ | ಸ್ನೇಹಸಮನ್ವಯ |
| • ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರ ' ಗಂಡುಗಲಿ ಕುಮಾರರಾಮ ' | ಲಕ್ಷ್ಮಣ್ ತೆಲಗಾವಿ | ' ವಾಲ್ಮೀಕಿ ' ಸ್ಮರಣ ಸಂಚಿಕೆ೧೯೭೭ |
| • ದಿ॥ ಹುಲ್ಲೂರು ಶ್ರೀನಿವಾಸ ಜೋಯ್ಸರು (ಸಂಸ್ಮರಣೆ) | ಮ. ಶ್ರೀಧರ ಮೂರ್ತಿ | ಪ್ರಜಾವಾಣಿ ೧-೧೧-೧೯೬೬ |
| • ದಿ॥ ಹುಲ್ಲೂರು ಶ್ರೀನಿವಾಸ ಜೋಯಿಸರು ಹಾಗೂ ಚಿತ್ರದುರ್ಗದ ಇತಿಹಾಸ | ಶ್ರೀ ಸುತ | 'ಪ್ರಿಯ' ದೀಪಾವಳಿ ವಿಶೇಷಾಂಕ ಚಿತ್ರದುರ್ಗ ೧೯೭೫ |
| • ನನ್ನ ತಂದೆ ಹುಲ್ಲೂರು ಶ್ರೀನಿವಾಸ ಜೋಯಿಸರು | ಹುಲ್ಲೂರು ಪಾಂಡುರಂಗ ಜೋಯಿಸ್ | ತುಷಾರ ಜನವರಿ. ೧೯೯೩ |
| • ನಿಷ್ಕಾಮ ಕರ್ಮಯೋಗಿ ವಿನಯಪರ ವಿದ್ವಾಂಸ | ಡಾ॥ ಎಂ.ವಿ. ಶ್ರೀನಿವಾಸ್ | ಸಂಯುಕ್ತ ಕರ್ನಾಟಕ |
| • ,, | ,, | ದಾವಣಗೆರೆ ನಗರವಾಣಿ ೨೬-೮-೧೯೭೭ |
| • ಪ್ರೇಕ್ಷಣೀಯ ಪ್ರಾಚ್ಯವಸ್ತು ಸಂಗ್ರಹಾಲಯ | ಕೆ. ವೆಂಕಣ್ಣಾಚಾರ್ | ? |
| • ಬಹುಗ್ರಹಿಕೆಯ ಸಂಸ್ಕೃತಿ ಕೇಂದ್ರಿತ ನೋಟ (ಹು.ಶ್ರೀ.ಜೋ.ಸಂ.ಲೇ. ಕುರಿತ ವಿಮರ್ಶೆ) | ಮಲ್ಲೇಪುರಂ ಜಿ. ವೆಂಕಟೇಶ | ಕನ್ನಡ ಪ್ರಭ ೧೩-೧೦-೧೯೯೬ |
| • ಪೈಲ್ವಾನ್ ವಸಂತರಾವ್ ನೆನಪುಗಳು (ಲೇಖನ)(' ಮನದಾಳದ ಕನಸುಗಳು ' ಸಂಪುಟದಲ್ಲಿ) | ಟಿ. ಆರ್. ರಾಧಾಕೃಷ್ಣ | ಬೆಂಗಳೂರು ೨೦೦೧ |
| • ಮರೆಯಬಾರದ ಆದರೆ ಮರೆತು ಹೋಗುತ್ತಿರುವ ಇತಿಹಾಸಕಾರ ಹುಲ್ಲೂರು ಶ್ರೀನಿವಾಸ ಜೋಯಿಸರು | ವಿ.ಎಚ್. ದೇಸಾಯಿ | ಸಂಯುಕ್ತ ಕರ್ನಾಟಕ ೮-೧೧-೧೯೬೬ |
| • ಶ್ರೀ ಹುಲ್ಲೂರು ಶ್ರೀನಿವಾಸ | ಕನ್ನಡ ಮೂಲ: ಮ. | |

| | | |
|---|---|---|
| ಜೋಯಿಸ್ ಜೀ ಕೀ ಪುಣ್ಯಸ್ಮೃತಿ (ಹಿಂದಿ) | ಶ್ರೀಧರ ಮೂರ್ತಿ<br>ಹಿಂದಿಗೆ: ಪ್ರತಾಪ್ | ಹಿಂದಿವಾಣಿ<br>೧೯೫೭ |
| • ಶ್ರೀ ಹುಲ್ಲೂರು ಶ್ರೀನಿವಾಸ ಜೋಯಿಸರು (ಮುಂಬೆಳಕಿನಲ್ಲಿ - ೧) | ತರಾಸು | ಸರ್ವೋದಯ<br>೨೦-೧೧-೧೯೪೭ |
| • ಸಂಶೋಧಕರ ಸಂಸ್ಮರಣೆ | ತಾ.ಶ್ರೀ. ನಾಗರಾಜರಾಯ | ವಿಪ್ರನುಡಿ<br>ಸೆಪ್ಟೆಂಬರ್ ೧೯೯೮ |
| • ಸಿರಮನ್ನಪಾಲ (ವಿಮರ್ಶೆ) | ಮ. ಶ್ರೀಧರ ಮೂರ್ತಿ | ಪ್ರಜಾವಾಣಿ |
| • 'ಸಿರಮನ್ನಪಾಲ' ಉತ್ತಮ ಕೃತಿ (ವಿಮರ್ಶೆ) | ಎನ್.ಆರ್.ವಿ. ಮೂರ್ತಿ | ? |
| • ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುಲ್ಲೂರು ಶ್ರೀನಿವಾಸ ಜೋಯಿಸರು | ಕೆಳಗಳಹಟ್ಟಿ<br>ಎಚ್. ಗೋವಿಂದರಾಜು | ವಿಜಯಕರ್ನಾಟಕ<br>೧೫-೮-೨೦೦೪ |
| • ಸ್ನೇಹ ಸಮನ್ವಯ: ತರಾಸು | ಸಂ: ನಾ. ಪ್ರಭಾಕರ್ | ತರಾಸು ಪ್ರತಿಷ್ಠಾನ<br>ಮೈಸೂರು |
| • ಹರ್ತಿಕೋಟೆಯ ನೆನಪುಗಳು ಹಾಗೂ ವೀರನಾಯಕರು | ಟಿ.ಆರ್. ತಿಪ್ಪೇಸ್ವಾಮಿ | 'ಹರತಿ ಸಿರಿ' ಸಂಪುಟ<br>ಹರ್ತಿಕೋಟೆ ೨೦೦೪ |
| • ಹುಲ್ಲೂರು ಜೋಯಿಸರು | ಟಿ. ಎಸ್. ಸಂಜೀವಮ್ಮ | ಕರ್ಮವೀರ<br>೧೯-೧೧-೨೦೦೬ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು (ಪರಿಶೀಲನ) | ಬಿ. ರಾಜಶೇಖರಪ್ಪ | ಕನ್ನಡ ನುಡಿ<br>೧೬-೫-೧೯೭೮ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು (ವಿಮರ್ಶೆ) | ಬಿ.ಎಲ್. ವೇಣು | ಕನ್ನಡ ನುಡಿ<br>? |
| • ಹುಲ್ಲೂರು ಶ್ರೀನಿವಾಸ ಜೋಯಿಸರು | ಬಿ.ವಿ. ವೈಕುಂಠರಾಜು | ಪ್ರಜಾವಾಣಿ<br>೨೬-೮-೧೯೭೬ |
| • ಹುಲ್ಲೂರು ಶ್ರೀನಿವಾಸ ಜೋಯಿಸರು | ಬಿ. ರಾಜಶೇಖರಪ್ಪ | ನಿರಂತರ ೨೦೦೧ |
| • ಹುಲ್ಲೂರು ಶ್ರೀನಿವಾಸ ಜೋಯಿಸರು ಡಾ॥ ಜಿ. ವರದರಾಜರಾಯರು ಕಂಡಂತೆ | ಲಕ್ಷ್ಮಣ್ ತೆಲಗಾವಿ | ಸತ್ಯಶುದ್ಧ ಕಾಯಕ<br>ಸೆಪ್ಟೆಂ. ೧೯೯೩<br>ಆಗಸ್ಟ್ ೧೯೯೪ |
| • ಹುಲ್ಲೂರು ಶ್ರೀನಿವಾಸ ಜೋಯಿಸರು (ವ್ಯಕ್ತಿಚಿತ್ರ) | ಎನ್. ಸೂರಪ್ಪ | ಕತೆಗಾರ ೧೯೫೭ |
| • ಹುಲ್ಲೂರು ಶ್ರೀನಿವಾಸ ಜೋಯಿಸರು ಮತ್ತು ಚಿತ್ರದುರ್ಗದ ಇತಿಹಾಸ | ಲಕ್ಷ್ಮಣ್ ತೆಲಗಾವಿ | ಚಂದ್ರವಳ್ಳಿ<br>(ಪುಸ್ತಕ)<br>ಚಿತ್ರದುರ್ಗ, ೧೯೭೬ |
| • ಚಿತ್ರದುರ್ಗದ ಇತಿಹಾಸ ಮತ್ತು ಸ್ಥಳೀಯ ಲೇಖಕರು | ಲಕ್ಷ್ಮಣ್ ತೆಲಗಾವಿ | ತರಳಬಾಳು ನವೆಂ<br>ಡಿಸೆಂ. ೧೯೮೧<br>ಜನವರಿ ೧೯೮೨ |

| | | |
|---|---|---|
| • ಚಿತ್ರದುರ್ಗದ ಬೆಟ್ಟ (೧೯೧೯) ಮತ್ತು ನಾಯಕ ಸಾಮ್ರಾಜ್ಯ (೧೯೨೦) | ಪಿ. ಕೃಷ್ಣರಾವ್ | ಬೆಂಗಳೂರು<br>೨೪-೧೨-೧೯೫೬ |
| • ಚಿತ್ರದುರ್ಗ ಪ್ರಾಚ್ಯವಸ್ತು ಸಂಗ್ರಹಾಲಯ | ? | ಜನ ವಾಹಿನಿ<br>ಕನ್ನಡ ದಿನಪತ್ರಿಕೆ<br>ಚಿತ್ರದುರ್ಗ<br>೬-೧೧-೧೯೯೩ |
| • ಚಿತ್ರದುರ್ಗ ಪ್ರಾಚ್ಯವಸ್ತು ಸಂಗ್ರಹಾಲಯ | ಷಣ್ಮುಖ ಕೋಳಿವಾಡ | ಸಂಯುಕ್ತ<br>ಕರ್ನಾಟಕ<br>೨೬-೧೧-೧೯೯೩ |
| • ಚಿತ್ರದುರ್ಗ ಬಖೈರು (ಮೊದಲಮಾತು) | ಡಾ|| ಜಿ. ವರದರಾಜರಾವ್ | ಮೈಸೂರು, ೧೯೬೮ |
| • ನಾಕಂಡ ಚಿತ್ರದುರ್ಗದ ಹಲವು ಸಾಹಿತ್ಯ ಸೇವಕರು (ಕೆಲವು ನೆನಪುಗಳು) | ಹುಲ್ಲೂರು ಪಾಂಡುರಂಗ ಜೋಯಿಸ್ | ಸತ್ಯಶುದ್ಧ ಕಾಯಕ<br>ಮಾರ್ಚ್-ಆಗಸ್ಟ್<br>೧೯೯೩ |
| • ಮನ-ಮುದ್ರೆ | ಚಿರಂಜೀವಿ | ತುಷಾರ, ಜನವರಿ<br>೧೯೯೩ |
| • ಸೋಮಣ್ಣನ 'ಸ್ಟಾಕ್'ನಿಂದ | ಎಚ್. ಜಿ. ಸೋಮಶೇಖರ ರಾವ್ | ಬೆಂಗಳೂರು<br>೨೦೦೧ |
| • ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು - ದ್ವಿತೀಯ ಸಂಪುಟ | ಸಂ.: ಡಾ. ಸೂರ್ಯನಾಥ ಕಾಮತ್ | ಬೆಂಗಳೂರು<br>೧೯೮೮ |
| • ಹಂಸಗೀತೆ (ಮುನ್ನುಡಿ) | ತರಾಸು | ೧೯೫೨ |
| • ಹಿಂದಿನ ನೆನಪುಗಳು (ಲೇಖನಮಾಲೆ-೧) | ಸಿದ್ದವ್ವನಹಳ್ಳಿ ಕೃಷ್ಣಶರ್ಮ | ಸಂಯುಕ್ತ<br>ಕರ್ನಾಟಕ<br>೧೫-೨-೧೯೮೦ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು - ಮುನ್ನುಡಿ | ಬಿ.ವಿ. ವೈಕುಂಠರಾಜು | ಚಿತ್ರದುರ್ಗ ೧೯೮೬ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು - ಪೀಠಿಕೆ | ಲಕ್ಷ್ಮಣ್ ತೆಲಗಾವಿ<br>ಎಂ.ವಿ. ಶ್ರೀನಿವಾಸ್ | ಚಿತ್ರದುರ್ಗ ೧೯೮೬ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು - ಅಧ್ಯಕ್ಷರ ಮಾತು | ಬಿ.ವಿ. ವೈಕುಂಠರಾಜು | ಚಿತ್ರದುರ್ಗ ೧೯೯೫ |
| • ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನ ಲೇಖನಗಳು - ಸಂಪಾದಕರ ಮಾತು | ಲಕ್ಷ್ಮಣ್ ತೆಲಗಾವಿ,<br>ಎಂ.ವಿ. ಶ್ರೀನಿವಾಸ್ | ಚಿತ್ರದುರ್ಗ ೧೯೯೫ |
| • ಹುಲ್ಲೂರು ಜೋಯಿಸರ ವಂಶವಾಹಿ (ಹುಲ್ಲೂರು ಶ್ರೀನಿವಾಸ ಜೋಯಿಸರ | ಎಚ್.ಎಸ್. ಪಾಂಡುರಂಗ | ಚಿತ್ರದುರ್ಗ |

| | | |
|---|---|---|
| ಜನ್ಮ ಶತಾಬ್ದಿ ನೆನಪಿನ ಪ್ರಕಟಣೆ) | ಜೋಯಿಸ್ | ೧೯೯೫ |
| • Hullur Srinivas Jois: Freedom Fighter and Doyen of Historical Research | Laxman Telagavi | March of Karnataka Jan. 1991 |